ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಸ್ವಾತಂತ್ರ್ಯ ಅಮೃತ ಮಹೋತ್ಸವ ಪುಸ್ತಕ ಮಾಲೆ

## ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ

# ರಾಮನಗರ

ಪ್ರಧಾನ ಸಂಪಾದಕರು

**ಡಾ. ಬಿ.ವಿ. ವಸಂತಕುಮಾರ್**

ಸಂಪಾದಕರು

**ನರೇಂದ್ರಕುಮಾರ್ ಎಸ್.ಎಸ್.**

ಲೇಖಕರು

**ಎಸ್. ಶರತ್‌ಚಂದ್ರ**

**ಕರ್ನಾಟಕ ಸಾಹಿತ್ಯ ಅಕಾಡೆಮಿ**

ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು-೫೬೦ ೦೦೨

ದೂರವಾಣಿ: ೦೮೦-೨೨೨೧೧೮೩೦ / ೨೨೧೦೬೪೬೦

www.karnatakasahithyaacademy.org

ಇ-ಮೇಲ್: sahithya.academy@gmail.com

**RAMANAGARA:** An Introducing Book on the Places in Karnataka that Played a Major Role in the Freedom Struggle, Written by S. Sharatchandra, Published by Kariyappa N., Registrar, Karnataka Sahithya Academy, Kannada Bhavana, J.C. Road, Bengaluru-560002.

ಹಕ್ಕು: ಕರ್ನಾಟಕ ಸಾಹಿತ್ಯ ಅಕಾಡೆಮಿ

**ಪ್ರಧಾನ ಸಂಪಾದಕರು**
ಡಾ. ಬಿ.ವಿ. ವಸಂತಕುಮಾರ್
ಅಧ್ಯಕ್ಷರು, ಕರ್ನಾಟಕ ಸಾಹಿತ್ಯ ಅಕಾಡೆಮಿ

**ಸಂಪಾದಕ ಮಂಡಳಿ**
ಡಾ. ಎಸ್. ಜಿ. ರಾಮದಾಸ ರೆಡ್ಡಿ
ಡಾ. ಮೃತ್ಯುಂಜಯ ರುಮಾಲೆ
ಶ್ರೀ ನರೇಂದ್ರಕುಮಾರ್ ಎಸ್.ಎಸ್.
ಡಾ. ಪ್ರಕಾಶ ಗ. ಖಾಡೆ
ಶ್ರೀಮತಿ ಕೋಡಿಬೆಟ್ಟು ರಾಜಲಕ್ಷ್ಮಿ

**ಲೇಖಕರು**
ಎಸ್. ಶರತ್‌ಚಂದ್ರ

ಮೊದಲ ಮುದ್ರಣ: ೨೦೨೨
ಪ್ರತಿಗಳು: ೧೦೦೦
ಬೆಲೆ: ರೂ. ೩೦/–
ಪುಟ: ೭೨


ಮುಖಪುಟ ಚಿತ್ರ: ಮುರಳೀಧರ ವಿ. ರಾಥೋಡ್

ಪ್ರಕಾಶಕರು:
ಕರಿಯಪ್ಪ ಎನ್., ರಿಜಿಸ್ಟ್ರಾರ್
ಕರ್ನಾಟಕ ಸಾಹಿತ್ಯ ಅಕಾಡೆಮಿ

ಮುದ್ರಕರು
**ರಶ್ಮಿ ಪ್ರಿಂಟರ್ಸ್**
ಸುಧಾಮನಗರ, ಬೆಂಗಳೂರು
ಮೊ: ೯೯೦೧೯೧೬೫೪೧

**ಬಸವರಾಜ ಬೊಮ್ಮಾಯಿ**
ಮುಖ್ಯಮಂತ್ರಿ

ವಿಧಾನಸೌಧ
ಬೆಂಗಳೂರು–560 001



## ಶುಭ ಸಂದೇಶ

ಭಾರತ ಸ್ವಾತಂತ್ರ್ಯದ ಅಮೃತ ಮಹೋತ್ಸವ ಸಂದರ್ಭದಲ್ಲಿ ದೇಶದಾದ್ಯಂತ ದೇಶಪ್ರೇಮವನ್ನು ಬೆಳೆಸುವ ಸಾವಿರಾರು ಕಾರ್ಯಕ್ರಮಗಳು ನಡೆಯುತ್ತಿರುವ ಹೊತ್ತಿನಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಕರ್ನಾಟಕದ ೩೧ ಜಿಲ್ಲೆಗಳಲ್ಲಿ ಭಾರತ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿರುವ ೭೫ ಸ್ಥಳಗಳನ್ನು ಗುರುತಿಸಿ, ೭೫ ಪುಸ್ತಕಗಳನ್ನು ಹೊರತರುತ್ತಿರುವುದು ಸಂತೋಷದ ವಿಚಾರ.

ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಕರ್ನಾಟಕದ ಕೊಡುಗೆ ಬಹಳ ಮಹತ್ವದ್ದು. ಕರ್ನಾಟಕದ ಹಲವು ಮಹನೀಯರು ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕಾಗಿ ನಡೆಸಿದ ತ್ಯಾಗ ಬಲಿದಾನಗಳು ಅಪಾರ. ಅಂತೆಯೇ ಕರ್ನಾಟಕದ ಸಾವಿರಾರು ಸ್ಥಳಗಳು ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿ ನಿಂತಿವೆ. ವಿದುರಾಶ್ವತ್ಥ, ಈಸೂರು, ಶಿವಪುರಗಳನ್ನೂ ಒಳಗೊಂಡಂತೆ ಕರ್ನಾಟಕದ ೩೧ ಜಿಲ್ಲೆಗಳ ಸಾವಿರಾರು ಸ್ಥಳಗಳಲ್ಲಿ ಭಾರತದ ಸ್ವಾತಂತ್ರ್ಯ ಸಂಗ್ರಾಮವು ನಡೆದುದಕ್ಕೆ ಸಾಕ್ಷಿಯಾಗಿ ಹಲವಾರು ಕುರುಹುಗಳು, ಅವಶೇಷಗಳು, ಸ್ಮಾರಕಗಳು ಇತಿಹಾಸದ ಪುಟಗಳಲ್ಲಿ ದಾಖಲಾಗಿವೆ. ಆದಾಗ್ಯೂ ಇನ್ನೂ ದಾಖಲಾಗಬೇಕಾದ ಸಂಗತಿಗಳು ಉಳಿದಿವೆ. ಭಾರತ ಸ್ವಾತಂತ್ರ್ಯದ ಅಮೃತೋತ್ಸವದ ಸಂದರ್ಭದಲ್ಲಿ ಈ ಎಲ್ಲ ಅಂಶಗಳನ್ನು ದಾಖಲಿಸುವ ಕೆಲಸ ತುರ್ತಾಗಿ ಆಗಬೇಕಾಗಿದೆ.

ಭಾರತ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿರುವ ಕರ್ನಾಟಕದ ವಿವಿಧ ಸ್ಥಳದಲ್ಲಿ ನಡೆದ ಘಟನೆಗಳು, ತ್ಯಾಗ, ಬಲಿದಾನಗಳು, ಹೋರಾಟಗಳು ಇತ್ಯಾದಿ

ವಿವರಗಳೆಲ್ಲವನ್ನೂ ಪುಸ್ತಕ ರೂಪದಲ್ಲಿ ದಾಖಲಿಸುವ ಮೂಲಕ, ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕರ್ನಾಟಕದ ಕೊಡುಗೆಯ ಮೇಲೆ ಬೆಳಕು ಚೆಲ್ಲುವ ಪ್ರಯತ್ನವನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿ ಮಾಡಿದೆ. ಇದು ನಿಜಕ್ಕೂ ಒಂದು ಸಂಶೋಧನಾತ್ಮಕ ಪ್ರಯತ್ನವೇ ಸರಿ.

ಈ ಸಾರ್ಥಕ ಕಾರ್ಯವನ್ನು ಯಶಸ್ವಿಗೊಳಿಸಿದ ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷರು ಹಾಗೂ ಬಳಗದವರನ್ನು ನಾನು ಮನಃಪೂರ್ವಕವಾಗಿ ಅಭಿನಂದಿಸುತ್ತೇನೆ.

ಎಲ್ಲರಿಗೂ ಭಾರತ ಸ್ವಾತಂತ್ರ್ಯ ಅಮೃತ ಮಹೋತ್ಸವದ ಶುಭಾಶಯಗಳು.

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ
ಕರ್ನಾಟಕ ಸರ್ಕಾರ

**ವಿ ಸುನಿಲ್ ಕುಮಾರ್**

ಇಂಧನ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು



## ಶುಭ ಸಂದೇಶ

**'ಜಯ ಭಾರತ ಜನನಿಯ ತನುಜಾತೆ, ಜಯ ಹೇ ಕರ್ನಾಟಕ ಮಾತೆ'**


ಜಗತ್ತಿನಲ್ಲಿ ಭಾರತ ಒಂದು ವಿಶಿಷ್ಟವಾದ ಮಹತ್ವದ ರಾಷ್ಟ್ರ. ವಿಶ್ವಕ್ಕೆ ವಿಶ್ವಮಾನವನನ್ನು, ವಿಶ್ವಕುಟುಂಬವನ್ನು, ವಿಶ್ವನಾಥನನ್ನು, ಜಗನ್ಮಾತೆಯನ್ನು ನೀಡಿರುವ ಆಧ್ಯಾತ್ಮದ ಪುಣ್ಯಭೂಮಿ. ವೇದ, ಉಪನಿಷತ್ತುಗಳ ಕಾಲದಿಂದ ಹಿಡಿದು, ರಾಮ, ಕೃಷ್ಣ, ಶಿವ, ಬುದ್ಧ, ಬಸವ, ಗಾಂಧಿ, ಅಂಬೇಡ್ಕರ್, ಮೈತ್ರೇಯಿ, ಗಾರ್ಗಿ, ಅರುಂಧತಿ, ಸೀತೆ, ಮಂಡೋದರಿ, ಮೀರಾ, ಅಕ್ಕಮಹಾದೇವಿ ಮೊದಲಾದ ಪೌರಾಣಿಕ, ಐತಿಹಾಸಿಕ ವ್ಯಕ್ತಿತ್ವಗಳ ಅಂತಃಶಕ್ತಿಯಿಂದ ಜಗತ್ತನ್ನು ಬೆಳಗಿದ ದೇಶ ಭಾರತ. ಇಂಥ ದೇಶದ ಮೇಲೆ ಅಲೆಗ್ಸಾಂಡರನಿಂದ ಹಿಡಿದು ಮೊಘಲರಾದಿಯಾಗಿ ಬ್ರಿಟಿಷರವರೆಗೆ ಆಕ್ರಮಣ ಮಾಡಲು ಪ್ರಯತ್ನಿಸಿ, ಸೋತು ಭಾರತೀಯ ಸಂಸ್ಕೃತಿಯ ಅಗಾಧತೆಗೆ ಶರಣಾಗಿ ಭಾರತೀಯರೇ ಆಗಿಹೋಗಿದ್ದಾರೆ. ಹಾಗೇ ಭಾರತವನ್ನು ಭಾರತವನ್ನಾಗಿ ಉಳಿಸಿರುವ ಮಹಾನ್ ಶಕ್ತಿಯೇ ಸ್ವಾತಂತ್ರ್ಯದ ತೀವ್ರ ತುಡಿತ.

ಭಾರತದ ಸ್ವಾತಂತ್ರ್ಯ ಸಂಗ್ರಾಮ ಸುಮಾರು ಮುನ್ನೂರು ವರ್ಷಗಳಿಗೂ ಹಳೆಯದು. ಇಡೀ ಭಾರತವೇ ಬ್ರಿಟಿಷರ ವಿರುದ್ಧ ಹೋರಾಡಿ ದಾಸ್ಯದಿಂದ ಮುಕ್ತವಾಗಿ ಸ್ವಾತಂತ್ರ್ಯವನ್ನು ಪಡೆದುಕೊಂಡು ಈಗ ೭೫ ವರ್ಷಗಳಾಗಿವೆ. ಈ ಸ್ವಾತಂತ್ರ್ಯದ ಅಮೃತ ಮಹೋತ್ಸವ ಸಂದರ್ಭವನ್ನು ಅರ್ಥಪೂರ್ಣವಾಗಿ ಆಚರಿಸಬೇಕಾದ್ದು ನಮ್ಮೆಲ್ಲರ ಕರ್ತವ್ಯ.

ಇಡೀ ದೇಶವನ್ನೇ ಜಾಗೃತಗೊಳಿಸಿದ ಭಾರತದ ಸ್ವಾತಂತ್ರ್ಯ ಸಂಗ್ರಾಮ,

ನಮ್ಮ ಕರ್ನಾಟಕದಲ್ಲಿಯೂ ಸಹ ಸ್ವಾತಂತ್ರ್ಯ ಸಂಗ್ರಾಮದ ಪಾಂಚಜನ್ಯವನ್ನು ಮೊಳಗಿಸಿತು. ಕರ್ನಾಟಕದ ಕಲಿಗಳು ಸ್ವಾತಂತ್ರ್ಯ ಹೋರಾಟಕ್ಕೆ ಧುಮುಕಿ, ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ವಿಶಿಷ್ಟ ಕೊಡುಗೆ ನೀಡಿರುವುದನ್ನು ಸ್ಮರಿಸಬೇಕಿದೆ. ಕರ್ನಾಟಕದಲ್ಲಿ ಸಾವಿರಾರು ಸ್ವಾತಂತ್ರ್ಯ ಹೋರಾಟದ ಘಟನೆಗಳನ್ನು ಸಾರುವ ಐತಿಹಾಸಿಕ ಸ್ಥಳಗಳಿವೆ. ಅಂಥ ಸ್ಥಳಗಳು ಅರಿವಿಗೆ ಬಾರದೆ ಮರೆಯಾಗಿ ಹೋಗುತ್ತಿವೆ. ಸ್ವಾತಂತ್ರ್ಯದ ಹಣತೆ ಹೊತ್ತಿಸಿದ ಪ್ರಮುಖ ಸ್ಥಳಗಳಲ್ಲಿ ತ್ಯಾಗ, ಬಲಿದಾನಗಳನ್ನು ನೆನಪಿಸುವ ನಿಟ್ಟಿನಲ್ಲಿ ಮತ್ತು ಇಂದಿನ ಪೀಳಿಗೆಗೆ ತಿಳಿಸಿಕೊಡುವ ಕೆಲಸ ಈ ಅಮೃತ ಮಹೋತ್ಸವದ ಸಂದರ್ಭದಲ್ಲಿ ಆಗುತ್ತಿರುವುದು ಸಂತಸದ ವಿಷಯ. ಈ ನಿಟ್ಟಿನಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಒಂದು ಬೃಹತ್ ಆಂದೋಲನವನ್ನು ಹಮ್ಮಿಕೊಂಡಿದೆ. ಅದರ ಅಂಗವಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕರ್ನಾಟಕದ ಐತಿಹಾಸಿಕ ಮಹತ್ವಗಳನ್ನು ತಿಳಿಸಿಕೊಡುವ ೭೫ ಸ್ಥಳಗಳ ಬಗ್ಗೆ ೭೫ ವಿವಿಧ ಲೇಖಕರಿಂದ ಒಟ್ಟು ೭೫ ಪುಸ್ತಕಗಳನ್ನು, ಅದರ ತಲಾ ೧೦೦೦ ಪ್ರತಿಯಂತೆ ೭೫೦೦೦ ಪ್ರತಿಗಳನ್ನು ಎರಡು ತಿಂಗಳಲ್ಲಿ ಬರೆಯಿಸಿ, ಮುದ್ರಿಸಿ ಓದುಗರಿಗೆ ತಲುಪಿಸುತ್ತಿರುವುದು ನಿಜಕ್ಕೂ ಹೆಮ್ಮೆಯ ವಿಷಯ. ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪ್ರತಿಯೊಬ್ಬರನ್ನೂ ಈ ಸಂದರ್ಭದಲ್ಲಿ ಅಭಿನಂದಿಸುತ್ತೇನೆ.

ನಾವೆಲ್ಲರೂ ಕೂಡಿ ನಮ್ಮ ನಮ್ಮ ಮನೆಮನಗಳಿಂದ ನಾಡು, ನುಡಿ, ಸಾಹಿತ್ಯ, ಸಂಸ್ಕೃತಿ, ಪರಂಪರೆಗಳನ್ನು ಬೆಳೆಸೋಣ. ರಸಋಷಿ ಕುವೆಂಪು ಅವರು ಹೇಳಿರುವ 'ಜಯ ಭಾರತ ಜನನಿಯ ತನುಜಾತೆ, ಜಯ ಹೇ ಕರ್ನಾಟಕ ಮಾತೆ' ಎಂಬ ಆದರ್ಶದೊಂದಿಗೆ ಕರ್ನಾಟಕದ ಮೂಲಕ ಭಾರತವನ್ನೂ, ಭಾರತದ ಮೂಲಕ ಕರ್ನಾಟಕವನ್ನೂ ಅಭಿನ್ನಗೊಳಿಸೋಣ, ಬಲಿಷ್ಠಗೊಳಿಸೋಣ. ಭವ್ಯ ಕರ್ನಾಟಕ, ಭವ್ಯ ಭಾರತ ನಿರ್ಮಿಸೋಣ.



**(ವಿ ಸುನಿಲ್ ಕುಮಾರ್)**
ಇಂಧನ, ಕನ್ನಡ ಮತ್ತು ಸಂಸ್ಕೃತಿ
ಇಲಾಖೆ ಸಚಿವರು

## ಪ್ರಧಾನ ಸಂಪಾದಕರ ಮಾತು

ಸ್ವಾತಂತ್ರ್ಯ ಎಂಬುದು ಲೌಕಿಕವಾಗಿಯೂ ಲೋಕೋತ್ತರವಾಗಿಯೂ ಮಹೋನ್ನತವಾದ ಮೌಲ್ಯ. ಭಾರತೀಯ ಸಂಸ್ಕೃತಿಯು ಧರ್ಮ, ಅರ್ಥ, ಕಾಮ, ಮೋಕ್ಷಗಳನ್ನು ಪುರುಷಾರ್ಥವೆಂದು ಕರೆದಿದೆ. ಮೋಕ್ಷವೆಂದರೆ ಬಿಡುಗಡೆ, ಸ್ವಾತಂತ್ರ್ಯ ಎಂದರ್ಥ. ಹುಟ್ಟು ಸಾವುಗಳಿಂದ ಬಿಡುಗಡೆ ಎಂಬುದು ಲೋಕೋತ್ತರವಾದ ಅರ್ಥವಾದರೆ, ಸಾವಿಲ್ಲದ, ನೋವಿಲ್ಲದ ಸ್ಥಿತಿಗಾಗಿ ಕಲ್ಯಾಣ ನಾಡಿನ ನಿರ್ಮಾಣಕ್ಕಾಗಿ ನಾವು ಗಳಿಸುವ ನಮ್ಮ ಸ್ವಯಂ ನಿಯಂತ್ರಣದ ಸ್ವಾತಂತ್ರ್ಯ ಎಂಬುದು ಲೌಕಿಕವಾದ ಅರ್ಥ. ಲೌಕಿಕ ಹಾಗೂ ಅಲೌಕಿಕಗಳು ಪರಸ್ಪರ ವಿರೋಧಿಗಳಲ್ಲ; ಅವು ಪರಸ್ಪರ ಪೂರಕವಾದವು. ಲೋಕವನ್ನು ಲೋಕೋತ್ತರದ ಔನ್ನತ್ಯಕ್ಕೆ ಏರಿಸುವ ದರ್ಶನವೇ ಭಾರತೀಯ ದರ್ಶನ. ಸ್ವಾತಂತ್ರ್ಯ ನಮ್ಮ ಧರ್ಮ, ನಮ್ಮ ಆತ್ಮ, ನಮ್ಮ ಜೀವನದ ಪರಮ ಪುರುಷಾರ್ಥ. ಅದನ್ನು ಬಯಲು ಎಂದೂ ಕರೆದಿದ್ದಾರೆ. ಅಂತಹ ಸ್ವಾತಂತ್ರ್ಯಕ್ಕಾಗಿ ಭಾರತವು ತನ್ನ ಪುರಾತನ ಕಾಲದಿಂದಲೂ ಬದುಕುತ್ತಾ ಬಂದಿದೆ. ಸ್ವಾತಂತ್ರ್ಯಕ್ಕೆ ಚ್ಯುತಿ ಬಂದಾಗಲೆಲ್ಲ ಭಾರತೀಯರು ಭರತಮಾತೆಯ ಪದತಲದಲ್ಲಿ ತಮ್ಮ ತನು–ಮನ–ಧನಗಳನ್ನು ಅರ್ಪಿಸಿದ್ದಾರೆ. ಅದನ್ನು ರಸಋಷಿ ಕುವೆಂಪು ಅವರು "ಇಂದು ರಕ್ತದ ಬಿಂದು ನಾಳೆ ಸೌಖ್ಯದ ಸಿಂಧು" ಎಂದು ಕರೆದಿದ್ದಾರೆ.

ನಮ್ಮ ದೇಶದ ಸ್ವಾತಂತ್ರ್ಯ ಎಂದರೆ ಅದು ತ್ಯಾಗ, ಬಲಿದಾನಗಳ ಫಲ. ಭಾರತದ ಮೇಲೆ ದಾಳಿ ಮಾಡಲು ಬಂದ ಅಲೆಗ್ಸಾಂಡರನಿಂದ ಹಿಡಿದು ಮೊಘಲರಾದಿಯಾಗಿ ಬ್ರಿಟಿಷರವರೆಗಿನ ಎಲ್ಲ ದಾಳಿಕೋರರ ಕ್ರೌರ್ಯವನ್ನು ಮೆಟ್ಟಿ ನಿಂತು ಭಾರತೀಯರು ಭಾರತಾಂಬೆಯ ಆತ್ಮಗೌರವವನ್ನು ಎತ್ತಿಹಿಡಿದಿರುವುದರ ಪ್ರತೀಕ ನಮ್ಮ ಸ್ವಾತಂತ್ರ್ಯ.

ಪ್ರಸ್ತುತ ೧೫.೦೮.೧೯೪೭ ರಂದು ನಾವು ಗಳಿಸಿದ ಸ್ವಾತಂತ್ರ್ಯದ ಅಮೃತಫಳಿಗೆಗೆ ಇದೀಗ ೧೫.೦೮.೨೦೨೧ಕ್ಕೆ ೭೫ನೆಯ ಸ್ವಾತಂತ್ರ್ಯ ಅಮೃತ ಮಹೋತ್ಸವ ಸಂಭ್ರಮ. ೧೫.೦೮.೨೦೨೨ಕ್ಕೆ ೭೫ ವರ್ಷಗಳನ್ನು ಪೂರೈಸಿ ೭೬ನೆಯ ಸ್ವಾತಂತ್ರ್ಯೋತ್ಸವದ ಆತ್ಮನಿರ್ಭರ ಭಾರತದ ನವನಿರ್ಮಾಣದ ಅವಕಾಶಗಳ ಸಂಭ್ರಮ. ಈ ಒಂದು ವರ್ಷ ಕಾಲ ಭಾರತ ಸರ್ಕಾರ, ಕರ್ನಾಟಕ ಸರ್ಕಾರ "ಸ್ವಾತಂತ್ರ್ಯದ ಅಮೃತ ಮಹೋತ್ಸವ"ವನ್ನು ಆಚರಿಸುತ್ತಿದೆ. ಅದರ ಅಂಗವಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಆಗಸ್ಟ್– ೨೦೨೧ರ ತಿಂಗಳು ಪೂರ್ತಿ "ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ" ಎಂಬ ಹೆಸರಿನಲ್ಲಿ ಕರ್ನಾಟಕದ ಎಲ್ಲ ಜಿಲ್ಲೆಗಳಲ್ಲಿ ನಡೆದಿರುವ ಸ್ವಾತಂತ್ರ್ಯ ಹೋರಾಟ ಕುರಿತ ಆನ್ಲೈನ್ ಉಪನ್ಯಾಸಗಳನ್ನು ನಡೆಸಿದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಾನ್ಯ ಸಚಿವರಾದ ಶ್ರೀ ಸುನಿಲ್ ಕುಮಾರ್ ಅವರು ಸ್ವಾತಂತ್ರ್ಯದ ಅಮೃತ ಮಹೋತ್ಸವವನ್ನು ರಾಜ್ಯಾದ್ಯಂತ ಬೃಹತ್ ಸ್ವರೂಪದಲ್ಲಿ ಅರ್ಥಪೂರ್ಣವಾಗಿ ಆಚರಿಸಬೇಕೆಂದು ತೀರ್ಮಾನಿಸಿದ್ದಾರೆ. ಅವರಿಗೆ ರಾಜ್ಯದ ೭೫ ಸ್ಥಳಗಳಲ್ಲಿ ೭೫ ಸ್ವಾತಂತ್ರ್ಯ ಜಾಥಾಗಳು ನಡೆಯಬೇಕು, ಎಲ್ಲ ಜಿಲ್ಲೆಗಳಿಂದ ರಥಯಾತ್ರೆ ಆಗಬೇಕು, ಬೆಂಗಳೂರು ಮಹಾನಗರದಲ್ಲಿ ಮೂರು ದಿನಗಳ ಸಮಾವೇಶ, ಪ್ರದರ್ಶನಿ, ಪುಸ್ತಕ ಮಾರಾಟ ಮೊದಲಾದ ಹತ್ತು ಹಲವು ಚಟುವಟಿಕೆಗಳನ್ನು ನಡೆಸುವ ಮೂಲಕ ಹೊಸ ತಲೆಮಾರಿಗೆ ಸ್ವಾತಂತ್ರ್ಯದ ಅಮೃತವನ್ನುಣಿಸಬೇಕೆಂಬ ಕನಸಿದೆ. ಅದರ ಭಾಗವಾಗಿ ಅವರು ರಾಜ್ಯದ ೭೫ ಸ್ವಾತಂತ್ರ್ಯ ಹೋರಾಟದ ಸ್ಥಳಗಳನ್ನು ಗುರುತಿಸಿ ೭೫ ಕಿರುಹೊತ್ತಿಗೆಗಳನ್ನು ಬರೆಸಿ ಪ್ರಕಟಿಸುವ ಜವಾಬ್ದಾರಿಯನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿಗೆ ವಹಿಸಿದ್ದಾರೆ. ನಮಗೆ ಜವಾಬ್ದಾರಿ ವಹಿಸಿದ್ದು ದಿನಾಂಕ: ೩೦.೧೧.೨೦೨೧ರಂದು ಮಾನ್ಯ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ. ಅಂದಿನಿಂದಲೇ ಕಾರ್ಯಪ್ರವೃತ್ತರಾದ ನಾವು ರಾಜ್ಯದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಎಲ್ಲ ಜಿಲ್ಲಾ ಸಹಾಯಕ ನಿರ್ದೇಶಕರಿಂದ ಸ್ಥಳಗಳ ಮಾಹಿತಿ ಪಡೆದೆವು. ಜೊತೆಗೆ ರಾಜ್ಯದ ಐದು ಜನರನ್ನು ಸಂಪಾದಕರನ್ನಾಗಿ ನಿಯೋಜಿಸಿ ದಿನಾಂಕ: ೦೩.೧೨.೨೦೨೧ರಂದು ಅಕಾಡೆಮಿಯಲ್ಲಿ ಸಂಪಾದಕರ ಸಭೆ ನಡೆಸಿದೆವು. ಸಂಪಾದಕರಾಗಿ ಡಾ. ಮೃತ್ಯುಂಜಯ ರುಮಾಲೆ, ಹೊಸಪೇಟೆ, ಡಾ. ಎಸ್. ಜಿ. ರಾಮದಾಸ ರೆಡ್ಡಿ, ಮೈಸೂರು, ಡಾ. ಪ್ರಕಾಶ ಗ. ಖಾಡೆ, ಬಾಗಲಕೋಟೆ,



ಶ್ರೀ ನರೇಂದ್ರಕುಮಾರ್ ಎಸ್.ಎಸ್., ಬೆಂಗಳೂರು ಹಾಗೂ ಶ್ರೀಮತಿ ರಾಜಲಕ್ಷ್ಮಿ ಕೋಡಿಬೆಟ್ಟು, ಮಂಗಳೂರು ಇವರೊಂದಿಗೆ ಎಲ್ಲ ಸ್ಥಳಗಳ ಬಗ್ಗೆ ಚರ್ಚಿಸಿ ೭೫ ಸ್ಥಳಗಳನ್ನು ಆಯ್ಕೆ ಮಾಡಿದೆವು. ಒಬ್ಬೊಬ್ಬ ಸಂಪಾದಕರಿಗೆ ೧೫ ಸ್ಥಳಗಳನ್ನು ಹಂಚಿ, ೧೫ ಲೇಖಕರಿಂದ ೧೫ ಕಿರುಪುಸ್ತಕಗಳನ್ನು ಬರೆಯಿಸಿಕೊಡುವ ಜವಾಬ್ದಾರಿ ನೀಡಿದೆವು. ಎರಡು ತಿಂಗಳ ಅವಧಿಯಲ್ಲಿ ಈ ೭೫ ಪುಸ್ತಕಗಳು ಪ್ರಕಟವಾಗುತ್ತಿವೆ. ಈ ಕೃತಿಗಳು ಇತಿಹಾಸದ ಶಾಸ್ತ್ರೀಯ ಮಾದರಿ, ವರದಿಯ ಕಥನ ಮಾದರಿ ಹಾಗೂ ಸೃಜನಶೀಲ ಅಭಿವ್ಯಕ್ತಿಯ ಸಾಹಿತ್ಯ ಮಾದರಿಗಳಿಂದ ಕೂಡಿರುವುದು ಗಮನಾರ್ಹ. ಅತೀ ಕಡಿಮೆ ಅವಧಿಯಲ್ಲಿ ಕ್ಷೇತ್ರಕಾರ್ಯ ಮತ್ತು ಅಧ್ಯಯನ ಮಾಡಿ ಮೌಲಿಕವಾದ ಕೃತಿಗಳನ್ನು ಬರೆದುಕೊಟ್ಟಿರುವ ಎಲ್ಲಾ ಲೇಖಕರ, ಸಂಪಾದಕರ ಶ್ರಮ ಸಾರ್ಥಕತೆ ಪಡೆದಿದೆ. ಈ ನಿಟ್ಟಿನ ಅಧ್ಯಯನಗಳಿಗೆ ಈ ಕೃತಿಗಳು ಪ್ರೇರೇಪಿಸುತ್ತವೆ. ಇದೊಂದು ತುರ್ತಾದ ಆಂದೋಲನಾತ್ಮಕವಾದ ಪ್ರಯತ್ನ. ಇದಕ್ಕೆ ಸಂಪೂರ್ಣ ಸಹಕಾರ ನೀಡಿದ ಮಾನ್ಯ ಸಚಿವರಾದ ಶ್ರೀ ವಿ ಸುನಿಲ್ ಕುಮಾರ್ ಅವರಿಗೆ, ಎಲ್ಲಾ ಸಂಪಾದಕರಿಗೆ, ಎಲ್ಲಾ ಲೇಖಕರಿಗೆ, ಇಲಾಖೆಯ ಕಾರ್ಯದರ್ಶಿಗಳಾದ ಡಾ. ಎನ್. ಮಂಜುಳಾ ಅವರಿಗೆ, ನಿರ್ದೇಶಕರಾದ ಶ್ರೀ ಎಸ್. ರಂಗಪ್ಪ ಅವರಿಗೆ, ಜಂಟಿ ನಿರ್ದೇಶಕರಾದ ಶ್ರೀ ಅಶೋಕ್ ಎನ್. ಚಲವಾದಿ ಅವರಿಗೆ ಹಾಗೂ ಎಲ್ಲಾ ಅಧಿಕಾರಿ ವರ್ಗಕ್ಕೆ ಸಾಹಿತ್ಯ ಅಕಾಡೆಮಿಯ ಸರ್ವ ಸದಸ್ಯರಿಗೆ ಪ್ರೀತಿಯಿಂದ ವಂದಿಸುತ್ತೇನೆ. ಯೋಜನೆ ಪೂರ್ಣಗೊಳ್ಳಲು ವಿಶೇಷವಾಗಿ ನೆರವಾದ ಮಿತ್ರರಾದ ಶ್ರೀ ಮಾಲತೀಶ್ ಭಟ್, ಶ್ರೀ ಹರ್ಷ ನಾರಾಯಣ, ಶ್ರೀಮತಿ ನಯನಾ ಎಸ್. ಅವರನ್ನು ನೆನೆಯುತ್ತಾ ವಂದಿಸುತ್ತೇನೆ. ಕಡಿಮೆ ಅವಧಿಯಲ್ಲಿ ಹಗಲಿರುಳು ಶ್ರಮಿಸಿದ ದಣಿವರಿಯದ ದುಡಿಮೆಗಾರರಾದ ರಿಜಿಸ್ಟ್ರಾರ್ ಎನ್. ಕರಿಯಪ್ಪ, ನಮ್ಮ ಬಳಗ ವಿ. ಹರೀಶ್‌ಕುಮಾರ್, ಹರೀಶ್, ಸೈಯದ್ ಜಾವೀದ್, ಸುಚಿತ್ರ ಎಸ್. ಜಿ., ಗೋಪಾಲ ಎನ್., ಸುನೀಲ್ ಅವರಿಗೆ ಹಾಗೂ ಸುಂದರವಾಗಿ ಮುದ್ರಿಸಿದ ರಶ್ಮಿ ಪ್ರಿಂಟರ್ಸ್ ಬಳಗಕ್ಕೆ, ಮುಖಪುಟ ರಚಿಸಿಕೊಟ್ಟ ಶ್ರೀ ಮುರಳೀಧರ ವಿ. ರಾಥೋಡ್ ಅವರಿಗೆ ವಂದಿಸುತ್ತೇನೆ.

**ಬಿ. ವಿ. ವಸಂತಕುಮಾರ್**

ಅಧ್ಯಕ್ಷರು

# ಲೇಖಕರ ಮಾತು

"ಹೌದೇ? ನಮ್ಮ ತಾಲ್ಲೂಕಿನಲ್ಲಿ, ಹಳ್ಳಿಯಲ್ಲಿ ಸ್ವಾತಂತ್ರ್ಯ ಸಂಗ್ರಾಮ ನಡೆದಿತ್ತೇ?" ಎಂದು ಹಲವರು ನನ್ನನ್ನು ಕೇಳಿದ್ದಾರೆ. 'ಸ್ವಾತಂತ್ರ್ಯ ಸಂಗ್ರಾಮವೆಂದರೆ ಉತ್ತರ ಭಾರತ, ಬಂಗಾಳದಲ್ಲಿ ನಡೆದದ್ದು, ದಕ್ಷಿಣದಲ್ಲಿ ಏನೂ ಆಗಿಲ್ಲ. ಆಗಿದ್ದರೂ ಸಣ್ಣ ಪುಟ್ಟ ಸತ್ಯಾಗ್ರಹ ಮಾಡಿದ್ದರೇ ಹೊರತು ವೀರಾವೇಶದಿಂದ ಕ್ರಾಂತಿಕಾರಕ ಚಳವಳಿಗಳು ಇಲ್ಲೇನು ಆಗಿಲ್ಲ' ಎಂಬಂತಹ ತಪ್ಪು ಕಲ್ಪನೆ, ಮಾಹಿತಿ, ವದಂತಿಗಳು ಬಹುತೇಕರಲ್ಲಿ ಇದೆ. 'ರಾಮನಗರದಲ್ಲಿ/ಕ್ಲೋಸ್‌ಪೇಟೆಯಲ್ಲಿ ಸ್ವಾತಂತ್ರ್ಯ ಸಂಗ್ರಾಮ'ದ ಕುರಿತು ಪುಸ್ತಕ ರಚಿಸಬೇಕಾದಾಗ ನನಗೂ ಈ ಪ್ರಶ್ನೆ ಮೂಡಿಬಂದಿತು. ಇದು ನಮ್ಮ ಅಜ್ಞಾನ ಹಾಗೂ ನಮ್ಮ ಶಿಕ್ಷಣ ನೀತಿ ಎರಡಕ್ಕೂ ಹಿಡಿದ ಕೈಗನ್ನಡಿ ಎನ್ನಬಹುದು.

ರಾಮನಗರವು ಪುರಾಣ ಪ್ರಸಿದ್ಧ ನಗರಿ. ನಾನು ಸುಮಾರು ಮೂವತ್ತೈದು ಸಂವತ್ಸರದಿಂದ ಮೈಸೂರು-ಬೆಂಗಳೂರು ಹೆದ್ದಾರಿಯಲ್ಲಿ ಸಂಚರಿಸಿದ್ದೇನೆ. ಈ ೩ ಗಂಟೆಯ ಪ್ರಯಾಣದಲ್ಲಿ ನದಿ, ಗದ್ದೆಗಳನ್ನು ಮೀರಿ ಕಣ್ಮನಗಳನ್ನು ಸೆಳೆಯುವುದು, ರಾಮನಗರದ ಆ ಗುಡ್ಡಬೆಟ್ಟಗಳು. ಅವು ಸಾಹಸಿಗರನ್ನು ಚಾರಣಕ್ಕೆ, ಆಸ್ತಿಕರನ್ನು ದೇವಾಲಯಕ್ಕೆ, ರಸಿಕರನ್ನು ನಿಸರ್ಗದ ಸೊಬಗನ್ನು ಸವಿಯಲು ಆಹ್ವಾನಿಸುತ್ತವೆ. ಇನ್ನು ಜಾಗತೀಕರಣದೊಂದಿಗೆ ದಾಪುಗಾಲಿಡುತ್ತಿರುವ ರಾಮನಗರದ ಪಟ್ಟಣವು ಮುಂಚೆ ಇದ್ದ ಸೀಮೆಗಳನ್ನು ದಾಟಿ ಬೆಳೆಯುತ್ತಿದೆ. ಆದರೆ ಇಲ್ಲಿಯ ಇತಿಹಾಸವನ್ನು ಬಗೆದು ನೋಡಿದಾಗ ಆಗುವ ದರ್ಶನವೇ ಬೇರೆ. ತ್ರೇತಾಯುಗದಿಂದ ರಾಮಗಿರಿಯಾಗಿ, ಕೆಂಪೇಗೌಡರ ಕಾಲದಲ್ಲಿ ಕಾರ್ಖಾನೆ ಪಾಳ್ಯವಾಗಿ, ಟಿಪ್ಪುವಿನ ಕಾಲದಲ್ಲಿ ಶಂಷೇರಬಾದ್ ಆಗಿ, ದಿವಾನ್ ಪೂರ್ಣಯ್ಯನವರ ಕಾಲದಲ್ಲಿ ಕ್ಲೋಸ್‌ಪೇಟೆಯಾಗಿ, ಸ್ವತಂತ್ರ ಭಾರತದಲ್ಲಿ ರಾಮನಗರವಾಗಿದೆ. ಹೀಗೆ ರಾಮಗಿರಿಯಿಂದ ರಾಮನಗರವಾದ ಈ



ಇತಿಹಾಸದಲ್ಲಿ ಸ್ವಾಭಿಮಾನಕ್ಕೆ, ಸ್ವಾತಂತ್ರ್ಯಕ್ಕೆ ಕೆಂಪೇಗೌಡರ ಕಾಲದಿಂದ ಹಿಡಿದು ಆಂಗ್ಲರ ವಿರುದ್ಧ ಹಲವು ಯುದ್ಧ, ಕಾಳಗ, ಚಳವಳಿಗಳಾಗಿವೆ. ಇವೆಲ್ಲವನ್ನೂ ಈ ಹೊತ್ತಿಗೆಯಲ್ಲಿ ಹಿಡಿದಿಡುವ ಪ್ರಯತ್ನವನ್ನು ಮಾಡಿದ್ದೇನೆ.

ಇಂದಿನ ಸರ್ಕಾರಗಳು (ಪಕ್ಷಾತೀತ) ಜನರಿಗೆ ಹಲವಾರು ಸವಲತ್ತುಗಳನ್ನು ನೀಡುತ್ತಿವೆ. ಭಾರತದ ಕಟ್ಟಕಡೆಯ ಪ್ರಜೆಯೂ, ಜಾತಿ, ಮತ, ಲಿಂಗದ ತಾರತಮ್ಯವಿಲ್ಲದೆ ದೇಶದ ಅತ್ಯುನ್ನತ ಹುದ್ದೆಗಳನ್ನು ಅಲಂಕರಿಸಬಹುದಾದ ಅವಕಾಶವನ್ನು ಸಂವಿಧಾನವು ನೀಡಿದೆ. ಅನ್ಯಾಯವನ್ನು ವಿರೋಧಿಸಲು ಹಲವು ಮಾರ್ಗ, ಮಾಧ್ಯಮಗಳಿವೆ. ಇಂತಹ ಅವಕಾಶ, ಸವಲತ್ತುಗಳನ್ನು ಅನುಭವಿಸುವ ಸ್ವಾತಂತ್ರ್ಯ ಇರುವಾಗ, ನೂರು ವರ್ಷಗಳ ಹಿಂದಿದ್ದ ದಾಸ್ಯದ ಜೀವನ ಊಹಿಸಲಸಾಧ್ಯ. ಈ ಕಾರಣದಿಂದ ಓದುಗರಿಗೆ ಸಹಾಯವಾಗಲೆಂದು ರಾಮನಗರ ಜಿಲ್ಲೆಯ ಸಂಕ್ಷಿಪ್ತ ಇತಿಹಾಸ, ಕ್ಲೋಸ್‌ಪೇಟೆ ನಗರ ನಿರ್ಮಾಣ ಹಾಗೂ ಸ್ವಾತಂತ್ರ್ಯ ಹೋರಾಟದ ಉಗಮಕ್ಕೆ ಕಾರಣವಾದ ಸಂಗತಿಗಳನ್ನು ಹೊರತರಲು ಪ್ರಯತ್ನಿಸಿದ್ದೇನೆ. ಒಂದು ಜಾಗದ ಚರಿತ್ರೆ, ಇತಿಹಾಸ, ನದಿ-ಬೆಟ್ಟಗಳು, ಅಲ್ಲಿಯ ಜನರ ಬದುಕು-ಬವಣೆಗಳ ಪರಿಚಯವಿದ್ದಲ್ಲಿ, ಅಲ್ಲಿ ನಡೆದ ಸಂಗತಿಗಳು ಮನಸ್ಸಿಗೆ ಮುಟ್ಟುತ್ತವೆ ಎಂಬುದು ನನ್ನ ಅನಿಸಿಕೆ. ರಾಮನಗರದಲ್ಲಿದ್ದ ಪ್ರಮುಖ ಸ್ವಾತಂತ್ರ್ಯ ಸೇನಾನಿಗಳ ಪರಿಚಯವನ್ನು ಈ ಪುಸ್ತಕದಲ್ಲಿ ಕಾಣಬಹುದು. ಇನ್ನೂ ಹಲವರ ಪರಿಚಯ ಸಮಯದ ಅಭಾವದಿಂದ ತಪ್ಪಿರಬಹುದು. ಓದುಗರು ಮನ್ನಿಸಬೇಕಾಗಿ ವಿನಂತಿ.

ದಾಸ್ಯದ ಸಂಕೋಲೆಯಲ್ಲಿದ್ದ ಯುವ ಜನತೆಯನ್ನು ಉದ್ದೇಶಿಸುತ್ತ ಸ್ವಾಮಿ ವಿವೇಕಾನಂದರು ಕೇಳುತ್ತಾರೆ "ಭಾರತದ ದಾರುಣ ಪರಿಸ್ಥಿತಿ ನೋಡಿ ನಿಮ್ಮ ರಕ್ತ ಕುದಿಯುವುದಿಲ್ಲವೇ? ಅದು ನಿಮ್ಮ ನೆಮ್ಮದಿ ಕೆಡಿಸಿದೆಯೇ? ಅದಕ್ಕಾಗಿ ನೀವು ಯಾವ ತ್ಯಾಗ ಮಾಡಲೂ ಸಿದ್ಧರಿದ್ದೀರೇ? ನಿಮ್ಮ ಸರ್ವಸ್ವವೂ ಕಳೆದು, ನಿಮ್ಮವರೇ ನಿಮ್ಮೆದುರು ಕತ್ತಿ ಹಿಡಿದು ನಿಂತರೂ, ನೀವು ಸತ್ಯದ ಪರವಾಗಿ ನಿಲ್ಲಬಲ್ಲಿರೇ?" ಎಂದು. ಇಂದು ಕೂಡ ನಮ್ಮ ದೇಶದಲ್ಲಿ ಹಲವಾರು ಅನ್ಯಾಯ ಅಕ್ರಮಗಳು ನಡೆಯುತ್ತಲೇ ಇವೆ. ಆದರೆ ನಾವು ನಮ್ಮ ಸುರಕ್ಷತೆಯ, ಸುಖದ ಕೂಪದಿಂದ ಹೊರಬರಲು ಹಿಂದೇಟು ಹಾಕುತ್ತೇವೆ. ಆದರೆ

೧೦೦–೧೫೦ ವರ್ಷಗಳ ಹಿಂದೆ ದಾಸ್ಯದಲ್ಲಿ ಬದುಕಿದ್ದ, ಕಷ್ಟ ನಷ್ಟಗಳಲ್ಲಿ ಜೀವನವನ್ನು ಹೇಗೋ ಸಾಗಿಸುತ್ತಿದ್ದ ಆ ಸಾಮಾನ್ಯ ಜನರು ಇಂತಹ ವಿವೇಕವಾಣಿಗಳಿಂದ ಸ್ಫೂರ್ತಿ ಪಡೆದು ಸ್ವಾತಂತ್ರ್ಯ ಸಂಗ್ರಾಮಕ್ಕೆ ಧುಮುಕಿದರು. ಮಹಾತ್ಮರ ಮಾತನ್ನು ತಮ್ಮ ಜೀವನಾದರ್ಶವನ್ನಾಗಿ ಮಾಡಿಕೊಂಡರು. ಸ್ವಾತಂತ್ರ್ಯದ ಜೊತೆಗೆ ಸಮಾಜದ ಅನಿಷ್ಟಗಳನ್ನು ತೊಡೆಯಲು ಅಹರ್ನಿಶಿ ದುಡಿದರು. ಸ್ವಾತಂತ್ರ್ಯ ಹೋರಾಟದಲ್ಲಿ ತಮ್ಮ ಕೃಷಿ ಭೂಮಿ, ಮನೆ, ಉದ್ಯೋಗ ಕಳೆದುಕೊಂಡು ಕೂಲಿ ಮಾಡುತ್ತಾ, ಹಸಿವಿನಿಂದ ಬಳಲಿದ ರಾಮನಗರದ ಸ್ವಾತಂತ್ರ್ಯ ಸೇನಾನಿಗಳ ಬದುಕು ಕಣ್ಣೀರು ತರಿಸುತ್ತದೆ. ಇಷ್ಟಾದರೂ ಅವರು ತಮ್ಮ ಸ್ವಾತಂತ್ರ್ಯ ದೀಕ್ಷೆಯನ್ನು ತೊರೆಯಲಿಲ್ಲ. ನಮ್ಮ ಸುಂದರ ನಾಳೆಗಳಿಗೆ ತಮ್ಮದೆಲ್ಲವನ್ನು, ಜೀವ– ಜೀವನವನ್ನೇ ತೇಯ್ದರು. ನಮ್ಮ ಸುಖಕರ ಜೀವನವು ಇವರೆಲ್ಲರ ತ್ಯಾಗದ ಬುನಾದಿಯ ಮೇಲೆ ನಿಂತಿದೆ. ಇದು ಜೀರ್ಣಿಸದ ಋಣಶೇಷ. ಈ ಪುಸ್ತಕವು ರಾಮನಗರದ ಆ ಸ್ವಾತಂತ್ರ್ಯ ಸೇನಾನಿಗಳಿಗೆ ಅರ್ಪಣೆ.

ಈ ಪುಸ್ತಕ ಬರೆಯಲು ನನ್ನನ್ನು ಆಯ್ಕೆ ಮಾಡಿ, ಪುಸ್ತಕಕ್ಕೆ ಬೇಕಾಗುವ ಮಾಹಿತಿಗಳನ್ನು ಹಂಚಿಕೊಂಡ ಪ್ರಮೋದ್ ಗೋಪಾಲರವರಿಗೆ, ಆಕರ ಗ್ರಂಥಗಳನ್ನು ಕೊಟ್ಟು ಸಹಕರಿಸಿದ ಮಿಥಿಕ್ ಸೊಸೈಟಿ ಸಿಬ್ಬಂದಿ ವರ್ಗ, ಪುಸ್ತಕ ಮಾಲೆಯ ಸಂಪಾದಕರಾದ ನರೇಂದ್ರಕುಮಾರ್‌ರವರಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ವಂದನೆಗಳು,

**ಶರತ್‌ಚಂದ್ರ**
ಮೈಸೂರು

## ಪರಿವಿಡಿ


| | |
|---|---|
| ಶುಭ ಸಂದೇಶ | ೩ |
| ಶುಭ ಸಂದೇಶ | ೫ |
| ಪ್ರಧಾನ ಸಂಪಾದಕರ ಮಾತು | ೭ |
| ಲೇಖಕರ ಮಾತು | ೧೧ |
| ೧. ಪೂರ್ವಚರಿತ | ೧೯ |
| ೨. ಪರಕೀಯ ದಾಳಿಯ ಪರಾಕಾಷ್ಠೆ | ೨೩ |
| ೩. ಕ್ಲೋಸ್‌ಪೇಟೆ ನಿರ್ಮಾಣ | ೨೫ |
| ೪. ಬಂಡಾಯದ ಬೀಜಗಳು | ೨೮ |
| ೫. ಮೈಸೂರು ಸಂಸ್ಥಾನದಲ್ಲಿ ಸ್ವಾತಂತ್ರ್ಯ ಹೋರಾಟದ ಉಗಮ | ೩೬ |
| ೬. ಗಾಂಧೀಜಿಯ ಆಗಮನ | ೪೦ |
| ೭. ರಾಮನಗರದ ಸ್ವಾತಂತ್ರ್ಯ ಹೋರಾಟ ಹಾಗೂ ಸೇನಾನಿಗಳು | ೪೨ |
| ೮. ಸ್ವಾತಂತ್ರ್ಯದ ಬೇವು–ಬೆಲ್ಲ | ೬೧ |
| ಗ್ರಂಥ ಋಣ | ೬೬ |
| ಅಮೃತ ಮಹೋತ್ಸವ ಪ್ರಕಟಣೆ – ೭೫ ಕಿರುಪುಸ್ತಕಗಳ ಪಟ್ಟಿ | ೬೮ |

ಢಣ್! ಢಣ್!

ಢಣ್! ಢಣ್!

ತಮಟೆಯ ಶಬ್ದ!

ನಿದ್ದೆಯ ಮಂಪರಿನಲ್ಲಿದ್ದ ಸೋಮು ಬೆಚ್ಚಿ ಬಿದ್ದನು. ಎಚ್ಚರವಾಗಿ ಸುತ್ತೆಲ್ಲ ನೋಡಿದನು. ಯಾರೂ ಕಾಣಲಿಲ್ಲ.

ಮಧ್ಯಾಹ್ನದ ಉರಿಬಿಸಿಲು. ಆ ಬಿಸಿಲಿನ ಬೇಗೆಗೆ ಮತ್ತೆ ಕಣ್ಣೆಳೆಯಿತು.

ಢಣ್! ಢಣ್!

ಮತ್ತೆ ತಮಟೆಯ ಶಬ್ದ.

**"ಓ... ಓ...**
**ಕೂಗುತಿದೆ ಕಲ್ಲೂ... ಕೂಗುತಿದೆ ಕಲ್ಲು!**
**ಕಿವಿವೆತ್ತ ಕಿವುಡರಿರಾ! ಕೇಳಿ ಆ ಸೊಲ್ಲು! ಆ ಸೊಲ್ಲು!**
**ಕೂಗುತಿದೆ ಕಲ್ಲೂ..ಕೂಗುತಿದೆ ಕಲ್ಲು!"**

ಸೋಮು ಕಣ್ಣು ಬಿಟ್ಟು ಮತ್ತೆ ಸುತ್ತ ಮುತ್ತ ನೋಡಿದನು. ಬಹುಶಃ ಬೆಟ್ಟದ ಕೆಳಗಿಂದ ಯಾರೋ ಮೇಲೆ ಬರುತ್ತಿರಬೇಕು. ಕಂಚಿನ ಕಂಠದಿಂದ ಹೊರಟ ಆ ಹಾಡು. ಯಾರದು? ಎಂದು ಮೆಟ್ಟಿಲಿನ ಕಡೆ ನೋಡುತ್ತಾ ಕೂತನು. ಹಿಂದಿನಿಂದ ಯಾರೋ ತಿವಿದ ಹಾಗಾಯಿತು. ಹೆದರಿ ಹಿಂದೆ ತಿರುಗಿದರೆ, ಅಜ್ಜನೊಬ್ಬ ಕೋಲು ಹಿಡಿದು ನಿಂತಿದ್ದಾನೆ. ಅವನ ಹಿಂದೆ ಕುಳ್ಳಗಿರುವ ಆಸಾಮಿ.

ಅಜ್ಜನು ಕೋಲನ್ನು ಸೋಮುವಿನತ್ತ ತೋರಿಸಿ, ಹುಬ್ಬೇರಿಸುತ್ತ "ಯಾರು? ಇಲ್ಲೇನು ಕೆಲಸ?" ಎಂದು ಜೋರಾಗಿ ಕೇಳಿದನು.

ಸೋಮುವಿಗೆ ಇವರಿಬ್ಬರ ವಿಚಿತ್ರ ದಿರಸಿನ ಮೇಲೇ ಕಣ್ಣು. ಅಜ್ಜನದು ಉದ್ದನೆಯ ದಾಡಿ. ಮೈಸೂರು ಪೇಟ. ಕಪ್ಪು ಕೋಟ್ ಮತ್ತು ಅಲ್ಲಲ್ಲಿ ಹರಿದಿರುವ ಮಾಸಲು ಪಂಚೆ. ಹಿಂದಿರುವವನದು ರಂಗುರಂಗಿನ ಬಟ್ಟೆ, ತಲೆಯ ಮೇಲೊಂದು ಟೋಪಿ, ಕೈನಲ್ಲಿ ತಮಟೆ. ಇಬ್ಬರೂ ಯಾವುದೋ ನಾಟಕದ ಪಾತ್ರಧಾರಿಗಳಂತೆ ಕಾಣುತ್ತಿದ್ದರು.

ಸೋಮು ಮಾತನಾಡುವ ಮೊದಲೇ ಮತ್ತೆ ಹುಬ್ಬೇರಿಸುತ್ತ "ಗುಂಡು, ತುಂಡು, ಇಸ್ಪೀಟು ಇವೆಲ್ಲ ಗುಡಿ ಹತ್ರ, ಉಹೂಂ. ಕೆಳಗೆ ಹೋಗಬಹುದು" ಎಂದು ಮೆಟ್ಟಿಲ ಕಡೆ ತೋರಿಸಿದನು.

ಸೋಮು ಸಾವರಿಸಿಕೊಂಡು "ಇಲ್ಲ. ಇಲ್ಲ..ಅದಕ್ಕಲ್ಲ ಬಂದದ್ದು. ಗುಡಿ ನೋಡಕ್ಕೆಂದು ಬೆಳಿಗ್ಗೆಯೇ ಬೆಟ್ಟ ಹತ್ತಿ ಬಂದೆ. ಇಲ್ಲೇ ನೆರಳಲ್ಲಿ ಕೂತು ಪುಸ್ತಕ ಓದುತ್ತಿದ್ದೆ. ಮಧ್ಯಾಹ್ನದ ಬಿಸಿಲು ಹಾಗೆ ನಿದ್ದೆ ಬಂತು.."

"ಪುಸ್ತಕ!!" ಪರಮಾಶ್ಚರ್ಯ ಪಟ್ಟಂತೆ ಅಜ್ಜನು ತನ್ನೆರಡೂ ಕೈಗಳನ್ನು ಗಲ್ಲದ ಮೇಲಿಟ್ಟುಕೊಂಡನು.

ತನ್ನ ಸಂಗಡಿಗನತ್ತ ತಿರುಗಿ "ವಿಚಿತ್ರ ಆಸಾಮಿ..ಅಲ್ವೇನೋ?" ಎಂದು ಕೇಳಿದ.

"ಹೌದು ಗುರುಗೋಳೆ" ಎಂದು ಕುಳ್ಳನು ತಲೆ ಅಲ್ಲಾಡಿಸಿದನು.

ಅಜ್ಜನು ಸೋಮುವಿನ ಹತ್ತಿರ ಬಂದು ಕೂತು "ಏನು ಹೆಸರು?" ಎಂದು ಕೇಳಿದ.

"ಸೋಮು"

"ಸೋಮು.. ಸೋಮಿ.. ಸಾಮಿ.. ಹಾ! ಸಾಮಿ ಅಂತ ಕರೀತೀನಿ" ಎಂದ ಅಜ್ಜ ಸೋಮು ಉತ್ತರಿಸುವ ಮುನ್ನವೇ ಅಜ್ಜನು, "ಸಾಮಿ, ಏನು



ಪುಸ್ತಕ ಓದುತ್ತಿರೋದು? ನಮಗೂ ಸ್ವಲ್ಪ ಹೇಳು" ಎಂದು ದೀನತೆಯಿಂದ ಕೇಳಿದನು.

ಈ ಅತಿ ವಿನಯವು ಸೋಮುವಿಗೆ ಸರಿ ಬರಲಿಲ್ಲ. ಸ್ವಲ್ಪ ದೃಢವಾಗಿ "ಸ್ವಾತಂತ್ರ್ಯ ಸಂಗ್ರಾಮದ ಕುರಿತಾದದ್ದು" ಎಂದ.

ಅಜ್ಜನು ದಡಕ್ಕನೆ ಎದ್ದು ನಿಂತು "ಸ್ವಾತಂತ್ರ್ಯ ಸಂಗ್ರಾಮದ್ದೇ? ನಮ್ಮ ರಾಮನಗರದ್ದೇ?" ಎಂದು ಕೇಳಿದ ಆಶ್ಚರ್ಯದಿಂದ.

"ಇಲ್ಲ. ಬಂಗಾಳದ್ದು. ಅಲ್ಲಿನ ಕ್ರಾಂತಿಕಾರಿಗಳ ಬಗ್ಗೆ" ಎಂದ.

ಮುಂದುವರಿಸಿ "ರಾಮನಗರದ್ದು ಅಂತೀರಾ? ಇಲ್ಲೇನು ನಡೆದಿದೆ ಉತ್ತರ ಭಾರತದಲ್ಲಿ ನಡೆದ ಹಾಗೆ?" ಎಂದು ನಸುನಕ್ಕ.

ಅಜ್ಜನ ಮುಖಚರ್ಯೆ ಬದಲಾಯಿತು. ಹುಬ್ಬು ಗಂಟಿಕ್ಕಿತು. ಕೋಪದಿಂದ ಕೋಲನ್ನು ಸೋಮುವಿನತ್ತ ತೋರಿಸಿ "ಸಾಮಿ! ತಪ್ಪು! ಇದು ತಪ್ಪು! ನಮ್ಮ ರಾಜ್ಯ, ಅಥವಾ ಇಲ್ಲಿಯ ಕ್ಲೋಸ್‌ಪೇಟೆ ಸೀಮೆಯಲ್ಲಿ ಏನಾಯಿತು ಗೊತ್ತಿಲ್ಲ ಅಂತ ಹೇಳು. ಒಪ್ಕೋತೀನಿ. ಆದರೆ ಇಲ್ಲಿ ಏನೂ ನಡೆದಿಲ್ಲ ಅನ್ನಬಾರದು" ಎಂದ.

"ಕ್ಲೋಸ್ ಪೇಟೆ? ಹಾಗೆಂದರೆ?" ಎಂದು ಮರುಪ್ರಶ್ನೆ ಹಾಕಿದ ಸೋಮು.

"ಅಯ್ಯೋ!" ಎಂದು ಕುಸಿದು ಬಿದ್ದ ಹಾಗೆ ನಟಿಸಿದ ಅಜ್ಜ. ಕುಳ್ಳನು ಇಲ್ಲವೆಂದು ತಲೆಯಾಡಿಸುತ್ತಾ ಸೋಮುವನ್ನು ತೋರಿಸುತ್ತ "ಗುರುಗೋಳೆ! ಕಲ್ಲು! ಕಲ್ಲು! ನೀವೇ ಸಾಯ ಮಾಡ್ಬೇಕು" ಎಂದ.

"ಹಾಂ! ಮತ್ತೆ! ನಾವೇ ಮಾಡ್ಬೇಕು.." ಎಂದು ಅಜ್ಜ ಎದ್ದು ನಿಂತನು.

ಧಢಧಢನೆ ನಡೆಯುತ್ತಾ ಬೆಟ್ಟದ ತುದಿಯಲ್ಲಿದ್ದ ಬಂಡೆಯ ಮೇಲೆ ನಿಂತನು. ಎರಡೂ ಕೈಗಳನ್ನು ಮೇಲಕ್ಕೆತ್ತಿ ಜೋರು ಧ್ವನಿಯೊಂದಿಗೆ "ಸಾಮಿ! ನೋಡು! ಸುತ್ತ ನೋಡು! ನಿನ್ನ ಸುತ್ತ ಇರುವ ಬೆಟ್ಟ, ಗುಡ್ಡಗಳನ್ನು ನೋಡು. ಸಾವಿರಾರು ವರ್ಷಗಳ ಇತಿಹಾಸವಿದೆ ಇದಕ್ಕೆ. ತಮ್ಮ ಸೀಮೆಯ, ನಾಡಿನ,

ದೇಶದ ಸಂರಕ್ಷಣೆ, ಸ್ವಾತಂತ್ರ್ಯಕ್ಕೆ ಅಸಂಖ್ಯಾತ ಜನರು, ಒಡೆಯರು, ಪ್ರಭುಗಳು ತಮ್ಮ ಜೀವನವನ್ನೇ ತೇಯ್ದು, ಪ್ರಾಣವನ್ನೇ ಮುಡಿಪಾಗಿಟ್ಟಿದ್ದಾರೆ ಇಲ್ಲಿ. ಕೇಳಿದರ ಕಥೆ, ವ್ಯಥೆಗಳನ್ನು.

ಶ್ರೀ ರಾಮನಿಂದ ಹಿಡಿದು ರಾಮರಾಜ್ಯದ ಕನಸನ್ನು ಸಾಕಾರಗೊಳಿಸಲು ಹೋರಾಡಿದ ರಾಮನಗರದ ಈ ಭವ್ಯ ಕಥೆಯನ್ನು. ಕೇಳು.."

ಢಣ್! ಢಣ್! ಢಣ್! ಢಣ್!

ಕುಳ್ಳನು ತಮಟೆಯನ್ನು ಬಡಿಯಲಾರಂಭಿಸಿದನು. ಸೋಮು ಬೆಟ್ಟದ ತುದಿಗೆ ಅಜ್ಜನ ಬಳಿ ಬಂದು ನಿಂತನು.

ಅಜ್ಜನು ಕಣ್ಣನ್ನು ಮುಚ್ಚಿ ತದೇಕ ಚಿತ್ತದಿಂದ ಮಾತನಾಡಲಾರಂಭಿಸಿದನು.

❑

# ೧. ಪೂರ್ವಚರಿತ

ಪೂರ್ವದಲ್ಲಿ ರಾಮನಗರವನ್ನು ರಾಮಗಿರಿಯೆಂದು ಕರೆಯುತ್ತಿದ್ದರು. ಇಲ್ಲಿರುವ ಐತಿಹ್ಯದಂತೆ ತ್ರೇತಾಯುಗದಲ್ಲಿ ಸುಗ್ರೀವನು ಶ್ರೀರಾಮನ ವಿಗ್ರಹವನ್ನು ಇಲ್ಲಿ ಪ್ರತಿಷ್ಠಾಪನೆ ಮಾಡಿದುದರಿಂದ ಈ ಪ್ರಾಂತ್ಯವು ರಾಮಗಿರಿಯೆಂದು ಪ್ರಸಿದ್ಧಿಯಾಯಿತು ಎನ್ನುತ್ತಾರೆ. ಇನ್ನು ಕೆಲವರು ಶ್ರೀರಾಮನು ಸೀತೆ, ಲಕ್ಷ್ಮಣರೊಡನೆ ತಮ್ಮ ವನವಾಸದ ಸಮಯದಲ್ಲಿ ಇಲ್ಲಿ ಕೆಲವು ಕಾಲ ನೆಲಸಿದ್ದರಿಂದ ರಾಮಗಿರಿ ಹೆಸರು ಬಂದಿತು ಎಂದು ನಂಬುತ್ತಾರೆ. ಸ್ಥಳಪುರಾಣದ ಪ್ರಕಾರ ಶ್ರೀರಾಮಚಂದ್ರನು ಕಾಕಾಸುರನೆಂಬ ರಾಕ್ಷಸನನ್ನು ಸಂಹಾರ ಮಾಡಿದ್ದು ಈ ಸ್ಥಳದಲ್ಲೇ ಎಂಬ ಪ್ರತೀತಿ ಇದೆ. ಇದೇ ಹೆಸರಿಗೆ ಸಂಬಂಧಿಸಿದಂತೆ ಮತ್ತೊಂದು ಕುತೂಹಲಕಾರಿ ಸಂಗತಿಯಿದೆ. ರಾಮನಗರದಲ್ಲಿ ಗ್ರಾನೈಟ್ ಅಥವಾ ಬೆಣಚುಕಲ್ಲು ಬೆಟ್ಟಗಳ ಶ್ರೇಣಿಗಳಿವೆ. ಈ ಪ್ರದೇಶದಲ್ಲಿ ಭೂಗರ್ಭದಿಂದ ಹೊರಹೊಮ್ಮಿದ ಕಪ್ಪು ಶಿಲೆಗಳಿಗೆ 'ಸೀತೆಯ ಸೆರಗು' ಎಂದೂ ಹೇಳುತ್ತಾರೆ.

ಅರ್ಕಾವತಿ ನದಿಯ ಈ ಕಣಿವೆ ಪ್ರದೇಶವು ಸಹಸ್ರಾರು ವರ್ಷಗಳಿಂದ ಮಾನವನ ಸಂಸ್ಕೃತಿಯ ಉಗಮಕ್ಕೆ ಕಾರಣವಾಗಿದೆ. ಈ ಪ್ರದೇಶದಲ್ಲಿ ಕಬ್ಬಿಣ ಉಪಕರಣಗಳ ತಯಾರಿಕೆಯ ಗುಡಿ ಕೈಗಾರಿಕೆಗಳಿದ್ದವು ಹಾಗು ಈ ಪ್ರದೇಶದಲ್ಲಿ ಹೇರಳವಾಗಿ ಸಿಗುವ ಕೆಂಪು ಮಣ್ಣಿಂದ ಮಡಕೆಗಳನ್ನು ಮಾಡುತ್ತಿದ್ದರು ಎಂದು ಉತ್ಖನನಗಳಿಂದ ತಿಳಿದು ಬಂದಿದೆ. ಹಳೆ ಶಿಲಾಯುಗದಿಂದ ಹಿಡಿದು, ನವಶಿಲಾಯುಗ, ಕಬ್ಬಿಣಯುಗ ಹೀಗೆ ಸಹಸ್ರಾರು ವರ್ಷಗಳ ಕಾಲ ನಿರಂತರವಾಗಿ ಮಾನವ ಜನಾಂಗದ ಸಂಸ್ಕೃತಿಯ ವಿಕಸನ ಈ ಪ್ರದೇಶದಲ್ಲೂ ಆಯಿತು

ಎಂದು ಕಳೆದ ಶತಮಾನದಲ್ಲಿ ನಡೆದ ಹಲವು ಸಂಶೋಧನೆಗಳಿಂದ ತಿಳಿದು ಬಂದಿದೆ.

"ಅಜ್ಜ.." ಎಂದು ಸೋಮು ರಾಗವೆಳೆದನು.

"ಹಾಂ?"

"ರಾಮ ಲಕ್ಷ್ಮಣರು ಇಲ್ಲಿಗೆ ಬಂದಿದ್ದರೆಂದು ನೀವು ನಂಬುತ್ತೀರೋ?" ಎಂದು ಪ್ರಶ್ನೆ ಮಾಡಿದನು

"ಸಾಮಿ! ಇತಿಹಾಸದಲ್ಲಿ ಪ್ರಸಿದ್ಧ ನಾಣ್ಣುಡಿಯಿದೆ. ಸಾಕ್ಷ್ಯದ ಅಭಾವ ಘಟನೆ ನಡೆದಿಲ್ಲ ಎಂಬುದಕ್ಕೆ ಸಾಕ್ಷಿ ಅಲ್ಲ (Absence of evidence is not the evidence of absence)ಎಂದು. ಇದನ್ನೂ ಮೀರಿದರೆ 'ಮಹಿಮೆ ಮನಸೋತೆಡೆಗೊ' ಎಂಬ ನಂಬಿಕೆಗೆ ಕೈ ಮುಗಿಯಬೇಕು" ಎಂದು ನಸುನಗುತ್ತಾ ಅಜ್ಜನು ಹೇಳಿದನು.

ಪ್ರಬುದ್ಧತೆಯ ಮಾತುಗಳನ್ನಾಡುತ್ತಿರುವ ಇವರು ಹುಚ್ಚರಲ್ಲ, ನಾಟಕದವರಲ್ಲ. ಇವರು ಯಾರು? ಎಂದು ಅಜ್ಜನನ್ನೇ ನೋಡುತ್ತಾ ಕುಳಿತನು ಸೋಮು.

ಅಜ್ಜನು ಮುಂದುವರಿಸಿದನು.

ನಾಗರಿಕತೆಯು ಬೆಳೆಯುತ್ತ ಹೋದಂತೆ ಈ ಪ್ರದೇಶವನ್ನು ಹಲವು ಪಂಗಡಗಳು, ನಾಯಕರು, ಪಾಳೆಯಗಾರರು ಆಳುತ್ತಾ ಬಂದರು. ಶಾತವಾಹನರ ನಂತರ ಬಂದ ಗಂಗರು ೫೦೦ ವರ್ಷಕ್ಕೂ ಹೆಚ್ಚು ಕಾಲ (೫–೧೦ನೇ ಶತಮಾನ) ಈ ಪ್ರದೇಶವನ್ನು ಪ್ರಭುಗಳಾಗಿ, ನಂತರ ಚಾಲುಕ್ಯರ, ರಾಷ್ಟ್ರಕೂಟರ ಸಾಮಂತರಾಗಿ ಆಳಿದರು. ನಂತರ ಚೋಳರು, ಗಂಗರನ್ನು ಸೋಲಿಸಿ ಸುಮಾರು ನೂರು ವರ್ಷಗಳ ಕಾಲ ದಕ್ಷಿಣ ಕರ್ನಾಟಕವನ್ನು ಆಳಿದರು. ೧೧೧೪ರಲ್ಲಿ ಹೊಯ್ಸಳ ವಿಷ್ಣುವರ್ಧನನು ಗಂಗವಾಡಿಯನ್ನು ಗೆದ್ದು ದಕ್ಷಿಣ ಕರ್ನಾಟಕವನ್ನು ಚೋಳರ ಆಡಳಿತದಿಂದ ಮುಕ್ತಗೊಳಿಸಿದನು. ೧೩ನೇ ಶತಮಾನದಲ್ಲಿ ನಡೆದ ಖಿಲ್ಜಿ–ಮಲ್ಲಿಕ್ ಕಾಫರ್, ತುಘಲಕ್ ಇವರುಗಳ ದಕ್ಷಿಣ ಭಾರತ ದಂಡಯಾತ್ರೆಯಿಂದ ಸೇವುಣ, ಕಾಕತೀಯ ಹಾಗೂ ಹೊಯ್ಸಳ ರಾಜ್ಯಗಳು



ಅಂತ್ಯಗೊಂಡವು. ಆಗ ಈ ಪರಕೀಯ ದಾಳಿಯ ವಿರುದ್ಧವಾಗಿ, ದಕ್ಷಿಣ ಭಾರತಕ್ಕೆ ಕೋಟೆಯಾಗಿ ಎದ್ದು ನಿಂತದ್ದು ವಿಜಯನಗರ ಸಾಮ್ರಾಜ್ಯ.

ವಿಜಯನಗರ ಸಾಮ್ರಾಜ್ಯವು ೧೫ನೇ ಶತಮಾನಕ್ಕೆ ಉಚ್ಛ್ರಾಯ ಸ್ಥಿತಿಗೆ ಬರುವ ವೇಳೆಗೆ ರಾಮನಗರವು ಪ್ರಮುಖ ಘಟನೆಗೆ ಸಾಕ್ಷಿಯಾಯಿತು. ೧೫೧೩ರಲ್ಲಿ ಕೃಷ್ಣದೇವರಾಯನು ದಕ್ಷಿಣ ಭಾರತವನ್ನು ಆಳುತ್ತಿದ್ದ ಕಾಲದಲ್ಲಿ ಯಲಹಂಕ ನಾಡಪ್ರಭುವಾಗಿ ಹಿರಿಯ ಕೆಂಪೇಗೌಡನಿಗೆ ರಾಜ್ಯಾಭಿಷೇಕ ನಡೆಯಿತು. ಈ ಸುದ್ದಿ ವಿಜಯನಗರದ ಅರಸರಿಗೂ ಮುಟ್ಟಿತು. ಮೂವತ್ತು ಸಾವಿರ ವರಹಗಳ ವಾರ್ಷಿಕ ಆದಾಯವಿದ್ದ ಯಲಹಂಕ ನಾಡನ್ನು ಗೆಲ್ಲಲು ಶೀರ್ಯ, ಸೋಲೂರು, ಕುಣಿಗಲ್, ಚೆನ್ನಪಟ್ಟಣದ ಪಾಳೆಯಗಾರರು ತೀರ್ಮಾನ ಮಾಡಿದರು. ಶಿವಗಂಗೆ ಹಾಗು ರಾಮಗಿರಿಗೆ ಮುತ್ತಿಗೆ ಹಾಕುವುದಕ್ಕೆ ಮುಂಚೆಯೇ ಕೆಂಪೇಗೌಡನು ರಾಮಗಿರಿಯನ್ನು ಸೇರಿ ಅವರನ್ನು ಸುತ್ತುಗಟ್ಟಿದನು. ಈ ಅನಿರೀಕ್ಷಿತ ದಾಳಿಯಿಂದ ಪಾಳೆಯಗಾರರು ತಮ್ಮ ಸೈನ್ಯವನ್ನು ಬಿಟ್ಟು ಪರಾರಿಯಾದರು.

ಆಗಿನ ಕಾಲದಲ್ಲಿ ಕೆಂಪೇಗೌಡನ ಮದ್ದಿನ ಮನೆ ರಾಮಗಿರಿಯಲ್ಲೇ ಇತ್ತು. ಸೈನಿಕರಿಗೆ ಆಯುಧಗಳನ್ನು ತಯಾರಿಸುವ ದೊಡ್ಡ ಕಾರ್ಖಾನೆಯೂ ಇಲ್ಲೇ ಇದ್ದಿತು. ಈ ಕಾರಣದಿಂದ ರಾಮಗಿರಿಯನ್ನು 'ಕಾರ್ಖಾನೆ ಪಾಳ್ಯ' ಎಂದೂ ಕರೆಯುತ್ತಿದ್ದರು. ಈ ಕಾರಣದಿಂದ ರಾಮಗಿರಿಯಲ್ಲಿ ಕೆಂಪೇಗೌಡನು ಕೋಟೆಯನ್ನು ಕಟ್ಟಿಸಿದನು. ಕೆಂಪೇಗೌಡನು ಆಡಳಿತದ ಸೌಕರ್ಯಕ್ಕಾಗಿ ಯಲಹಂಕ ನಾಡನ್ನು ಮೂರು ಭಾಗಗಳಾಗಿ ವಿಂಗಡಿಸಿದ್ದನು. ಬೆಂಗಳೂರು ಪ್ರಾಂತ, ರಾಮಗಿರಿ ಪ್ರಾಂತ ಹಾಗು ಹುತ್ತರಿದುರ್ಗ ಪ್ರಾಂತ. ಬೆಂಗಳೂರು ಪ್ರಾಂತ ಕೆಂಪೇಗೌಡನ ಅಡಿಯಿದ್ದರೆ, ಮಿಕ್ಕೆರಡಕ್ಕೆ ಅವನ ತಮ್ಮಂದಿರು ಪಾರುಪತ್ತೆಗಾರರಾಗಿದ್ದರು.

೧೫೬೫ರಲ್ಲಿ ನಡೆದ ತಾಳಿಕೋಟೆ ಯುದ್ಧದಲ್ಲಿ ವಿಜಯನಗರ ಸಾಮ್ರಾಜ್ಯಕ್ಕೆ ಸೋಲಾಯಿತು. ಅಲ್ಲಿಯವರೆಗೆ ವಿಜಯನಗರ ಅರಸರಿಗೆ ಸಾಮಂತರಾಗಿದ್ದ ಕೆಳದಿ, ಮೈಸೂರು, ಚಿತ್ರದುರ್ಗ, ಯಲಹಂಕ ನಾಡಪ್ರಭುಗಳು ಹೆಚ್ಚು ಸ್ವತಂತ್ರರಾದರು. ಆದರೂ ಯಲಹಂಕ ನಾಡಪ್ರಭುಗಳು ಪೆನುಕೊಂಡದಿಂದ

ರಾಜ್ಯಭಾರ ಮಾಡುತ್ತಿದ್ದ ವಿಜಯನಗರದ ಅರಸರ ಸಾಮಂತರಾಗಿದ್ದರು. ನಾಶವಾದ ವಿಜಯನಗರ, ಸ್ವತಂತ್ರ ಪಾಳೆಯಗಾರರು, ಅವರ ಅಂತಃಕಲಹ ಇವೆಲ್ಲವೂ ಬಿಜಾಪುರ ಸುಲ್ತಾನನಿಗೆ ಸುವರ್ಣಾವಕಾಶವಾಗಿ ಲಭಿಸಿತು. ೧೬೩೮ರಲ್ಲಿ ಸೇನಾಧಿಪತಿ ರಣದುಲ್ಲಾ ಖಾನ್ ಮತ್ತು ಶಾಹಜಿ ಬೋಂಸ್ಲೆ ಬೆಂಗಳೂರನ್ನು ಮುತ್ತಿಗೆ ಹಾಕಿದರು. ಮೂರನೆಯ ಕೆಂಪೇಗೌಡನು ಯುದ್ಧದಲ್ಲಿ ಸೋತನು. ಯುದ್ಧದ ಒಪ್ಪಂದದಂತೆ ಕೆಂಪೇಗೌಡನಿಗೆ ಮಾಗಡಿ ಪ್ರಾಂತ್ಯ ದೊರಕಿತು. ಎಲ್ಲವನ್ನು ಕಳೆದುಕೊಂಡರೂ ಮಾಗಡಿಗೆ ಬಂದು ಅದನ್ನೇ ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡು ರಾಜ್ಯಭಾರ ಮಾಡತೊಡಗಿದನು. ಇತ್ತ ಕೆಂಪೇಗೌಡನಿಂದ ಬೆಂಗಳೂರು ನಗರವನ್ನು ವಶಪಡಿಸಿಕೊಂಡ ಬಳಿಕ ಬಿಜಾಪುರ ಸುಲ್ತಾನ್ ಆದಿಲ್ ಶಾಹಿಯು ಶಾಹಜಿಗೆ ಬೆಂಗಳೂರು ನಗರವನ್ನು ಉಂಬಳಿಯಾಗಿ ನೀಡಿದನು. ರಾಮಗಿರಿಯು ಮರಾಠರ ರಾಜ್ಯಾಡಳಿತಕ್ಕೆ ಸೇರಿತು. ನಂತರ ೧೭೨೮ರಲ್ಲಿ ದಳವಾಯಿ ನಂಜರಾಜನು ಸಾವನದುರ್ಗವನ್ನು ಗೆದ್ದ ನಂತರ ಈ ಪ್ರದೇಶವು ಮೈಸೂರು ಅರಸರಿಗೆ ಸೇರಿತು.

ಬೆಂಗಳೂರಿನಲ್ಲೇ ನೆಲಸಿದ ಶಾಹಜಿಯ ಮಗ ಶಿವಾಜಿಗೆ ಕೆಂಪೇಗೌಡರ ಬೆಂಗಳೂರು ನಗರದ ರಚನೆ, ಅಲ್ಲಿಯ ಕೋಟೆ, ದೇವಾಲಯಗಳು, ವ್ಯಾಪಾರ–ವಾಣಿಜ್ಯ ಇವೆಲ್ಲವೂ ಪ್ರಭಾವ ಬೀರಿತು. ಇದಲ್ಲದೆ ಮೈಸೂರಿನ ದೊರೆ ಕಂಠೀರವ ನರಸರಾಜನು ಬಿಜಾಪುರದ ಸುಲ್ತಾನನೆದುರು ತೋರಿದ ಪರಾಕ್ರಮ, ತನ್ನ ಸ್ವಾತಂತ್ರ್ಯವನ್ನು ಸಂರಕ್ಷಣೆಗೊಳಿಸಿಕೊಂಡ ಪರಿ ಬಹಳ ಪರಿಣಾಮ ಬೀರಿತು. ವಿಜಯನಗರ ಸಾಮ್ರಾಜ್ಯದ ಗತವೈಭವ, ಕೆಂಪೇಗೌಡ ಹಾಗೂ ಮೈಸೂರರಸರ ಆಡಳಿತ ವೈಖರಿ ಇವೆಲ್ಲವೂ ಮುಂದೆ ಹೆಮ್ಮರವಾಗಿ ಬೆಳೆದ ಮರಾಠಾ ಸಾಮ್ರಾಜ್ಯದ ಪ್ರೇರಕ ಶಕ್ತಿಗಳಾದವು.

❑

## ೨. ಪರಕೀಯ ದಾಳಿಯ ಪರಾಕಾಷ್ಠೆ

೧೬ನೇ ಶತಮಾನದಲ್ಲೇ ವ್ಯಾಪಾರಕ್ಕೆಂದು ಭಾರತಕ್ಕೆ ಬಂದ ಪೋರ್ಚುಗೀಸರು, ಫ್ರೆಂಚ್, ಡಚ್ ಹಾಗೂ ಆಂಗ್ಲರು ಮುಂದಿನ ೧೫೦ ವರ್ಷಗಳಲ್ಲಿ ಭಾರತದ ಹಲವು ಪ್ರಾಂತ್ಯಗಳಲ್ಲಿ ಭದ್ರವಾಗಿ ತಳವೂರಿದರು. ವ್ಯಾಪಾರಕ್ಕಾಗಿ ಬಂದರೂ ಕಾಲಕ್ರಮೇಣ ಇಲ್ಲಿನ ರಾಜ್ಯಾಡಳಿತದಲ್ಲಿ ಮೂಗು ತೂರಿಸುವುದು, ಕೋಟೆಗಳನ್ನು, ಸೈನ್ಯವನ್ನು ಕಟ್ಟುವ ಹಾಗೂ ಜನರನ್ನು ಮತಾಂತರ ಮಾಡುವ ಕಾರ್ಯಕ್ಕೆ ಕೈಹಾಕಿದರು. ಹಲವೆಡೆ ಪರಕೀಯರು ಹಾಗೂ ಸ್ಥಳೀಯ ಸಂಸ್ಥಾನಗಳ ನಡುವೆ ಘರ್ಷಣೆ ನಡೆದರೆ, ಹಲವಾರು ಸಂಸ್ಥಾನಗಳು ತಮ್ಮ ರಾಜ್ಯ ವಿಸ್ತರಣೆಗೆ ಇವರ ಜೊತೆ ಕೈಜೋಡಿಸಿದವು. ೧೭೦೭ರಲ್ಲಿ ಆದ ಔರಂಗಜೇಬನ ಸಾವಿನಿಂದ ಉತ್ತರ ಭಾರತದಲ್ಲಿ ರಾಜಕೀಯ ನಿರ್ವಾತವೇ ಸೃಷ್ಟಿಯಾಯಿತು. ಔರಂಗಜೇಬನು ಇದ್ದಾಗಲೇ ಅವನ ವಿರುದ್ಧ ಬಂಡೆದ್ದಿದ್ದ ಮರಾಠರು, ರಜಪೂತರು, ಬುಂಡೇಲರು, ಸಿಖ್ಖರು, ಅಸ್ಸಾಮಿನ ಅಹೋಮರು, ಇವನ ಸಾವಿನ ನಂತರ ತಮ್ಮದೇ ಸ್ವತಂತ್ರ ರಾಜ್ಯಗಳನ್ನು ಮತ್ತೆ ಕಟ್ಟಿದರು. ದೆಹಲಿಯ ಗದ್ದುಗೆಗೆ ಮರಾಠ ಪೇಶ್ವೆಗಳ ದಂಡಯಾತ್ರೆಯು ಉತ್ತರ ಭಾರತದ ರಾಜಕೀಯ ಸನ್ನಿವೇಶವನ್ನೇ ಬದಲಾಯಿಸಿತು. ೧೭೬೧ರ ಮೂರನೆಯ ಪಾಣಿಪತ್ ಕದನದಲ್ಲಿ ಉಂಟಾದ ಮರಾಠರ ಸೋಲು ಪರಕೀಯರಿಗೆ ವರವಾಗಿ ಪರಿಣಮಿಸಿತು. ೧೭೫೭ರಲ್ಲಿ ಪ್ಲಾಸಿ ಕದನದಲ್ಲಿ ಬ್ರಿಟಿಷರು ಜಯಗಳಿಸಿದಾಗ ಇಡಿಯ ಬಂಗಾಳ ಪ್ರಾಂತ್ಯ ಇವರ ಕೈವಶವಾಯಿತು. ನಂತರ ನಡೆದ ಮೂರು ಕರ್ನಾಟಕ ಯುದ್ಧದಲ್ಲಿ ಫ್ರೆಂಚರನ್ನು ಸೋಲಿಸಿ ಆರ್ಕಾಟಿನ ನವಾಬನನ್ನು ತಮ್ಮ ಕೈಗೊಂಬೆಯನ್ನಾಗಿ ಮಾಡಿಕೊಂಡರು.

ಕರ್ನಾಟಕದಲ್ಲಿ ಪೋರ್ಚುಗೀಸರು ಗೋವೆಯನ್ನು ವಶಪಡಿಸಿಕೊಂಡು ಹೊನ್ನಾವರ ಮಂಗಳೂರಿನವರೆಗೆ ತಮ್ಮ ಪಾರುಪತ್ಯವನ್ನು ಸ್ಥಾಪಿಸಿದರು. ಉಳ್ಳಾಲದ ಅಬ್ಬಕ್ಕ ಹಾಗು ಕೆಳದಿ ಸಂಸ್ಥಾನದ ಸಹಾಯದಿಂದ ಪೋರ್ಚುಗೀಸರ ಪ್ರಾಬಲ್ಯ ಕೇವಲ ಕರಾವಳಿಗೆ ಸೀಮಿತಗೊಂಡಿತು.

೧೭೫೦ರ ಉತ್ತರಾರ್ಧದಲ್ಲಿ ಮೈಸೂರು ಸಂಸ್ಥಾನವು ಪ್ರವರ್ಧಮಾನಕ್ಕೇರಿತು. ಅರಮನೆಯ ಅಂತಃಕಲಹ, ದಳವಾಯಿಗಳ ಒಳಸಂಚುಗಳ ಪರಿಣಾಮದಿಂದ ಅನಕ್ಷರಸ್ಥನಾದ, ರಾಜಕೀಯ ಬೆಂಬಲವೂ ಇಲ್ಲದೆ, ಸ್ವಸಾಮರ್ಥ್ಯದಿಂದ ಹೈದರ್ ಅಲಿ ಖಾನ್ ಮೈಸೂರು ರಾಜ್ಯಕ್ಕೆ ನವಾಬನಾದನು. ಮೈಸೂರು ರಾಜ್ಯದ ಸೀಮೆಯನ್ನು ವಿಸ್ತರಿಸಿದನು. ಆಗ ದಕ್ಷಿಣ ಭಾರತದ ಸಾರ್ವಭೌಮತ್ವಕ್ಕೆ ಮೈಸೂರು, ಮರಾಠರು, ನಿಜಾಮರು, ಫ್ರೆಂಚ್ ಹಾಗು ಆಂಗ್ಲರ ನಡುವೆ ಪೈಪೋಟಿ ನಡೆಯುತ್ತಿತ್ತು. ಅವನ ಮಗ ಟಿಪ್ಪುವಿನ ಕಾಲದಲ್ಲಿ ರಾಜ್ಯ ಕುಗ್ಗಿದರೂ ಬ್ರಿಟಿಷರ ವಿರುದ್ಧ ಹೋರಾಟ ಕುಗ್ಗಲಿಲ್ಲ. ಇದರ ಫಲವಾಗಿ ಆಂಗ್ಲರು ಹಾಗೂ ಮೈಸೂರಿನ ನಡುವೆ ೪ ಬಾರಿ ಯುದ್ಧಗಳು ನಡೆದವು. ೧೭೯೯ರ ಕೊನೆಯ ಯುದ್ಧದಲ್ಲಿ ಮೈಸೂರಿನ ಸಹಾಯಕ್ಕೆ ಫ್ರೆಂಚರು ಹಾಗೂ ಆಂಗ್ಲರ ನೆರವಿಗೆ ನಿಜಾಮರು ನಿಂತರು. ಇಂದಿನ ರಾಮನಗರವು ಶಂಷೇರಾಬಾದ್ ಎಂದು ಕರೆಯಲ್ಪಡುತ್ತಿತ್ತು. ಬ್ರಿಟಿಷರ ಸೈನ್ಯ ಶಂಷೇರಾಬಾದ್ ಮೂಲಕ ಬರಬಹುದೆಂದು ಟಿಪ್ಪು ಅಲ್ಲಿ ಗೂಢಚಾರರನ್ನು ನೇಮಿಸಿದ್ದನು. ಆದರೆ ಸೈನ್ಯವು ಕನಕಪುರದ ಮೂಲಕ ಮಳವಳ್ಳಿ ಮಾರ್ಗವಾಗಿ ಶ್ರೀರಂಗಪಟ್ಟಣಕ್ಕೆ ಮುತ್ತಿಗೆ ಹಾಕಿತು. ಇದು ಟಿಪ್ಪುವಿನ ಯುದ್ಧ ತಂತ್ರವನ್ನು ಬುಡಮೇಲು ಮಾಡಿತು. ಇತರ ಶಕ್ತಿಗಳ ನೆರವಿಲ್ಲದೆ, ತನ್ನ ಶಕ್ತಿಯ ಇತಿಮಿತಿ ತಿಳಿಯದೆ, ಯುದ್ಧದಲ್ಲಿ ಏಕಾಂಗಿಯಾಗಿ ಹೋರಾಡಿ ಟಿಪ್ಪು ಮೃತನಾದನು. ಇದರ ಜೊತೆ ಮೈಸೂರು ಸಂಸ್ಥಾನವು ಅದರಲ್ಲಿದ್ದ ರಾಮಗಿರಿ ಪ್ರಾಂತ್ಯವು ಬ್ರಿಟಿಷರ ವಶವಾಯಿತು. ೧೯ನೇ ಶತಮಾನದ ಪೂರ್ವಾರ್ಧದಲ್ಲಿ ಮರಾಠ, ಸಿಖ್ಖರ ರಾಜ್ಯಗಳು ಬ್ರಿಟಿಷರ ವಿರುದ್ಧ ಸೋಲುವುದರೊಂದಿಗೆ ಅಖಂಡ ಭಾರತದ ಮೇಲೆ ಬ್ರಿಟಿಷರು ತಮ್ಮ ಕಪಿಮುಷ್ಟಿಯನ್ನು ಬಿಗಿಗೊಳಿಸಿದರು.

❑

# ೭. ಕ್ಲೋಸ್‌ಪೇಟೆ ನಿರ್ಮಾಣ

ಕ್ಲೋಸ್‌ಪೇಟೆ ನಿರ್ಮಾಣದ ಬಗ್ಗೆ ಹೇಳುವ ಮುಂಚೆ ದಿವಾನ್ ಪೂರ್ಣಯ್ಯನವರನ್ನು ನೆನಪಿಸಿಕೊಳ್ಳಬೇಕು. ಪೂರ್ಣಯ್ಯನವರು ಹೈದರ್ ಅಲಿ ಹಾಗೂ ಟಿಪ್ಪುವಿನ ಕಾಲದಲ್ಲಿ ಮಂತ್ರಿಯ ಸ್ಥಾನ ಪಡೆದಿದ್ದ ಉನ್ನತ ಅಧಿಕಾರಿ.

೧೭೯೯ರಲ್ಲಿ ಟಿಪ್ಪುವಿನ ಮರಣದ ನಂತರ ತಲೆ ಮರೆಸಿಕೊಂಡಿದ್ದ ಪೂರ್ಣಯ್ಯನವರನ್ನು ಸೇನಾನಿ ಹ್ಯಾರಿಸ್ ಹಾಗೂ ಆರ್ಥರ್ ವೆಲ್ಲೆಸ್ಲಿ ಆದರದಿಂದ ಬರಮಾಡಿಕೊಂಡರು. ಮೈಸೂರು ಸಂಸ್ಥಾನದ ಆಡಳಿತವನ್ನು ತಾವೇ ನೇರವಾಗಿ ವಹಿಸಿಕೊಳ್ಳದೆ ಅದನ್ನು ಪೂರ್ಣಯ್ಯನವರೇ ನಿರ್ವಹಿಸಬೇಕೆಂದು ಕೇಳಿಕೊಂಡರು. ಸಂಸ್ಥಾನದ ಜನರನ್ನು ಶಾಂತಗೊಳಿಸುವುದಕ್ಕೆ ಮುಂಚೆ ಆಳುತ್ತಿದ್ದ ಒಡೆಯರ ರಾಜವಂಶಕ್ಕೆ ಅಧಿಕಾರ ನೀಡಿದರು. ಹಲವಾರು ಒಪ್ಪಂದಗಳಲ್ಲಿ ಮುಖ್ಯವಾದದ್ದು "ಮೈಸೂರು ಸರ್ಕಾರ ರಾಜ್ಯದ ರಕ್ಷಣೆಗೆ ಈಸ್ಟ್ ಇಂಡಿಯಾ ಕಂಪನಿಯ ಸೈನ್ಯದ ವೆಚ್ಚಕ್ಕಾಗಿ ಪ್ರತಿವರ್ಷ ೨೧ ಲಕ್ಷ ಕಂಠೀರಾಯ ಪಗೋಡಾಗಳನ್ನು ನೀಡತಕ್ಕದ್ದು" ಎಂದು. ಇದನ್ನು ಪ್ರತಿವರ್ಷ ಸರಿಯಾದ ಕಾಲಕ್ಕೆ ಬ್ರಿಟಿಷ್ ಸರ್ಕಾರಕ್ಕೆ ಪಾವತಿಸುವ ಜವಾಬ್ದಾರಿ ಪೂರ್ಣಯ್ಯನವರ ಮೇಲೆ ಬಿತ್ತು. ಮಹಾರಾಜರ ಪರವಾಗಿ ಪೂರ್ಣಯ್ಯನವರು ದಿವಾನರಾಗಿ, ಬ್ಯಾರಿ ಕ್ಲೋಸ್ ಈಸ್ಟ್ ಇಂಡಿಯಾ ಕಂಪನಿ ಪರವಾಗಿ, ರಾಜ ಪ್ರತಿನಿಧಿ ಅಥವಾ ರೆಸಿಡೆಂಟ್ ಆಗಿ ನೇಮಕಗೊಂಡರು.

ಆಡಳಿತದ ನಿರ್ವಹಣೆ ಮಾಡುವಾಗ ಪೂರ್ಣಯ್ಯನವರು ಮೈಸೂರು ಬೆಂಗಳೂರು ಮಾರ್ಗವನ್ನು ಅಭಿವೃದ್ಧಿಪಡಿಸಬೇಕೆಂದು ನಿರ್ಧರಿಸಿದರು. ಇದರಲ್ಲಿ




ಮುಖ್ಯವಾದದ್ದು ರಾಮನಗರ ಸ್ಥಳ. ರಾಮನಗರದ ಕಲ್ಲು ಬೆಟ್ಟದ ಪ್ರದೇಶವು ದರೋಡೆಕೋರರಿಂದ ತುಂಬಿದ್ದು ದಾರಿಹೋಕರಿಗೆ, ವ್ಯಾಪಾರಿಗಳಿಗೆ ಕಂಟಕಪ್ರಾಯವಾಗಿತ್ತು. ಟಿಪ್ಪುವಿನ ಕಾಲದಲ್ಲಿ ಶಂಷೇರಾಬಾದ್ ಎಂದು ಕರೆಸಿಕೊಳ್ಳುತ್ತಿದ್ದರೂ ಇಲ್ಲಿ ಅಷ್ಟು ಹೆಚ್ಚು ಜನವಸತಿ ಇರಲಿಲ್ಲ. ಅಲ್ಲೊಂದು ಜನವಸತಿ ಪ್ರದೇಶವನ್ನು ನಿರ್ಮಿಸಿದರೆ ಈ ತೊಂದರೆ ದೂರವಾಗುತ್ತೆಂದು ನಿರ್ಧಾರ ಮಾಡಿ ರೆಸಿಡೆಂಟ್ ಆದ ಬ್ಯಾರಿ ಕ್ಲೋಸ್ ಅವರ ಅನುಮತಿ ಕೋರಿದರು. ಕ್ಲೋಸ್ ಹಾಗೂ ಪೂರ್ಣಯ್ಯನವರ ಸಂಬಂಧ ಸ್ನೇಹಮಯವಾಗಿತ್ತು. ನಿರ್ಮಾಣದ ಅವಶ್ಯಕತೆಯನ್ನು ಅರಿತು ನಗರ ನಿರ್ಮಾಣಕ್ಕೆ ಅನುಮತಿ ನೀಡಿದರು. ಈಗ ರಾಮನಗರವೆಂದು ಕರೆಯಲ್ಪಡುವ ಸ್ಥಳದಲ್ಲಿ ನಗರವೊಂದನ್ನು ಕ್ರಿ.ಶ.೧೮೦೦ ರಲ್ಲಿ ನಿರ್ಮಿಸಿ ಅದಕ್ಕೆ ರೆಸಿಡೆಂಟ್ ಕ್ಲೋಸ್ ಅವರ ಹೆಸರನ್ನೇ ಇಟ್ಟು 'ಕ್ಲೋಸ್‌ಪೇಟೆ' ಎಂದು ನಾಮಕರಣ ಮಾಡಿದರು.

ಇದರ ಒಂದು ಶಿಲಾಶಾಸನವೂ ರಾಮನಗರದಲ್ಲಿದೆ. ಆದರೆ ಇದರಲ್ಲಿ ಪೂರ್ಣಯ್ಯನವರ ಹೆಸರಿಲ್ಲ. ಅದರಲ್ಲಿ "ಕಲೂಸು ಪೇಟೆಯೂ ರಾಜೇ



ಮಹಾರಾಜೇ ಸಾಹೇಬರ ವರುತಂಮ ದೋಸ್ತರಾದ ಕರ್ನಲ್ ಕ್ಲೂಸ ಸಾಹೇಬರ ಹೆಸರಿನಲ್ಲಿ ಶಾಲಿವಾಹನ ಶಕ ೧೭೨೧ನೇ ಸಿದ್ಧಾರ್ಥಿ ಸಂವತ್ಸರದಲ್ಲಿ ಕಟ್ಟಿಸಿದ್ರು" ಎಂದು ನಮೂದಿಸಲಾಗಿದೆ.

ಹೀಗೆ ಒಂದು ಕಾಲದಲ್ಲಿ ಕಂಟಕ ಪ್ರಾಯವಾಗಿದ್ದ ಪ್ರದೇಶವನ್ನು ಜನನಿಬಿಡ ಪ್ರದೇಶವಾಗಿ ಮಾರ್ಪಾಟು ಮಾಡಿದ ಶ್ರೇಯಸ್ಸು ಪೂರ್ಣಯ್ಯನವರಿಗೆ ಸಲ್ಲುತ್ತದೆ.

"ಅಜ್ಜ.." ಎಂದು ಸೋಮು ಮತ್ತೆ ರಾಗವೆಳೆದನು.

ಅಜ್ಜನು ಸೋಮುವಿನತ್ತ ನೋಡಿದನು.

"ಈ ಪ್ರದೇಶದಲ್ಲಿ ನಡೆದ ಸ್ವಾತಂತ್ರ್ಯ ಸಂಗ್ರಾಮದ ಬಗ್ಗೆ ಹೇಳಿ ಅಂದರೆ, ಇತಿಹಾಸದುದ್ದಕ್ಕೂ ಹೇಳಿಕೊಂಡು ಬರುತ್ತಿದ್ದೀರಲ್ಲ?" ಎಂದು ಅಪಸ್ವರ ಎಳೆದ.

ಅಜ್ಜನು ಬೇಸರಪಟ್ಟುಕೊಳ್ಳದೆ ನಸುನಗುತ್ತ "ಅಯ್ಯೋ! ಸಾಮಿ.. ನಾವು ಹುಟ್ಟಿ ಬೆಳೆದ ನಾಡು ನುಡಿಗಳ ಬಗ್ಗೆ ಹೆಚ್ಚು ತಿಳಿದಷ್ಟು ಅದರ ಬಗ್ಗೆ ಅಭಿಮಾನ ಬೆಳೆಯುತ್ತದೆ. ನಮ್ಮವರು, ನಮ್ಮತನವೆಂಬುದು ಪ್ರೀತಿ ಮೂಡಿಸುತ್ತದೆ. ಪ್ರೀತಿ ಇದ್ದಲ್ಲಿ ನಮ್ಮತನವನ್ನು ಪ್ರಗತಿಯೆಡೆಗೆ ಕೊಂಡೊಯ್ಯಲು ಪ್ರಯತ್ನ ಪಡುತ್ತೇವೆ. ವಿಷಮ ಪರಿಸ್ಥಿತಿ ಬಂದಾಗ ಅದರ ರಕ್ಷಣೆಗೆ ಎಂತಹ ತ್ಯಾಗ ಮಾಡುವುದಕ್ಕೂ ಅಂಜುವುದಿಲ್ಲ. ನಮ್ಮತನವನ್ನು, ನಮ್ಮ ನಾಡು ನುಡಿಯನ್ನು ರಕ್ಷಣೆ ಮಾಡುವ ಪಡೆಯನ್ನು ನಿರ್ಮಾಣ ಮಾಡಬೇಕಿದ್ದರೆ, ಅದರ ಬಗ್ಗೆ ಪ್ರೀತಿ, ಅಭಿಮಾನವಿರುವ ಜನರಿರಬೇಕು. ಅದಕ್ಕೆ ದೇಶ ಸುತ್ತಬೇಕು, ಅಲ್ಲಿಯ ಜನರನ್ನು, ಅವರ ಕಷ್ಟ ನಷ್ಟಗಳನ್ನು ತಿಳಿಯಬೇಕು, ಅದರ ಜೊತೆ ಕೋಶ ಓದಬೇಕು. ಇದರಲ್ಲಿ ಪ್ರಮುಖವಾದುದು ನಾಡಿನ, ಜನರ, ದೇಶ ನಡೆದು ಬಂದ ಹಾದಿ. ಇದಕ್ಕೇ ಇತಿಹಾಸ ಅತ್ಯಗತ್ಯ. "ಇತಿಹಾಸ ತಿಳಿಯದವ ಶುದ್ಧ ನಿರ್ಬುದ್ಧ" ಎಂಬ ಬೇಂದ್ರೆ ಅಜ್ಜನ ಮಾತು ಕೇಳಿಲ್ಲವೇ?"

ಸೋಮು ಮಾತನಾಡದೆ ಅಜ್ಜನನ್ನೇ ನೋಡುತ್ತಾ ಕುಳಿತ.

"ನಾನು ಹೇಳಿದ್ದು ಅರ್ಥವಾದರೆ ಮುಂದೆ ಹೇಳಲಿರುವ ಸ್ವಾತಂತ್ರ್ಯ ಸಂಗ್ರಾಮದ ಘಟನೆಗಳು ಮನಸ್ಸಿಗಿಳಿಯುತ್ತವೆ" ಎಂದು ಹೇಳಿ ಅಜ್ಜನು ಕಣ್ಣು ಮುಚ್ಚಿ ಮುಂದುವರಿಸಿದನು.

# ೪. ಬಂಡಾಯದ ಬೀಜಗಳು

೧೮ನೇ ಶತಮಾನದ ಉತ್ತರಾರ್ಧದಲ್ಲಿ ಭಾರತದ ಒಂದೊಂದೇ ಸಂಸ್ಥಾನಗಳು ಬ್ರಿಟಿಷರ ಕೈವಶವಾಗತೊಡಗಿದವು. ಒಪ್ಪಂದದ ಪ್ರಕಾರ ವರ್ಷಕ್ಕೊಮ್ಮೆ ಆಂಗ್ಲರಿಗೆ ಕಂದಾಯ ಕೊಟ್ಟು, ಪಿಂಚಣಿ ಪಡೆದರೆ ಬದುಕು ನಿರಾಳ ಎಂದು ಯೋಚಿಸುತ್ತಿದ್ದ ಅರಸೊತ್ತಿಗೆಗೆ ಆಘಾತ ಕಾದಿತ್ತು. ಪೂರ್ವದಲ್ಲಿ ನಡೆದು ಬರುತ್ತಿದ್ದ ಹಾಗೆಯೇ ಕೃಷಿ, ಕೈಗಾರಿಕೆ, ಕಲೆ, ಧಾರ್ಮಿಕ ಕಾರ್ಯಗಳು ನಡೆಯುತ್ತವೆ ಎಂದು ನೆಮ್ಮದಿಯಿಂದಿದ್ದ ಸಾಮಾನ್ಯ ಜನ, ರೈತಾಪಿ ವರ್ಗಕ್ಕೂ ಕಾಲಕ್ರಮೇಣ ಬ್ರಿಟಿಷರ ಧೂರ್ತತೆ ತಿಳಿಯತೊಡಗಿತು. ಆದರೆ ಕಾಲ ಮಿಂಚಿ ಹೋಗಿತ್ತು. ಭಾರತವೆಲ್ಲವು ಆಂಗ್ಲರ ಕಪಿಮುಷ್ಟಿಯಲ್ಲಿ ಸಿಕ್ಕಿಕೊಂಡಿತ್ತು. ಆಂಗ್ಲರ ದುರಾಡಳಿತದಿಂದ ಬೇಸತ್ತ, ಕ್ರೋಧಗೊಂಡ ಪ್ರಭುಗಳು, ಜನರು, ಅವರ ವಿರುದ್ಧ ಬಂಡಾಯದ ಕಹಳೆ ಊದಿದರು. ಈ ಬಂಡಾಯದ ಕಾರಣಗಳು ಹಲವಾರು. ಪ್ರದೇಶಗಳ, ಸಂಸ್ಥಾನಗಳ ಅನುಗುಣವಾಗಿ ಕಾರಣಗಳೂ ವಿವಿಧ ರೀತಿಯಾಗಿತ್ತು. ಮೈಸೂರು ಸಂಸ್ಥಾನದಲ್ಲಾದ ಬದಲಾವಣೆಗಳು ಹಾಗೂ ಅದು ಹೇಗೆ ೨೦ನೇ ಶತಮಾನದಲ್ಲಿ ರಾಮನಗರದ ಸಾಮಾನ್ಯ ಜನರನ್ನೂ ಸ್ವಾತಂತ್ರ್ಯ ಸಂಗ್ರಾಮಕ್ಕೆ ಧುಮುಕಲು ಪ್ರೇರೇಪಿಸಿತು ಎಂದು ನೋಡೋಣ.

- ಅರಸೊತ್ತಿಗೆ ಹಾಗೂ ಕಂದಾಯ – ೧೭೯೯ರ ಯುದ್ಧದಲ್ಲಿ ಟಿಪ್ಪು ಮಡಿದ ಬಳಿಕ ಆಡಳಿತವನ್ನು ಅವನ ಮಗ ಫತೇ ಹೈದರಿಗೆ ನೀಡದೆ ಒಡೆಯರ್ ವಂಶಸ್ಥರಿಗೆ ನೀಡಲಾಯಿತು. ೫ ವರ್ಷದ ಬಾಲಕ ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರನ್ನು ಸಿಂಹಾಸನದ ಮೇಲೆ ಪ್ರತಿಷ್ಠಾಪನೆ ಮಾಡಲಾಯಿತು. ಆಡಳಿತ ಮತ್ತೆ ತಮ್ಮ ವಂಶದವರಿಗೆ ಮರಳಿದ



ಸನ್ನಿವೇಶದಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರ ತಾಯಿ ಮಹಾರಾಣಿಯವರು ೨೪ ಜೂನ್, ೧೭೯೯ರಲ್ಲಿ ಗವರ್ನರ್ ಜನರಲ್ ಅವರಿಗೆ ಪತ್ರ ಬರೆಯುತ್ತಾರೆ "ನೀವು ನಮ್ಮ ಮಗುವಿಗೆ ಮೈಸೂರು, ಚಿತ್ರದುರ್ಗ ಹಾಗೂ ನಗರ ಪ್ರಾಂತ್ಯಗಳನ್ನು ನೀಡಿದ್ದಲ್ಲದೆ ಪೂರ್ಣಯ್ಯನವರನ್ನು ದಿವಾನರಾಗಿ ಮಾಡಿರುವುದು ನಮಗೆ ಸಂತೋಷವಾಗಿದೆ. ನಲವತ್ತು ವರ್ಷಗಳ ಕಾಲ ರಾಜಮನೆತನದಿಂದ ಕೈತಪ್ಪಿದ ಆಡಳಿತವನ್ನು ಪುನಃ ಸ್ಥಾಪಿಸಿರುವುದಕ್ಕೆ ಕೃತಜ್ಞತೆಗಳು. ಸೂರ್ಯಚಂದ್ರರಿರುವವರೆಗೂ ತಮ್ಮ ಸರ್ಕಾರದ ವಿರುದ್ಧ ಯಾವುದೇ ಅಪರಾಧ ಮಾಡುವುದಿಲ್ಲ". ಒಂದೆಡೆ ಬ್ರಿಟಿಷ್ ಸರ್ಕಾರಕ್ಕೆ ಸಂಸ್ಥಾನವು ಅಧೀನವಾದರೆ ಇನ್ನೊಂದೆಡೆ ಒಪ್ಪಂದದಂತೆ "ಮೈಸೂರು ಸರ್ಕಾರ ರಾಜ್ಯದ ರಕ್ಷಣೆಗೆ ಈಸ್ಟ್ ಇಂಡಿಯಾ ಕಂಪನಿಯ ಸೈನ್ಯದ ವೆಚ್ಚಕ್ಕಾಗಿ ಪ್ರತಿವರ್ಷ ೨೧ಲಕ್ಷ ಕಂಠೀರಾಯ ಪಗೋಡಾಗಳನ್ನು ನೀಡತಕ್ಕದ್ದು" ಎಂಬುದು. ೧೮೦೦–೧೮೨೦ರಲ್ಲಿ ನಡೆದ ಹಲವು ದಂಗೆ, ಯುದ್ಧಗಳಲ್ಲಿ ಮೈಸೂರು ಸೈನ್ಯವನ್ನು ಬಳಸಿಕೊಳ್ಳಲಾಯಿತು. ಇದರಲ್ಲಿ ಮುಖ್ಯವಾಗಿ ೧೮೦೩ರಲ್ಲಿ ನಡೆದ ಆಂಗ್ಲೋ–ಮರಾಠ ಯುದ್ಧದಲ್ಲಿ ಮೈಸೂರು ಸೇನೆ ವೀರಾವೇಶದಿಂದ ಹೋರಾಡಿ ಆಂಗ್ಲರಿಗೆ ಜಯ ತಂದುಕೊಟ್ಟರು. ಇದಲ್ಲದೆ ಚೆನ್ನಗಿರಿಯ ದೊಂಡೋಜಿ ವಾಘ ಹಾಗೂ ಬಲ್ಲಂ ರಾಜನ ದಂಗೆಗಳನ್ನು ಹತ್ತಿಕ್ಕಲು ಮೈಸೂರು ಸೇನೆಯನ್ನು ಬಳಸಿಕೊಳ್ಳಲಾಯಿತು.

ಒಪ್ಪಂದದಂತೆ ಪ್ರತಿ ವರ್ಷ ೨೧ ಲಕ್ಷ ಕಂಠೀರಾಯ ಪಗೋಡಾಗಳನ್ನು ನೀಡುವ ಜವಾಬ್ದಾರಿ ಪೂರ್ಣಯ್ಯನವರ ಮೇಲೆ ಬಿತ್ತು. ೧೭೯೯ರಿಂದ ೧೮೧೨ರವರೆಗೆ ದಿವಾನರಾಗಿದ್ದ ಪೂರ್ಣಯ್ಯನವರು ಮೈಸೂರು ರಾಜ್ಯ ಆರ್ಥಿಕವಾಗಿ ಸುಭದ್ರತೆ ಹೊಂದುವುದರಲ್ಲಿ ಬಹಳಷ್ಟು ಶ್ರಮಿಸಿದರು. ಹಾಗೆ ಪ್ರತಿ ವರ್ಷವೂ ತಪ್ಪದೆಯೇ ಒಪ್ಪಂದದಂತೆ ಆಂಗ್ಲರಿಗೆ ಕಂದಾಯದ ಹಣವನ್ನು ತಲುಪಿಸುತ್ತಿದ್ದರು. ರಾಜ್ಯದ ಆದಾಯ ಪ್ರಮುಖವಾಗಿ ಭೂಕಂದಾಯ, ಸೇಯರ್, ಹೆಂಡ ಮತ್ತು ಹೊಗೆಸೊಪ್ಪು. ಅದರಲ್ಲಿ ಭೂಕಂದಾಯದ ಪಾಲು ಶೇ.೮೮ ರಷ್ಟು. ಪೂರ್ಣಯ್ಯ ಭೂಕಂದಾಯದ

ಜೊತೆ ಮನೆ ಕಂದಾಯ ಮತ್ತು ನೇಗಿಲ ತೆರಿಗೆ ಸಹ ವಿಧಿಸಿದರು. ರೈತರು ಕಂದಾಯವನ್ನು ಹಣದ ರೂಪದಲ್ಲಿ ಅಥವಾ ಧಾನ್ಯದ ರೂಪದಲ್ಲಿ ನೀಡಬೇಕಿತ್ತು. ಇದರೊಂದಿಗೆ ಪೂರ್ಣಯ್ಯನವರು 'ಷರತ್ತು ತೆರಿಗೆ' ಎಂಬ ಪದ್ಧತಿಯನ್ನೂ ತಂದರು. ಅದರ ಪ್ರಕಾರ ಅಮಲ್ದಾರನು ಸರ್ಕಾರಕ್ಕೆ ಪ್ರಸ್ತುತ ವರ್ಷದಲ್ಲಿ ಇಷ್ಟು ಕಂದಾಯ ವಸೂಲಿ ಮಾಡುತ್ತಿದ್ದೇನೆಂದು ಬರೆದು ಕೊಡಬೇಕಿತ್ತು. ಅದಕ್ಕಿಂತ ಕಡಿಮೆ ವಸೂಲಿ ಆದರೆ, ಅವರೇ ತುಂಬಿಕೊಡುವುದಾಗಿ ಬರೆದುಕೊಡುತ್ತಿದ್ದರು. ಇದರಿಂದ ಹೆಚ್ಚು ಹಣ ಖಜಾನೆಗೆ ಹರಿದು ಬರುತ್ತಿತ್ತಾದರೂ, ಅಮಲ್ದಾರರು ತಮ್ಮ ಅಧಿಕಾರ ದುರುಪಯೋಗ ಪಡಿಸಿಕೊಂಡು ಜನರಿಗೆ ಹಿಂಸೆ ನೀಡತೊಡಗಿದರು. ಪ್ರೇರೇಪಣೆ ನೀಡಿತು. ಅಲ್ಲದೆ ರಾಜ್ಯದ ಆಡಳಿತದ ಮೇಲೆ ದುಷ್ಪರಿಣಾಮ ಬೀರತೊಡಗಿತು. ಅಸಹನೆಯ ಕಟ್ಟೆಯೊಡೆದು ೧೮೩೧ರಲ್ಲಿ ಮೈಸೂರು ದಂಗೆಯೆಂದು ಕರೆಯಲ್ಪಡುವ ಇದು ಇಂದಿನ ಶಿವಮೊಗ್ಗ ಜಿಲ್ಲೆಯ 'ನಗರ'ದಲ್ಲಿ ಪ್ರಾರಂಭವಾಯಿತು. ಇದಕ್ಕೆ ಮೂಲ ಕಾರಣ ಕಂದಾಯ ಪದ್ಧತಿ. ಶಿವಪ್ಪನಾಯಕನ ಶಿಸ್ತು ಕಂದಾಯ ಪದ್ಧತಿಗೆ ಒಗ್ಗಿಹೋಗಿದ್ದ ಜನರಿಗೆ 'ಷರತ್ತು ತೆರಿಗೆ' ಪದ್ಧತಿಯಿಂದ ಅಮಲ್ದಾರರಿಂದ ಹಿಂಸೆ, ಮಧ್ಯವರ್ತಿಗಳಿಗೆ ಅನವಶ್ಯಕ ಲಂಚ ಕೊಡಬೇಕಾದ ಪರಿಸ್ಥಿತಿ ಒದಗಿ ಬಂತು. ಇದರ ಜೊತೆ ಸೇಯರ್ ತೆರಿಗೆ ಕೂಡ ಸೇರಿಕೊಂಡಿತು. ಇದು ಹೆದ್ದಾರಿಗಳ ಮೇಲೆ ಸಾಗುವ ವಸ್ತುಗಳ ಮೇಲೆ, ಸಿದ್ಧಪಡಿಸಿದ ವಸ್ತುಗಳ ಮೇಲೆ ಹಾಗೂ ಮಾರಾಟವಾದ ವಸ್ತುಗಳ ಮೇಲೆ ತೆರಿಗೆ ವಿಧಿಸುವ ಪದ್ಧತಿ. ಇದರ ವಿರುದ್ಧ ಕೆಳದಿ ಪಾಳೆಯಗಾರರು, ರೈತಾಪಿ ವರ್ಗ ಸರ್ಕಾರದ ವಿರುದ್ಧ ತಿರುಗಿ ಬಿದ್ದರು. ಕೆಲವೇ ತಿಂಗಳುಗಳಲ್ಲಿ ಇದು ಕಾಡ್ಗಿಚ್ಚಿನಂತೆ ಸಂಸ್ಥಾನದೆಲ್ಲೆಡೆ ಹರಡಿತು.

ನಗರದಿಂದ ಪ್ರಾರಂಭವಾಗಿ ಶಿವಮೊಗ್ಗ, ಚನ್ನಗಿರಿ, ಹೊನ್ನಾಳಿ, ದೊಡ್ಡಬಳ್ಳಾಪುರ, ಮಧುಗಿರಿ ಹಾಗೂ ಚನ್ನರಾಯಪಟ್ಟಣಕ್ಕೂ ವ್ಯಾಪಿಸಿತು. ಹಲವಾರು ಕಡೆಗಳಲ್ಲಿ ಅಮಲ್ದಾರ, ಶಿರಸ್ತೇದಾರ, ಶೇಕದಾರ ಇವರನ್ನು ಜನರೇ ಮರಕ್ಕೆ ಕಟ್ಟಿ ದೊಣ್ಣೆಗಳಿಂದ ಥಳಿಸಿದ ಘಟನೆಗಳು ನಡೆದವು. ಈ ದಂಗೆಯನ್ನು ಅಡಗಿಸಲು ಸ್ಥಳೀಯ ಅಧಿಕಾರಿಗಳು



ಅಸಮರ್ಥರಾದರು. ಕಚೇರಿಗಳಿಗೂ ಹೋಗದೆ ಕಾಡುಮೇಡುಗಳಲ್ಲಿ ಅವಿತುಕೊಳ್ಳತೊಡಗಿದರು. ಕಡೆಗೆ ಮಹಾರಾಜರೇ ಈ ದಂಗೆಯನ್ನಡಗಿಸಲು ಖುದ್ದಾಗಿ ಹೊರಟರು. ೧೮೩೦ರ ಡಿಸೆಂಬರ್ ೧೪ರಿಂದ ೧೮೩೧ರ ಜನವರಿ ೧೦ರವರೆಗೆ ಒಟ್ಟು ೨೬ ದಿನ ಸತತವಾಗಿ ಸಂಚಾರ ಮಾಡಿದರು. ದಂಗೆಯೆದ್ದಿದ್ದ ಹಲವಾರು ರೈತರನ್ನು ಶಿಕ್ಷೆಗೆ ಗುರಿಪಡಿಸಲಾಯಿತು. ಇದರಲ್ಲಿ ಹಲವರನ್ನು ಗುಂಡಿಟ್ಟು ಕೊಲ್ಲಲಾಯಿತು. ಹೊನ್ನಾಳಿಯ ಕೋಟೆಯನ್ನು ವಶಪಡಿಸಿಕೊಂಡ ೧೮೦ ದಂಗೆಕೋರರಲ್ಲಿ ೯೯ ಜನರನ್ನು ಕೊಲ್ಲಲಾಯಿತು. ನಗರದಲ್ಲೂ ಈ ಶಿಕ್ಷೆ ಮುಂದುವರೆಯಿತು. ದಂಗೆಯ ನಂತರ ರಚಿಸಿದ ಸಮಿತಿಯ ಪ್ರಕಾರ ದಂಗೆಯಲ್ಲಿ ೨೪೦ ಜನ ಪ್ರಾಣ ಕಳೆದುಕೊಂಡರು. ಆದರೆ ಇದರ ನಿಜವಾದ ಸಂಖ್ಯೆ ಇದರ ೨-೩ ರಷ್ಟಿತ್ತು ಎಂದು ಅಂದಾಜಿಸಲಾಗಿದೆ.

ಮೈಸೂರು ದಂಗೆ ಸಂಸ್ಥಾನದ ವಿರುದ್ಧ, ಹೆಚ್ಚಿನ ಕಂದಾಯ, ಲಂಚಗಳ ರೂಪದಲ್ಲಿ ನಡೆದ ಶೋಷಣೆಗೆ ಕೊಟ್ಟ ಪ್ರತ್ಯುತ್ತರವಾಗಿತ್ತು. ಸಾಮಾನ್ಯ ಜನರಲ್ಲಿ ಈ ಘಟನೆ ಆಂಗ್ಲರ ವಿರುದ್ಧ, ಅವರು ನಡೆಸುತ್ತಿದ್ದ ಅಧಿಕಾರದ ವಿರುದ್ಧ ಅಸಹನೆ, ಕ್ರೋಧ ಉಂಟುಮಾಡತೊಡಗಿತು. ಇನ್ನೊಂದೆಡೆ ದಂಗೆಯನ್ನು ಸರಿಯಾದ ರೀತಿಯಲ್ಲಿ ನಿಭಾಯಿಸಲಿಲ್ಲವೆಂದು, ಕಂಪನಿಗೆ ಬರುತ್ತಿದ್ದ ಆದಾಯ ಕಡಿಮೆಯಾಯಿತೆಂದು ಬ್ರಿಟಿಷ್ ಸರ್ಕಾರ ಅಕ್ಟೋಬರ್ ೧೯, ೧೮೩೧ರಲ್ಲಿ ಮಹಾರಾಜರ ಆಡಳಿತವನ್ನು ಬ್ರಿಟಿಷ್ ಸರ್ಕಾರದ ಸುಪರ್ದಿಗೆ ತೆಗೆದುಕೊಳ್ಳುತ್ತಿರುವುದಾಗಿ ಪತ್ರ ಬರೆದರು. ಈ ನಿರ್ಧಾರದಿಂದ ಮಹಾರಾಜರು ಅಧಿಕಾರ ಕಳೆದುಕೊಂಡು ಓರ್ವ 'ಪಿಂಚಣಿದಾರ'ರಾದರು. ೧೮೮೧ರಲ್ಲಿ ಈ ಅಧಿಕಾರವನ್ನು ಹಿಂತಿರುಗಿಸಿದರೂ, ಇದು ಕೇವಲ ತೆರೆಮರೆಯ ನಾಟಕವಾಗಿತ್ತು. ೧೭೯೯ ಒಪ್ಪಂದದ ಪ್ರಕಾರ ವಾರ್ಷಿಕ ೨೧ ಲಕ್ಷವನ್ನು ೩೫ ಲಕ್ಷಕ್ಕೆ ಏರಿಸಿದರು. ಅದರ ಜೊತೆ ಬಾಕಿ ಇರುವ ೮೦ ಲಕ್ಷವನ್ನು ಸೇರಿಸಿದರು. ೧೮೯೩–೯೫ರಲ್ಲಿ ಮೈಸೂರಿನ ದಿವಾನರಾಗಿದ್ದ ಶೇಷಾದ್ರಿ ಅಯ್ಯರ್ ಅವರು ಇದರ ವಿರುದ್ಧ ಹಲವಾರು

ಮನವಿ ಪತ್ರಗಳನ್ನು ಗವರ್ನರ್ ಜನರಲ್ ಅವರಿಗೆ ಬರೆದರು. ಮೈಸೂರು ಸಂಸ್ಥಾನವು ೨ ಅಶ್ವದಳದ ತುಕುಡಿಯನ್ನೂ ನೀಡುವುದಾಗಿ ಹೇಳಿದರು. ೧೮೯೯ರಲ್ಲಿ ಬ್ರಿಟಿಷ್ ಸರ್ಕಾರ ಈ ೨ ಅಶ್ವದಳವನ್ನು ತೆಗೆದುಕೊಂಡರಲ್ಲದೆ ಶೇಷಾದ್ರಿ ಅಯ್ಯರ್ ಅವರ ಮನವಿಗಳಿಗೆ ಸ್ಪಂದಿಸಲೂ ಇಲ್ಲ. ಇವೆಲ್ಲದರಿಂದಾಗಿ ಕಡೆಗೆ ರೈತಾಪಿ ವರ್ಗದ, ಸಾಮಾನ್ಯ ಜನರ ಮೇಲೆ ಹೆಚ್ಚಿನ ತೆರಿಗೆ ವಿಧಿಸಲಾಯಿತು.

ಭಾರತದಲ್ಲಿ ಕ್ಷಾಮಗಳು ಬಂದಾಗಲೂ ಕಂದಾಯದಲ್ಲಿ ಮಾಫಿ ಇರಲಿಲ್ಲ. ೧೮೭೬–೭೮ರ ನಡುವೆ ಕ್ಷಾಮಕ್ಕೆ ಲಕ್ಷಾಂತರ ಜನ ಸತ್ತರು. ಮೈಸೂರು ಸಂಸ್ಥಾನದಲ್ಲೇ ೯ ಲಕ್ಷ ಜನ ಉಪವಾಸ ನರಳಿ ಸತ್ತರು. ಇದೇ ಕಾಲಕ್ಕೆ ವಿಕ್ಟೋರಿಯಾ ರಾಣಿಯ ಪಟ್ಟಬಂಧ ಉತ್ಸವದ ನೆನಪಿಗಾಗಿ ದಿಲ್ಲಿ ಮತ್ತು ಇತರೆಡೆ ಉತ್ಸವ ನಡೆಸುವ ದುಂದು ವೆಚ್ಚ ಜನರನ್ನು ಕಂಗೆಡಿಸಿತು.

- **ಕಚ್ಚಾ ಮಾಲಿನ ಉತ್ಪಾದನೆ** – ಮೈಸೂರು ಸಂಸ್ಥಾನವು ೧೮೦೦ಕ್ಕೆ ಮುಂಚೆಯೇ ನೇಯ್ಗೆ ಉದ್ಯಮಕ್ಕೆ ಪ್ರಸಿದ್ಧಿ ಪಡೆದಿತ್ತು. ಕ್ಲೋಸ್ ಪೇಟೆ ನಗರದ ರೇಷ್ಮೆ ಉದ್ಯಮ, ಬೆಂಗಳೂರಿನ ಗೋಣಿಗಳು, ಎಣ್ಣೆ, ಕಡೂರು, ಶಿವಮೊಗ್ಗ ಸೀಮೆಯಲ್ಲಿ ಹತ್ತಿ ಇವೆಲ್ಲವೂ ಸಂಸ್ಥಾನದಲ್ಲಿ ಅಲ್ಲದೆ ದೇಶದೆಲ್ಲೆಡೆ, ಹೊರ ರಾಷ್ಟ್ರಗಳಿಗೂ ರಫ್ತಾಗುತ್ತಿತ್ತು. ಆದರೆ ಬ್ರಿಟಿಷ್ ವ್ಯಾಪಾರ ಹಾಗೂ ಆರ್ಥಿಕ ನೀತಿಯಿಂದಾಗಿ ಈ ಉದ್ಯಮಗಳೆಲ್ಲವೂ ೨ ದಶಕದೊಳಗೆ ಹಾಳುಬಿದ್ದವು. ಭಾರತದಿಂದ ಇಂಗ್ಲೆಂಡಿಗೆ ಹೋಗುತ್ತಿದ್ದ ಮಸ್ಲಿನ್ ಮತ್ತು ಕ್ಯಾಲಿಕೋ ಬಟ್ಟೆಗಳ ಮೇಲೆ ಹದಿನೆಂಟನೆಯ ಶತಮಾನದಲ್ಲಿ ಶೇಕಡಾ ೨೭ರಿಂದ ೭೧ರವರೆಗೆ ಆಮದು ತೆರಿಗೆ ಹೇರಲಾಗುತ್ತಿತ್ತು. ಇದರಿಂದ ಭಾರತೀಯ ಕೈಮಗ್ಗಗಳಿಗೆ ಬ್ರಿಟಿಷ್ ಮಾರುಕಟ್ಟೆ ಇದ್ದೂ ಇಲ್ಲದಂತೆ ಆಯಿತು. ಅದೇ ಕಾಲಕ್ಕೆ ಭಾರತಕ್ಕೆ ಬರುತ್ತಿದ್ದ ಇಂಗ್ಲೆಂಡಿನ ಅರಿವೆಯ ಮೇಲೆ ನಾಮಮಾತ್ರ ಸುಂಕ ಹೇರಲಾಗುತ್ತಿತ್ತು. ಬ್ರಿಟನ್ನಿನಲ್ಲಿ ಭಾರತೀಯ ಬಟ್ಟೆಗಳ ಮೇಲೆ ಭಾರಿ ಪ್ರಮಾಣದ ಸುಂಕವನ್ನು ಹೇರದಿದ್ದರೆ ಪೈಸ್ಲೆ ಮತ್ತು ಮ್ಯಾಂಚೆಸ್ಟರ್ ಬಟ್ಟೆ ಗಿರಣಿಗಳನ್ನು ಅವುಗಳು ಆರಂಭವಾಗುತ್ತಲೇ ಮುಚ್ಚಬೇಕಾದ ಪರಿಸ್ಥಿತಿ ಬರುತ್ತದೆ ಎಂದು ೧೮೧೩ರ ಸ್ಥಿತಿಗತಿಗಳ ವಿಚಾರ ತಿಳಿಸುತ್ತ ಆಂಗ್ಲ ಇತಿಹಾಸಕಾರ ವಿಲ್ಸನ್ ಹೇಳುತ್ತಾರೆ. ಶೀಘ್ರವೇ ಭಾರತದ ಬಟ್ಟೆ, ರೇಷ್ಮೆ ಇಂಗ್ಲೆಂಡಿಗೆ ರಫ್ತಾಗದ ಸ್ಥಿತಿ ಬಂದಿತು. ಬ್ರಿಟಿಷರು ತಮ್ಮ ಕೈಗಾರಿಕೆಗಳ ಹಿತವನ್ನು ರಕ್ಷಿಸಿ ಭಾರತದ ಕೈಗಾರಿಕೆಗಳನ್ನು ಧ್ವಂಸ ಮಾಡಿದರು. ಇದರ ನಂತರ ಇದೆ ವ್ಯಾಪಾರ ನೀತಿಯನ್ನು ಇತರ ಮಾಲುಗಳಿಗೂ ಅನ್ವಯಿಸಿದರು. ಎಣ್ಣೆ, ಗೋಣಿ, ಉಪ್ಪು ಎಲ್ಲವೂ ಇಂಗ್ಲೆಂಡಿನಿಂದ ಬರುವಂತಾಯಿತು. ಇದರ ವ್ಯಾಪಾರವನ್ನೇ ನಂಬಿಕೊಂಡು ಬದುಕುತ್ತಿದ್ದ ಗೋಣಿಗರು, ಉಪ್ಪಾರರು, ಗಾಣಿಗ ವೃತ್ತಿಯವರ ಬದುಕು ಅತಂತ್ರವಾಯಿತು. ಮಧ್ಯಯುಗದಲ್ಲಿ ಪ್ರಪಂಚಕ್ಕೆ ತನ್ನ ಕರಕುಶಲತೆಯಿಂದ ಪ್ರಸಿದ್ಧವಾದ ಭಾರತ, ಬ್ರಿಟಿಷ್ ಆಡಳಿತದಿಂದಾಗಿ ಕೇವಲ ಬ್ರಿಟಿಷ್ ಕಾರ್ಖಾನೆಗಳಿಗೆ ಕಚ್ಚಾ ಮಾಲನ್ನು ಪೂರೈಸುವ ದೇಶವಾಯಿತು.

  ೧೯ನೇ ಶತಮಾನದ ಆರಂಭದವರೆಗೆ ಕರ್ನಾಟಕವೂ ಕೈಮಗ್ಗದ ಉದ್ದಿಮೆಯಲ್ಲಿ ವ್ಯಾಪಕವಾಗಿ ತೊಡಗಿತ್ತು. ಬ್ರಾಹ್ಮಣೇತರ ಎಲ್ಲ ಜಾತಿಯ ಮನೆಗಳಲ್ಲೂ ಮಹಿಳೆಯರು ಮನೆಯಲ್ಲಿ ನೂಲುತ್ತಿದ್ದರು. ೧೮೦೦ರಲ್ಲಿ ದಿನವಿಡೀ ಚರಕದಲ್ಲಿ ನೂಲುವ ಹೆಂಗಸು ಹೊಲದಲ್ಲಿ ದುಡಿಯುವವರು ಪಡೆಯುವಷ್ಟೇ ಕೂಲಿಯನ್ನು ಪಡೆಯುತ್ತಿದ್ದಳೆಂದು ಆಂಗ್ಲ ಕಥನಕಾರ ಬುಕಾನನ್ ಹೇಳುತ್ತಾನೆ. ಇಂಗ್ಲೆಂಡಿನ ಕೈಗಾರಿಕಾ ಕ್ರಾಂತಿಯಿಂದಾಗಿ ಭಾರತದ ಕೈಮಗ್ಗದ ಉದ್ದಿಮೆ ನೆಲಕಚ್ಚಿದಾಗ ಕೋಟ್ಯಾವಧಿ ಹೆಂಗಸರು ಆರ್ಥಿಕ ಸ್ವಾತಂತ್ರ್ಯದಿಂದ ವಂಚಿತರಾಗಿ ಮೂಲೆಗುಂಪಾಗುವ ಸ್ಥಿತಿಗೆ ಬಂದರು.

- **ಮಿಷನರಿ** – ಆರಂಭದಲ್ಲಿ ಕ್ರಿಶ್ಚಿಯನ್ ಮಿಶನರಿಗಳ ಭಾರತ ಪ್ರವೇಶಕ್ಕೆ ಪ್ರತಿಬಂಧವಿದ್ದರೂ ೧೮೧೩ರ ಚಾರ್ಟರ್ ಆಕ್ಟ್ ಮೇರೆಗೆ ಮಿಶನರಿಗಳ ಪ್ರವೇಶಕ್ಕೆ ಅವಕಾಶ ನೀಡಲು ನಿರ್ಣಯವಾಯಿತು. ಅಂದಿನಿಂದ ಮಿಶನರಿಗಳು ಭಾರತಕ್ಕೆ ಬಂದು ತಮ್ಮ ಪ್ರಚಾರ ಮಾಡುವುದೂ, ಹಿಂದೂ ಹಾಗೂ ಇಸ್ಲಾಂ ಧರ್ಮಗಳ ಅವಹೇಳನ ಮಾಡುವುದೂ, ನಾನಾ ವಿಧಾನಗಳಿಂದ ಜನರ ಮತಾಂತರ ಮಾಡುವುದೂ ಹೆಚ್ಚಿ ಭಾರತೀಯರಿಗೆ ಆಂಗ್ಲರ ಬಗ್ಗೆ ಅಸಮಾಧಾನ ಬೆಳೆಯಲು ಕಾರಣವಾಯಿತು. ಮಿಷನರಿಗಳು

ಸ್ಥಾಪಿಸಿದ ಶೈಕ್ಷಣಿಕ ಸಂಸ್ಥೆಗಳಿಗೆ ನೌಕರಿ ಆಸೆಯಿಂದ ಪ್ರವೇಶಿಸುತ್ತಿದ್ದ ಭಾರತೀಯ ಮಕ್ಕಳ ಪಾಶ್ಚಾತ್ಯೀಕರಣ, ಮತಾಂತರ, ಜನರಲ್ಲಿ ಗಾಬರಿ ಹುಟ್ಟಿಸಿತು. ಸರಕಾರೀ ಶಾಲೆಗಳಲ್ಲಿ, ಜೈಲಿನಲ್ಲಿ ಎಲ್ಲ ಕಡೆಯೂ ಬೈಬಲ್ ಪಾಠ ಕಡ್ಡಾಯವಾಯಿತು. ನೂತನವಾಗಿ ಬಂದ ರೈಲುಗಳಲ್ಲಿ ಎಲ್ಲ ಜಾತಿಯವರೂ, ಸರ್ವಧರ್ಮೀಯರೂ ಒಟ್ಟಿಗೆ ಕೂರಬೇಕಾದ, ಇರಬೇಕಾದ ಪ್ರಸಂಗಗಳು ಬಂದಾಗ ಇವು ನಮ್ಮ ಜಾತಿ, ಧರ್ಮ ಕೆಡಿಸಲು ನಡೆಸಿರುವ ಪಿತೂರಿಗಳು ಎಂಬ ಜನರ ನಂಬುಗೆ ಬಲವಾಯಿತು.

- **ದತ್ತಿ ಭೂಮಿಯನ್ನು ಕಸಿಯುವುದು** – ಮಠಗಳಿಗೂ. ಧಾರ್ಮಿಕ ಕೇಂದ್ರಗಳಿಗೂ, ಶಿಕ್ಷಣ ಸಂಸ್ಥೆಗಳಿಗೂ ಪರಂಪರಾಗತವಾದ ಆಳರಸರು ನೀಡುತ್ತಿದ್ದ ದತ್ತಿಗಳು ಮತ್ತು ನಿಯಮಿತವಾಗಿ ನೀಡುತ್ತಿದ್ದ ದೇಣಿಗೆಗಳು ನಿಂತಾಗ ಅಂಥ ಸಂಸ್ಥೆಗಳು ಮುಚ್ಚಬೇಕಾದ ಮತ್ತು ಅವುಗಳನ್ನು ಅವಲಂಬಿಸಿ ಬದುಕಿದ್ದ ಜನರ ಸಂಕಷ್ಟಗಳಿಗೆ ಒಳಗಾದ ವಿಚಾರವನ್ನು ಇಲ್ಲಿ ಉಲ್ಲೇಖಿಸಬಹುದು. ಪಟ್ಟಣದಲ್ಲಿ ಇನಾಮ್ ಕಮೀಶನ್ ಭಾರೀ ಪ್ರಮಾಣದಲ್ಲಿ ಇನಾಮು ಭೂಮಿಗಳನ್ನು ಕಸಿದುಕೊಂಡು ಅನೇಕ ಜನರನ್ನು ನಿರ್ವಸಿತರನ್ನಾಗಿ ಮಾಡಿತು. ೧೯ನೆಯ ಶತಮಾನದ ಆರಂಭದಿಂದಲೇ ತಮಗೆ ಅನಧಿಕೃತವೆಂದು ಕಂಡುಬಂದ ಸರ್ವಮಾನ್ಯದ ದತ್ತಿ ಭೂಮಿಗಳನ್ನು ಕಸಿದುಕೊಳ್ಳುವದು ಇಲ್ಲವೇ ಅವುಗಳ ಮೇಲೆ ಕಂದಾಯ ಹೇರುವ ನಿಲುವನ್ನು ಬ್ರಿಟಿಷ್ ಸರ್ಕಾರ ಎಲ್ಲೆಡೆ ನಡೆಸಿತ್ತು.

- **ಆಡಳಿತ** – ಸ್ಥಳೀಯ ಪೊಲೀಸ್ ಪದ್ಧತಿಯು ಆಯಾ ಗ್ರಾಮಾಧಾರಿತ ವಾಗಿದ್ದು ಆಯಾ ಗ್ರಾಮದ ಕಳ್ಳರು, ಹೊರಗಿನಿಂದ ಬರುವ ಅಪರಿಚಿತರ ಬಗ್ಗೆ ಜಾಗರೂಕವಾಗಿರುತ್ತಿತ್ತು. ಜಮೀನ್ದಾರರ ನಿಯಂತ್ರಣಕ್ಕೆ ಒಳಗಾಗಿ ಈ ವ್ಯವಸ್ಥೆಯನ್ನು ರದ್ದು ಮಾಡಿದ ಕಾರ್ನ್ವಾಲ್ಲಿಸ್ ಸರಕಾರ ನಿಯಂತ್ರಿತ ಪೊಲೀಸ್ ಪಡೆಯನ್ನು ಸೃಷ್ಟಿಸಿದಾಗ, ಈ ಕೇಂದ್ರ ನಿಯಂತ್ರಿತ ವ್ಯವಸ್ಥೆಯು ತೀರಾ ಅಸಮರ್ಪಕ ವೆನಿಸಿತು. ದರೋಡೆಗಳು, ಕಳ್ಳತನ, ಕೊಲೆಗಳು ಹೆಚ್ಚಿ ಬ್ರಿಟಿಷ್ ರಾಜ್ಯವೆಂದರೆ ಅಶಾಂತಿಯ ರಾಜ್ಯವೆಂಬ ಭಾವನೆ ಬರುವಂತಾಯಿತು. ಇನ್ನೊಂದೆಡೆ ತೆರೆದ ಚಾವಡಿಯಲ್ಲಿ ಹಿಂದಿನ ಆಡಳಿತ ಕಚೇರಿಗಳಿದ್ದರೆ ಈಗ ನಾಲ್ಕು ಗೋಡೆಗಳಿಂದ ಮುಚ್ಚಿದ ಕಚೇರಿಗಳು ಬಂದವು. ಜನಸಾಮಾನ್ಯರಿಗೆ ಅಧಿಕಾರಿಗಳ ಕಣ್ಣಿಗೆ ಬಿದ್ದು ತಮ್ಮ ಅಹವಾಲನ್ನು ಹೇಳಿಕೊಳ್ಳುವ ಸ್ಥಿತಿ ಇಲ್ಲದಂತೆ ಆಯಿತು. ಕೇವಲ ಕಾಗದ ಪತ್ರಗಳಿಂದ ನಡೆಯುವ, ಯಂತ್ರದಂತೆ ಕೆಲಸ ಮಾಡುವ ಆಡಳಿತ ವ್ಯವಸ್ಥೆ ಮಾನವೀಯ ಅಂಶಗಳ ಕಡೆ ಗಮನ ಕೊಡಲು ಅಸಮರ್ಪಕವಾಗಿ ಜನರ ವಿಶ್ವಾಸ, ಒಲವುಗಳಿಗೆ ಎರವಾಯಿತು.

- **ಅರಣ್ಯ ಸಂಪತ್ತು** – ೧೮೦೦ರ ನಂತರ ಬ್ರಿಟಿಷ್ ಸರ್ಕಾರದ ಕಣ್ಣು ಹೇರಳವಾಗಿದ್ದ ಅರಣ್ಯ ಸಂಪತ್ತಿನ ಮೇಲೆ ಬಿತ್ತು. ಮೊದಲನೆಯದು ಮರಗಳು. ತಮ್ಮ ಹಡಗುಗಳಿಗೆ ಹಾಗೂ ನಂತರ ರೈಲು ಹಳಿಗಳಿಗೆ ಅಸಂಖ್ಯಾತ ಮರಗಳ ಮಾರಣ ಹೋಮವಾಯಿತು. ೧೮೦೭ರಲ್ಲಿ ತೇಗ, ಹೊನ್ನೆ ಮರಗಳನ್ನು ಸರ್ಕಾರದ ಸುಪರ್ದಿಗೆ ತೆಗೆದುಕೊಂಡು ಇದನ್ನು ಸಾಮಾನ್ಯ ಜನರು, ಆದಿವಾಸಿಗಳು ಕಡಿಯಕೂಡದೆಂದು ಕಾನೂನು ತಂದರು. ದಕ್ಷಿಣ ಭಾರತದಿಂದ ಮರಗಳು ಶ್ರೀಲಂಕ, ಸೌದಿ ಅರೇಬಿಯಾದಂತಹ ದೇಶಗಳಿಗೂ ರಫ್ತಾಗತೊಡಗಿದವು.

ಎರಡನೆಯದು ಗಂಧದ ಮರ. ಗಂಧದಗುಡಿಯೆಂದೇ ಪ್ರಖ್ಯಾತವಾಗಿದ್ದ ಮೈಸೂರು ಸಂಸ್ಥಾನದ ಗಂಧದ ಮರಗಳನ್ನು ಎಣ್ಣೆಗಾಗಿ ಬೆಳೆಸಲು ಉಪಯೋಗಿಸಕೊಳ್ಳಲಾಯಿತು. ಸಾವಿರಾರು ಚದರ ಅರಣ್ಯ ಜಾಗವನ್ನು ಗಂಧದ ಮರ ಬೆಳೆಸುವುದಕ್ಕೆ ನಿಯೋಜಿಸಲಾಯಿತು. ಇದರಿಂದ ಕಾಡಿನಲ್ಲಿ ವಾಸಿಸುತ್ತಿದ್ದ ಆದಿವಾಸಿ ಜನರಿಗೆ ತೊಂದರೆಯಾಗತೊಡಗಿತು. ಕಬ್ಬಿಣ, ಕಲ್ಲಿದ್ದಲು ಇವುಗಳಿಗೂ ಅರಣ್ಯವನ್ನು ಲೂಟಿ ಮಾಡತೊಡಗಿದರು. ೧೮೮೨ರಲ್ಲಿ ಕಾನೂನನ್ನು ತಂದು ಅರಣ್ಯ ಪ್ರದೇಶವನ್ನೆಲ್ಲ ಸರ್ಕಾರದ ಸುಪರ್ದಿಗೆ ತೆಗೆದುಕೊಳ್ಳಲಾಯಿತು. ಸಹಸ್ರಾರು ವರ್ಷಗಳ ಕಾಲ ಅಲ್ಲಿ ನೆಲೆಸಿದ್ದ ಆದಿವಾಸಿ ಜನರನ್ನು ಒಕ್ಕಲೆಬ್ಬಿಸಲಾಯಿತು.

ಹೀಗೆ ಹಲವಾರು ಕಾರಣಗಳು, ಅರಸರಿಂದ ಆದಿವಾಸಿಗಳವರೆಗೆ, ಹಲವು ವಿವಿಧ ಜನರನ್ನು ಬ್ರಿಟಿಷ್ ಸರ್ಕಾರದ ವಿರುದ್ಧ ಬಂಡೇಳಲು ಪ್ರೇರೇಪಿಸಿದವು.

❑

# ೫. ಮೈಸೂರು ಸಂಸ್ಥಾನದಲ್ಲಿ ಸ್ವಾತಂತ್ರ್ಯ ಹೋರಾಟದ ಉಗಮ

ಇತರೆ ಸಂಸ್ಥಾನಗಳಲ್ಲಿ ಆದ ದಂಗೆ, ಹಿಂಸೆ, ಕ್ರಾಂತಿ ಮೈಸೂರು ಸಂಸ್ಥಾನದಲ್ಲಾಗಲಿಲ್ಲ. ಇದಕ್ಕೆ ಕಾರಣ ಪ್ರಗತಿಪರರೆನಿಸಿಕೊಂಡಿದ್ದ ಮಹಾರಾಜರು ಹಾಗೂ ಅವರ ದಿವಾನರು. ಹಿಂದೆ ಹೇಳಿದಂತೆ ೧೮೩೧ರ ನಂತರ ಬ್ರಿಟಿಷರ ವಿರುದ್ಧ ದಂಗೆಯೇಳಲು ಮೈಸೂರು ಸಂಸ್ಥಾನದಲ್ಲಿ ಸಮರ್ಥರಾದ ನಾಯಕರು ಸಿಗಲಿಲ್ಲ. ಅಲ್ಲಿಲ್ಲಿ ಪ್ರತಿಭಟನೆಗಳಾದರೂ ದಂಗೆಗಳಾಗುವಷ್ಟು ವ್ಯಾಪಿಸಲಿಲ್ಲ. ೧೮೫೭ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಮೈಸೂರು ಸಂಸ್ಥಾನವು ಆಂಗ್ಲರ ವಿರುದ್ಧ ದಂಗೆಯೆದ್ದಿದ್ದರೆ ಇತಿಹಾಸವೇ ಬದಲಾಗುತ್ತಿತ್ತು. ಆದರೆ ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರಿಗೆ ೧೮೩೧ರಲ್ಲಿ ಕೈಬಿಟ್ಟುಹೋದ ಆಡಳಿತದ ಚುಕ್ಕಾಣಿ ಮತ್ತೆ ಕೈಸೇರಬೇಕೆಂಬ ಹಂಬಲವಿತ್ತು. ಅದಕ್ಕಾಗಿ ಅವರು ತಮ್ಮ ಕಡೆಯಿಂದ ಯಾವುದೇ ಅಚಾತುರ್ಯ ನಡೆಯದಂತೆ ಜಾಗರೂಕರಾಗಿದ್ದರು. ೧೮೫೭ರ ಸಂಗ್ರಾಮದ ಆರಂಭದಲ್ಲೇ ಮೈಸೂರು ಸಂಸ್ಥಾನವು ಬ್ರಿಟಿಷ್ ಸರ್ಕಾರಕ್ಕೆ ಬೇಷರತ್ ಬೆಂಬಲವನ್ನು ಘೋಷಿಸಿತು. ಇದಲ್ಲದೆ ಆಂಗ್ಲ ಸೈನಿಕರಿಗೆ ತಮ್ಮ ಅರಮನೆಯೊಂದನ್ನು ಬಿಟ್ಟುಕೊಟ್ಟರು. ಆನೆಗಳ ಹಾಗೂ ೨೦೦೦ ಕುದುರೆಗಳ ತುಕುಡಿ ತುರ್ತು ಸೇವೆಗೆ ನಿಯೋಜಿಸಲಾಗಿತ್ತು. ಆಂಗ್ಲ ಸೈನಿಕರು ನೀಲಗಿರಿಯಿಂದ ಬಳ್ಳಾರಿ ಹೋಗುವವರೆಗೆ ಸುರಕ್ಷಿತವಾಗಿ ಅವರನ್ನು ನೋಡಿಕೊಳ್ಳುವ ಜವಾಬ್ದಾರಿಯನ್ನು ಸಂಸ್ಥಾನವು ತೆಗೆದುಕೊಂಡಿತು. ಹೀಗೆ ಒಂದೆಡೆ ಸೈನ್ಯದ ಸಹಾಯವಿಲ್ಲದೆ, ಪ್ರಭುತ್ವದ ಸಹಾಯವಿಲ್ಲದೆ ಜನಸಾಮಾನ್ಯರು ಬ್ರಿಟಿಷರ ವಿರುದ್ಧ ದಂಗೆ ಏಳುವ ಶಕ್ತಿ ಸೌಕರ್ಯಗಳಿರಲಿಲ್ಲ.



೧೯ನೇ ಶತಮಾನದ ಉತ್ತರಾರ್ಧದ ಹೊತ್ತಿಗೆ ಹಲವು ಪತ್ರಿಕೆಗಳು ಪ್ರಕಟವಾಗಿ ಜನಸಾಮಾನ್ಯರನ್ನು ತಲುಪುತ್ತಿದ್ದವು. ಇದರಿಂದ ದೇಶದೆಲ್ಲೆಡೆ ಏನಾಗುತ್ತಿದೆ ಎಂದು ಸಾಮಾನ್ಯ ಜನರಿಗೆ ತಿಳಿಯಲಾರಂಭಿಸಿತು. ಮುದ್ರಣ ತಂತ್ರ ವ್ಯಾಪಕವಾಗಿ ಪತ್ರಿಕೆಗಳ ಪ್ರಕಟಣೆಯಲ್ಲಿ ಶುರುವಾಗಿ ಸಂಬಾದ ಕೌಮುದಿ (ಬಂಗಾಳಿ ೧೮೨೧), ಕ್ರಿಸೆಂಟ್ (ಇಂಗ್ಲಿಷ್ ೧೮೪೩), ಹಿಂದೂ ಪೇಟ್ರಿಯೆಟ್ (೧೮೫೩), ರಾಸ್ ಗೋಫ್ತಾರ್ (ಗುಜರಾತಿ ೧೮೫೧), ಕೇಸರಿ (ಮರಾಠಿ ೧೮೮೦), ದಿ ಹಿಂದು (ಇಂಗ್ಲಿಷ್ ೧೮೭೮) ಅಮೃತ್ ಬಜಾರ್ ಪತ್ರಿಕಾದಂತಹ ಪ್ರಕಟಣೆಗಳು ಬ್ರಿಟಿಷರ ಆಡಳಿತದ ವಿರುದ್ಧ ಭಾರತೀಯರಲ್ಲಿ ಜಾಗೃತಿ ಮೂಡಿಸಿದವು. ಕರ್ನಾಟಕದಲ್ಲಿ ೧೮೬೫ರಲ್ಲಿ ಪ್ರಾರಂಭವಾದ 'ಕರ್ನಾಟಕ ಪ್ರಕಾಶಿಕೆ' ಬ್ರಿಟಿಷ್ ಆಳ್ವಿಕೆಯ ಕುರಿತು ತೀಕ್ಷ್ಣಟೀಕೆ ಮಾಡುತ್ತಿತ್ತು. ೧೮೮೭ರಲ್ಲಿ ಕಾಂಗ್ರೆಸ್ಸಿಗೆ ಬೆಂಬಲ ನೀಡುವುದರ ಜೊತೆಗೆ ೧೮೯೭ರಲ್ಲಿ ಮೈಸೂರು ಸಂಸ್ಥಾನಕ್ಕೆ ಬ್ರಿಟಿಷ್ ಪಾರ್ಲಿಮೆಂಟ್ನಲ್ಲಿ ಕೂಡ ಪ್ರತಿನಿಧಿ ಇರಬೇಕೆಂದು ಪ್ರತಿಪಾದಿಸಿತು. "ವೆಸ್ಟ್ ಇಂಡೀಸ್ ನೀಗ್ರೋ ಜನಾಂಗ ಹಾಗೂ ಆಸ್ಟ್ರೇಲಿಯಾದ ಆದಿವಾಸಿಗಳಿಗೇ ಹೆಚ್ಚು ಸ್ವಾತಂತ್ರವಿದೆ" ಎಂದು ೧೮೯೧ರ ತನ್ನ ಪತ್ರಿಕೆಯಲ್ಲಿ ಬ್ರಿಟಿಷ್ ಸರ್ಕಾರದ ತಾರತಮ್ಯದ ವಿರುದ್ಧ ಟೀಕಿಸುತ್ತಾ ಬರೆದಿತ್ತು. ಇದರ ಜೊತೆ ಉರ್ದುವಿನ 'ಕಾಸಿಂ – ಉಲ್ – ಅಖ್ಬಾರ್' ಕೂಡ ಜನಜಾಗೃತಿಯ ಕೆಲಸ ಮಾಡುತ್ತಿತ್ತು.

೧೮೯೮ರಲ್ಲಿ ಮೈಸೂರು ಸಂಸ್ಥಾನಕ್ಕೆ ಪ್ಲೇಗ್ ಮಾರಿ ಬಡಿಯಿತು. ಒಂದೇ ವರ್ಷದಲ್ಲಿ ಇದು ಮೈಸೂರು, ಚನ್ನಪಟ್ಟಣ, ರಾಮನಗರ, ಬೆಂಗಳೂರು ಎಲ್ಲೆಡೆ ಹರಡಿ ೧೨,೨೭೩ ಜನರ ಬಲಿ ಪಡೆಯಿತು. ೧೮೮೮ರಲ್ಲಿ ಮೈಸೂರಿನಲ್ಲಿ ಪ್ರಾರಂಭವಾದ ಸೂರ್ಯೋದಯ ಪ್ರಕಾಶಿಕ ಪತ್ರಿಕೆಯು ಪ್ಲೇಗ್ ರೋಗವನ್ನು ತಡೆಗಟ್ಟುವಲ್ಲಿ ತೋರಿದ ಅಸಡ್ಡೆ, ದುರಾಡಳಿತದ ಬಗ್ಗೆ ಲೇಖನಗಳನ್ನು ಪ್ರಕಟಿಸಿತು. ಇಂತಹ ಪತ್ರಿಕೆಗಳಿಂದ ಸಾಮಾನ್ಯ ಜನರಿಗೂ ಬ್ರಿಟಿಷ್ ಸರ್ಕಾರದ ಬಗ್ಗೆ ಕೋಪ, ಅಸಹನೆ ಬೆಳೆಯಿತು.

ಮತಾಂತರಿಗಳ, ಪಾಶ್ಚಾತ್ಯ ಅಂಧಾನುಕರಣೆಯ ವಿರುದ್ಧ ಹಲವು ಸಂಘ ಸಂಸ್ಥೆಗಳು ಹುಟ್ಟಿಕೊಂಡವು. ಇವು ಧರ್ಮ ಪ್ರಸಾರ ಮಾಡುವ ಜೊತೆಗೆ, ಜನಜಾಗೃತಿ, ಸಮಾಜ ಸುಧಾರಣೆಯ ಕಡೆಗೂ ಗಮನ ಹರಿಸಿದವು.

ಇಂತಹುದರಲ್ಲಿ ಬ್ರಹ್ಮ ಸಮಾಜ, ಆರ್ಯ ಸಮಾಜ, ಥಿಯೊಸೊಫಿಕಲ್ ಸೊಸೈಟಿ, ರಾಮಕೃಷ್ಣ ಮಿಷನ್ ಅಂತಹ ಸಂಸ್ಥೆಗಳು ಭಾರತೀಯ ಸಮಾಜದಲ್ಲಿರುವ ತಪ್ಪುಗಳನ್ನು ತಿದ್ದುವ ಹಾಗೆ ನಮ್ಮ ಪರಂಪರೆಯ ಬಗ್ಗೆ ಅಭಿಮಾನ ಮೂಡಿಸಿದವು. ಬಂಗಾಳದ ರಾಜಾರಾಮ್ ಮೋಹನ್ ರಾಯ್, ಈಶ್ವರಚಂದ್ರ ವಿದ್ಯಾಸಾಗರ, ಸ್ವಾಮಿ ವಿವೇಕಾನಂದರ ಜೀವನಗಾಥೆಗಳು ಕರ್ನಾಟಕದ ಮನೆಮಾತಾದವು.

ಭಾರತದಲ್ಲಿ ಕಾಂಗ್ರೆಸ್ ಸಂಸ್ಥೆಯ ಸ್ಥಾಪನೆ ಆಗುವುದಕ್ಕೆ ಮುಂಚೆಯೇ ೧೮೮೧ರಲ್ಲಿ ದಿವಾನ್ ರಂಗಾಚಾರ್ಲು ಅವರು ಪ್ರಜಾಪ್ರತಿನಿಧಿ ಸಭೆ ಸ್ಥಾಪಿಸಿದರು. ಅಂದು ಅವರು ಪ್ರಜೆಗಳಿಗೆ ನೀಡಿದ ಅಧಿಕಾರ ಕ್ರಾಂತಿಕಾರಕ ಎಂಬ ಭಾವನೆ ಅನೇಕರಿಗೆ ಬಂದಿತು. ಪ್ರಜಾಭಿಪ್ರಾಯಕ್ಕೆ ನೀಡಿದ ಈ ಪುರಸ್ಕಾರ ಮುಂದೆ ಪ್ರಜಾಪ್ರತಿನಿಧಿ ಸಭೆ, ನ್ಯಾಯವಿಧಾಯಕ ಸಭೆಗಳಲ್ಲಿ ನಡೆದ ಕಾರ್ಯಕಲಾಪ ಇವುಗಳೆಲ್ಲ ಪ್ರಜೆಗಳಲ್ಲಿ ಆಡಳಿತದಲ್ಲಿ ಆಸಕ್ತಿ, ಸ್ವಾತಂತ್ರ್ಯ ಪ್ರೇಮ ಹೆಚ್ಚಿಸಲು ನೆರವಾದವು.

ಕಾಂಗ್ರೆಸ್ ಪಕ್ಷಕ್ಕೆ ಆಗಿನ ಕಾಲದಲ್ಲಿ 'ಬ್ರಾಹ್ಮಣರ ಪಕ್ಷ' ಎಂಬ ಟೀಕೆ ಮನೆಮಾತಾಗಿತ್ತು. ಆದರೂ ದೇಶದ ಹಿತರಕ್ಷಣೆಗೆ ಕಾಂಗ್ರೆಸ್ ಪಕ್ಷದ ಕೈ ಜೋಡಿಸಲು ಚನ್ನಪಟ್ಟಣದ ವಿ.ವೆಂಕಟಪ್ಪ, ದೊಡ್ಡಬಳ್ಳಾಪುರದ ಟಿ.ಸಿದ್ಧಲಿಂಗಯ್ಯ ಹಾಗೂ ಹೆಚ್.ಕೆ.ವೀರಣ್ಣಗೌಡ ಇವರು ಸೇರ್ಪಡೆಯಾದರು. ತಿಲಕರ ಕೇಸರಿಯಿಂದ ಪ್ರಭಾವಿತರಾಗಿ ಚನ್ನಪಟ್ಟಣದ ಎಸ್.ಎಸ್. ಶರ್ಮ ೧೯೦೭ರಲ್ಲಿ 'ಸುಭಾಷಿಣಿ' ಪತ್ರಿಕೆಯನ್ನು ಹೊರತಂದರು.

ಹಲವಾರು ಪತ್ರಿಕೆಗಳಲ್ಲಿ ಸರ್ಕಾರದ ವಿರುದ್ಧ ಆಗುತ್ತಿದ್ದ ಪ್ರಕಟಣೆಗಳನ್ನು ನೋಡಿ ಎಚ್ಚೆತ್ತ ಸರ್ಕಾರ ಮೈಸೂರು ಸಂಸ್ಥಾನಕ್ಕೆ ಹೇಳಿ ೧೯೦೮ರಲ್ಲಿ ಕಾಯಿದೆಯನ್ನು ತಂದು ಹಲವಾರು ಪತ್ರಿಕೆಗಳನ್ನು ನಿಲ್ಲಿಸಿದರು. ಪ್ರಜಾಪ್ರತಿನಿಧಿ ಸಭೆಯಲ್ಲೂ ಇದರ ವಿರುದ್ಧ ಟೀಕೆ ಬಂದಿತು. ಹೊರಗೆ ಚಳುವಳಿಯೂ ಆಯಿತು. ಆದರೆ ಸರ್ಕಾರ ಹಿಂದೆ ಕಾಲಿಡಲಿಲ್ಲ. ಓರ್ವ ಸಂಪಾದಕನನ್ನು ಗಡೀಪಾರು ಮಾಡಿ ಅವನ ಮುದ್ರಣಾಲಯವನ್ನು ಮುಟ್ಟುಗೋಲು ಹಾಕಿಕೊಂಡರು. ಹಲವು ಪ್ರತಿಭಾವಂತ ಪತ್ರಕರ್ತರು ಸಂಸ್ಥಾನಭ್ರಷ್ಟರಾಗಿ ಬ್ರಿಟಿಷ್ ಪ್ರಾಂತವನ್ನು ಸೇರಿದರು. ಈ ಶಾಸನ ಆಡಳಿತದ ವಿರುದ್ಧ ಭಾರತದ ಹಲವು



ಮುಖಂಡರು ಖಂಡಿಸಿದರು. ಹಲವು ವರ್ಷಗಳ ನಂತರ ಈ ಶಾಸನ ರದ್ದಾಯಿತು. ತಗಡೂರು ರಾಮಚಂದ್ರರಾಯರ ಸತ್ಯಾಗ್ರಹ, ಇದಕ್ಕೆ ಶ್ರಮಿಸಿದ ಪ್ರಜಾಪ್ರತಿನಿಧಿಗಳ ಧೈರ್ಯ, ಶ್ರಮ ಸ್ಮರಣೀಯವಾದದ್ದು.

ತಿಲಕರ ಸ್ವಾತಂತ್ರ್ಯ ಹೋರಾಟ, ಥಿಯೊಸಾಫಿಕಲ್ ಸೊಸೈಟಿಯ ಹಾಗೂ ಪ್ರಜಾ ಪ್ರತಿನಿಧಿಯ ಕಾರ್ಯಗಳು ನಿರಂತರವಾಗಿ ನಡೆದರೂ ಸ್ವಾತಂತ್ರ್ಯ ಹೋರಾಟಕ್ಕೆ ಕಾಯಾ ವಾಚಾ ಮನಸಾ ಸಮರ್ಪಿಸಿಕೊಳ್ಳಲು ಜನತೆ ಒಬ್ಬ ಅದಮ್ಯ ನಾಯಕನನ್ನು ಹುಡುಕುತ್ತಿತ್ತು. ವಿಶಿಷ್ಟ ಚಿಂತನೆಯೊಂದಿಗೆ, ಬಡವ ಬಲ್ಲಿದನೆಂಬ, ಜಾತಿ ಧರ್ಮಗಳ ಸಂಕೋಲೆ ಮೀರಿದ, ತಮ್ಮೊಂದಿಗೆ ಒಂದಾಗಬಲ್ಲ ನಾಯಕನನ್ನು ಹಿಂಬಾಲಿಸಲು ಕಾತುರತೆಯಿಂದಿದ್ದರು. ಭಾರತೀಯ ಸ್ವಾತಂತ್ರ್ಯ ಹೋರಾಟದಲ್ಲಿ ಒಂದು ರೀತಿಯ ರಾಜಕೀಯ ನಿರ್ವಾತ ಸೃಷ್ಟಿಯಾಗಿತ್ತು. ಈ ಸನ್ನಿವೇಶದಲ್ಲಿ ಮೋಹನ್ ದಾಸ್ ಕರಮಚಂದ್ ಗಾಂಧಿಯವರು ೧೯೧೫ರಲ್ಲಿ ದಕ್ಷಿಣ ಆಫ್ರಿಕಾದಿಂದ ಸ್ವದೇಶಕ್ಕೆ ಮರಳಿದರು.

❑

## ೬. ಗಾಂಧೀಜಿಯ ಆಗಮನ

೧೯೧೫ರಲ್ಲಿ ದಕ್ಷಿಣ ಆಫ್ರಿಕಾದಿಂದ ಹಡಗಿನಲ್ಲಿ ಮುಂಬೈಗೆ ಆಗಮಿಸಿದ ಗಾಂಧೀಜಿಯ ಗುರಿ ಸ್ಪಷ್ಟವಾಗಿತ್ತು. ಸತ್ಯಾಗ್ರಹದಿಂದ ಸ್ವರಾಜ್ಯ, ಅಹಿಂಸೆಯಿಂದ ಸ್ವಾತಂತ್ರ್ಯ ಎಂದು. ಭಾರತದಲ್ಲಿ ತನ್ನ ಕಾರ್ಯಕ್ಷೇತ್ರ ಏನಿರಬೇಕು, ಹೇಗಿರಬೇಕು ಎಂದು ಯೋಚಿಸುವಾಗಲೇ ಗೋಪಾಲ ಕೃಷ್ಣ ಗೋಖಲೆಯವರ ಭೇಟಿಯಾಗುತ್ತದೆ. ಗೋಖಲೆಯವರು ಗಾಂಧೀಜಿಗೆ ಭಾರತ ಪರ್ಯಟನೆ ಮಾಡಲು ಹೇಳುತ್ತಾರೆ. ಭಾರತ ದೇಶವನ್ನು, ಇಲ್ಲಿರುವ ಭೂಭಾಗವನ್ನು, ಅಲ್ಲಿ ಜೀವನ ಮಾಡುತ್ತಿರುವವರನ್ನು ಪ್ರತ್ಯಕ್ಷವಾಗಿ ನೋಡಿ, ಅವರ ಕಷ್ಟ ನಷ್ಟಗಳನ್ನು ಅರಿಯಿರಿ ಎಂದು ಸಲಹೆ ನೀಡುತ್ತಾರೆ. ಇದರ ಪ್ರಕಾರ ಗಾಂಧೀಜಿಯೂ ತಮ್ಮ ಪರಿವಾರ, ಸ್ನೇಹಿತರೊಂದಿಗೆ ಭಾರತ ಪರ್ಯಟನೆ ಮಾಡುತ್ತಾರೆ. ಹಾಗೆ ಮಾಡುತ್ತಾ ಕರ್ನಾಟಕಕ್ಕೆ ೧೯೧೫ರಲ್ಲಿ ಮೊದಲ ಬಾರಿಗೆ ಭೇಟಿ ನೀಡುತ್ತಾರೆ. ಬೆಂಗಳೂರಿಗೆ ಆಗಮಿಸಿದ ಗಾಂಧೀಜಿಯುವರು, ಡಿ.ವಿ.ಗುಂಡಪ್ಪನವರು ಏರ್ಪಡಿಸಿದ್ದ ಸಮಾರಂಭದಲ್ಲಿ ಗೋಪಾಲಕೃಷ್ಣ ಗೋಖಲೆಯವರ ಭಾವಚಿತ್ರವನ್ನು ಅನಾವರಣಗೊಳಿಸುತ್ತಾರೆ. ಈ ಭೇಟಿ ರಾಜಕೀಯವಾದುದ್ದಲ್ಲ.

"ಅಜ್ಜ.."ಎಂದ ಸೋಮು.

ಅಜ್ಜನು ಸೋಮುವಿನತ್ತ ನೋಡಿದನು.

"ಉತ್ತರ ಭಾರತ ಹಾಗೂ ಬಂಗಾಳದಲ್ಲಿ ನಡೆದ ಹಾಗೆ ನಮ್ಮಲ್ಲೂ ಏಕೆ ಕ್ರಾಂತಿಕಾರಕ ಚಳುವಳಿಗಳು ನಡೆಯಲಿಲ್ಲ?"



"ಬಹಳಷ್ಟು ನಡೆಯಿತಲ್ಲ ಸಾಮಿ! ಟಿಪ್ಪುವಿನ ಕಾಲದಿಂದ ಹಿಡಿದು, ದೊಂಡೋಜಿ ವಾಘ್, ಬಲಂ ಸಂಸ್ಥಾನದ ನಾಯಕ, ೧೮೨೪ನಲ್ಲಿ ಕಿತ್ತೂರು ಚೆನ್ನಮ್ಮ, ಸಂಗೊಳ್ಳಿ ರಾಯಣ್ಣ, ೧೮೫೮ರ ಕೊಪ್ಪಳ ಬಂಡಾಯ, ೧೮೩೧ರ ಮೈಸೂರು ದಂಗೆ, ೧೮೩೭ರ ಕೊಡಗು, ೧೮೪೧ರಲ್ಲಿ ಬಾದಾಮಿಯಲ್ಲಿ, ೧೮೫೭ರಲ್ಲಿ ನರಗುಂದ, ಕಾಗವಾಡ, ಸುರಪುರದ ಅರಸರು, ಮುಂಡರಗಿ ಭೀಮರಾಯನು, ಹಲಗಲಿ ಬೇಡರ ಶೌರ್ಯ ಯಾರು ಮರೆಯಲಿಕ್ಕಾಗುತ್ತದೆ? ಇವೆಲ್ಲ ಕ್ರಾಂತಿಕಾರಕವಲ್ಲದೆ ಮತ್ತೇನು ಸಾಮಿ?" ಎಂದನು ಅಜ್ಜ ಕೋಪದಿಂದ.

"ಇಂತಹ ದಂಗೆಗಳು ಏಕೆ ಮುಂದುವರೆಯಲಿಲ್ಲ? ರಾಮನಗರದಂತಹ ಜಾಗದಲ್ಲೇಕೆ ಆಗಲಿಲ್ಲ? ೧೯ನೇ ಶತಮಾನದಲ್ಲಿ ಏಕೆ ಕಡಿಮೆಯಾಯಿತು?" ಎಂದು ಮರುಪ್ರಶ್ನಿಸಿದ ಸೋಮು

"ಯುದ್ಧಸ್ಯ ವಾರ್ತಾ ರಮ್ಯಾ" ಎಂದು ನಕ್ಕನು ಅಜ್ಜ.

"ಆಗಿನ ಜನರ ಪರಿಸ್ಥಿತಿ ನಿನಗೆ ಅರಿವಿಲ್ಲ ಸೋಮು. ಹೊತ್ತು ತುತ್ತಿಗೂ ಪರದಾಡುತ್ತಿದ್ದ ಕಾಲ. ಅನಕ್ಷರತೆ, ಹಸಿವು, ಮೂಢನಂಬಿಕೆ, ಅಸ್ಪೃಶ್ಯತೆ ತಾಂಡವವಾಡುತ್ತಿದ್ದ ಕಾಲ. ನಗರದಲ್ಲಿ ವಿದ್ಯಾವಂತರಿಗೆ ದೇಶದಲ್ಲಿ ನಡೆಯುತ್ತಿರುವ ವಿದ್ಯಮಾನದ ಬಗ್ಗೆ ತಿಳುವಳಿಕೆ ಇತ್ತೇ ಹೊರತು ಸಣ್ಣ ಊರುಗಳಲ್ಲಿ, ಹಳ್ಳಿಗಳಲ್ಲಿ ಹೊರಜಗತ್ತಿನ ಸಂಪರ್ಕವೇ ಕಡಿಮೆಯಿತ್ತು. ಅಂಥವರಿಗೆ ಆಂಗ್ಲರು ನಡೆಸುತ್ತಿರುವ ದುರಾಡಳಿತದ ಬಗ್ಗೆ ವಿವರಿಸಿ ಅವರನ್ನು ಸ್ವಾತಂತ್ರ್ಯ ಹೋರಾಟಕ್ಕೆ ಕರೆತರುವುದು ಕಷ್ಟದ ಮಾತಾಗಿತ್ತು. ಇನ್ನು ಅಂತಹವರನ್ನು ಬ್ರಿಟಿಷರ ವಿರುದ್ಧ ತಮ್ಮ ಪ್ರಾಣದ ಆಹುತಿಯನ್ನು ಕೊಡಬೇಕೆಂದು ಕೇಳುವುದಾದರೂ ಹೇಗೆ?" ಎಂದು ಹೇಳುವಷ್ಟರಲ್ಲಿ ಅಜ್ಜನ ಮುಖ ದುಃಖದಿಂದ ಕೂಡಿತ್ತು.

"ಆದರೂ ಅಜ್ಜ! ಈ ಅಹಿಂಸಾ ಮಾರ್ಗ ಒಂದು ರೀತಿಯ ಹೇಡಿತನ ಎಂದು ಕೆಲವರು ಜರಿಯುತ್ತಾರಲ್ಲ? ಅದಕ್ಕೆ ಏನಂತೀರಿ?" ಎಂದು ಕೇಳಿದ ಸೋಮು.

ಅಜ್ಜನು ನಗುತ್ತ "ಹಾ! ಮುಂದೆ ಹೇಳುತ್ತೇನೆ ಕೇಳು" ಎಂದು ಮಾತು ಮುಂದುವರೆಸಿದನು.

## ೭. ರಾಮನಗರದ ಸ್ವಾತಂತ್ರ್ಯ ಹೋರಾಟ ಹಾಗೂ ಸೇನಾನಿಗಳು

ರಾಮನಗರದ ಸ್ವಾತಂತ್ರ್ಯ ಹೋರಾಟದಲ್ಲಿ ಹಲವಾರು ಜನ ಭಾಗಿಯಾಗಿದ್ದರು. ಅದರಲ್ಲಿ ನಮಗಿಂದು ಕೆಂಗಲ್ ಹನುಮಂತಯ್ಯ, ಕೆ.ಸುಬ್ಬರಾವ್, ಸಿ.ಎಂ.ವೆಂಕಟಪ್ಪ, ಎಂ.ಎನ್.ಈಶ್ವರ್ ರಾವ್, ವಿ.ಗಿರಿಯಪ್ಪ, ಎಚ್.ಆರ್.ಶೀನಪ್ಪ, ಶಿವರಾಂ ಸಿಂಗ್, ಕೃಷ್ಣಯ್ಯ ಮಾಸ್ತರ್ ಇವರ ಬಗ್ಗೆ ಹೆಚ್ಚು ಮಾಹಿತಿ ಸಿಗುತ್ತವೆ. ಈ ಸ್ವಾತಂತ್ರ್ಯ ಸೇನಾನಿಗಳು ಗಾಂಧೀಜಿಯ ತತ್ವಾದರ್ಶದ ಅನುಯಾಯಿಗಳು. ಗಾಂಧೀಜಿಯ ಆಣತಿಯಂತೆ ಇವರಿಗಿದ್ದ ಗುರಿ:

ಅ) ಅಹಿಂಸಾ ಮಾರ್ಗದಿಂದ, ಅಸಹಕಾರ ಚಳುವಳಿಯಿಂದ ಸ್ವಾತಂತ್ರ್ಯ.


ಆ) ಸಮಾಜ ಸುಧಾರಣೆಯ ಕಾರ್ಯ – ಅಸ್ಪೃಶ್ಯತೆ, ಮತಾಂಧತೆ ತೊಡೆದು ಹಾಕುವುದು. ಹಳ್ಳಿಯ ಜನ ಮಾದಕ ವಸ್ತು, ಹೆಂಡದ ದಾಸರಾಗುವುದನ್ನು ತಪ್ಪಿಸುವುದು.

ಇ) ಬ್ರಿಟಿಷ್ ಸರ್ಕಾರದ ಆರ್ಥಿಕತೆಯನ್ನು ನಾಶಪಡಿಸುವುದು.

ಈ ಸ್ವಾತಂತ್ರ್ಯ ಸೇನಾನಿಗಳ ಹೋರಾಟವನ್ನು ಗಾಂಧೀಜಿಯ ಕರ್ನಾಟಕ ಯಾತ್ರೆಗಳೊಂದಿಗೆ ನೋಡೋಣ.

೧೯೨೪ರಲ್ಲಿ ಬೆಳಗಾವಿಯಲ್ಲಿ ಕಾಂಗ್ರೆಸ್ ಸಮಾವೇಶ ನಡೆಯಿತು. ಸ್ವಾತಂತ್ರ್ಯ ಪೂರ್ವದಲ್ಲಿ ಕರ್ನಾಟಕದಲ್ಲಿ, ಗಾಂಧೀಜಿಯ ಅಧ್ಯಕ್ಷತೆಯಲ್ಲಿ ನಡೆದ ಏಕಮಾತ್ರ ಕಾಂಗ್ರೆಸ್ ಅಧಿವೇಶನವೆಂದರೆ ಇದೊಂದೇ. ಸಹಸ್ರಾರು ಜನ ಮೈಸೂರು, ಹೈದರಾಬಾದ್, ಬ್ರಿಟಿಷ್ ಸಂಸ್ಥಾನಗಳಿಂದ ಇಲ್ಲಿಗೆ ಬಂದಿದ್ದರು. ರಾಮನಗರದ ಕೆ.ಸುಬ್ಬರಾವ್ ಕೂಡ ಇದರಲ್ಲಿ ಉಪಸ್ಥಿತರಿದ್ದರು. ಇಲ್ಲಿ ಬಂದವರೆಲ್ಲ ಗಾಂಧೀಜಿಯ, ಹರ್ಡಿಕರ್ ಮುಂತಾದ ನಾಯಕರ ಭಾಷಣಗಳಿಂದ ಪ್ರಭಾವಿತರಾದರು. ಸಹಸ್ರಾರು ಜನ ರಾಷ್ಟ್ರೀಯ ಭಾವದಿಂದ ಓತಪ್ರೋತರಾದರು. ಹರ್ಡಿಕರ್ ಅವರ ನೇತೃತ್ವದಲ್ಲಿ ಸ್ವಯಂಸೇವಕರಾಗಿದ್ದ ಕೆ.ಸುಬ್ಬರಾವ್ ಈ ಅಧಿವೇಶನದಿಂದ ಪ್ರಭಾವಿತರಾಗಿ, ದೇಶಸೇವೆಗೆ ತಮ್ಮ ಜೀವನವನ್ನೇ ಮುಡುಪಾಗಿಟ್ಟರು. ಇದೇ ಕಾರ್ಯದಲ್ಲಿ ಅವರಿಗೆ ಎಂ.ಎ. ಪರೀಕ್ಷೆಗೆ ಕುಳಿತುಕೊಳ್ಳಲು ಆಗಲಿಲ್ಲ. ಎಲ್.ಎಲ್.ಬಿ. ಪರೀಕ್ಷೆ ಪಾಸು ಮಾಡಿ ವಕೀಲಿ ವೃತ್ತಿ ಪ್ರಾರಂಭಿಸಿದರು.


೧


೨


೩

**ಚಿತ್ರದಲ್ಲಿ ಇರುವವರು:**

**೧. ಕೆ.ಸುಬ್ಬರಾವ್ (ಜನನ – ೧೯೦೩, ವಕೀಲ ವೃತ್ತಿ, ರಾಮನಗರ)**

**೨. ಸಿ.ಎಂ.ವೆಂಕಟಪ್ಪ (ಜನನ – ೧೯೧೩, ತರಕಾರಿ ತೋಟದ ಉದ್ಯೋಗ, ರಾಮನಗರ)**

**೩. ಎಂ.ಎನ್.ಈಶ್ವರ್ ರಾವ್ (ಜನನ – ೧೯೦೭, ಹೊಲಿಗೆ ಉದ್ಯೋಗ, ರಾಮನಗರ)**

ಇದಾದ ನಂತರ ಗಾಂಧೀಜಿಯವರು ೧೯೨೭ರಲ್ಲಿ ಮತ್ತೆ ಕರ್ನಾಟಕದ ಸಂಚಾರ ಕೈಗೊಂಡರು. ಕಲಬುರ್ಗಿಯಲ್ಲಿ ತಲೆದೋರಿದ್ದ ಕೋಮು ವೈಷಮ್ಯವನ್ನು ತಡೆಯಲು ಹೋದ ಸಂದರ್ಭದಲ್ಲಿ ಗಾಂಧೀಜಿ ಅಸ್ವಸ್ಥರಾದರು. ಆ ಬಳಿಕ ೪ ತಿಂಗಳುವರೆಗೆ ನಂದಿ ಬೆಟ್ಟದಲ್ಲಿ ವಿಶ್ರಾಂತಿ ಪಡೆದರು. ಆ ಬಳಿಕ

ಮೈಸೂರು, ರಾಮನಗರ, ತುಮಕೂರು, ಚಿತ್ರದುರ್ಗದೆಲ್ಲೆಡೆ ಸಂಚರಿಸಿ ಖಾದಿ ಚಳವಳಿಯ ಪ್ರಚಾರ ಮಾಡಿದರು. ಇದರ ಫಲವಾಗಿ ಮೈಸೂರಿನ ಬದನ್ವಾಳದಲ್ಲಿ ಖಾದಿ ನಿರ್ಮಾಣ ಕೇಂದ್ರವೊಂದು ಸ್ಥಾಪನೆಗೊಂಡಿತು. ಸರಕಾರೀ ನೌಕರರೂ ಖಾದಿಯನ್ನು ಧರಿಸಬಹುದು ಎಂದು ದಿವಾನರಿಂದ ಅನುಮತಿ ದೊರಕಿಸಿಕೊಟ್ಟರು. ಜುಲೈ ತಿಂಗಳಿನಲ್ಲಿ ತುಮಕೂರಿಗೆ ಸಂಚರಿಸಿ ಅಲ್ಲಿದ್ದ ಹರಿಜನರ ಕರಕುಶಲ ತರಬೇತಿ ಕೇಂದ್ರವನ್ನು ನೋಡಿ ಸಂತೋಷ ಪಟ್ಟರು. ಅಲ್ಲಿಂದ ಬೆಂಗಳೂರಿಗೆ ಬಂದು ಆಗಸ್ಟ್ ತಿಂಗಳಿನಲ್ಲಿ ಹಾಸನ, ಹೊಳೆನರಸೀಪುರ, ರಾಮನಗರ, ಕನಕಪುರ, ದಾವಣಗೆರೆ, ಮಂಡಗದ್ದೆ, ಗಾಜನೂರು, ಭದ್ರಾವತಿ, ತರೀಕೆರೆ, ಬೀರೂರು ಹಾಗೂ ಕಡೂರು ಸ್ಥಳಗಳನ್ನು ಸಂದರ್ಶಿಸಿದರು. ಕ್ಲೋಸ್ ಪೇಟೆ ಅಥವಾ ರಾಮನಗರಕ್ಕೆ ಆಗಸ್ಟ್ ೭ಕ್ಕೆ ಭೇಟಿ ನೀಡಿದರು. ರಾಮನಗರದ ಜನರಿಗೆಲ್ಲ ಇದು ಮರೆಯಲಾಗದ ದಿನ. ಕೃಷ್ಣಯ್ಯ ಮಾಸ್ಟರ್ ಅವರು ಆಯೋಜಿಸಿದ್ದ ಸಭೆಯಲ್ಲಿ ಗಾಂಧೀಜಿಯವರು ಮಾತನಾಡಿದರು. ತಮ್ಮ ಭಾಷಣದ ಮೂಲಕ ಖಾದಿಯ ಬಗ್ಗೆ ಜನಜಾಗೃತಿ ಮೂಡಿಸಿದರು. ಈ ಸಭೆಯಲ್ಲಿ ಕೆ.ಸುಬ್ಬರಾವ್, ಅಡ್ವೋಕೇಟ್ ಮಾದೇಗೌಡ, ಆರ್.ಐಯ್ಯಂಗಾರ್, ಎಂ.ಎನ್.ಈಶ್ವರ್ ರಾವ್ ಮತ್ತು ಎಲ್.ಕೆ.ಕೃಷ್ಣಸ್ವಾಮಿ ಅವರೂ ಉಪಸ್ಥಿತರಿದ್ದರು. ಆಗಿನ್ನೂ ಸಿ.ಎಂ.ವೆಂಕಟಪ್ಪನವರಿಗೆ ೧೩ ವರ್ಷ ವಯಸ್ಸು. ಅವರ ಅಧ್ಯಾಪಕರು ಹೇಳಿದ ಹಾಗೆ ಅವರ ಸ್ನೇಹಿತನ ಜೊತೆಗೂಡಿ "ಜನ್ಮವೇತಕೋ ದೇಶಸೇವೆ ಮಾಡದ" ಹಾಗೂ "ಆಗ್ರಹಗೊಳಲೇಕೆ, ಪರರನು ನಿಗ್ರಹಿಸುವುದೇಕೆ?" ಈ ಎರಡು ಹಾಡುಗಳನ್ನು ಹಾಡಿದರು. ಆ ವಯಸ್ಸಿನಲ್ಲೇ ಗಾಂಧೀಜಿಯ ಕರೆಗೆ ಓಗೊಟ್ಟು ಖಾದಿ ತೊಡಲು ಪ್ರಾರಂಭಿಸಿದರು. ಮತ್ತೋರ್ವ ಹೋರಾಟಗಾರ, ೨೦ರ ಹರೆಯದ, ಎಂ.ಎನ್.ಈಶ್ವರ್ ರಾವ್ ಗಾಂಧೀಜಿಯ ಭಾಷಣದಿಂದ ಪ್ರಭಾವಿತರಾಗಿ ಅವರ ಜೊತೆ ಕನಕಪುರಕ್ಕೂ ಹೋದರು. ನಂತರದ ದಿನಗಳಲ್ಲಿ ಗಾಂಧೀಜಿಯ ವಿಚಾರಗಳನ್ನು ರಾಮನಗರದ ಸುತ್ತ ಹಳ್ಳಿ ಹಳ್ಳಿಗಳಿಗೂ ಹೋಗಿ ತಿಳಿಸುವ ಕಾರ್ಯ ಕೈಗೊಂಡರು. ಇದೇ ಸಮಯದಲ್ಲಿ ವಕೀಲಿ ವೃತ್ತಿಯನ್ನು ಆರಂಭಿಸಿದ ಕೆ.ಸುಬ್ಬರಾವ್ ಅನೇಕ ಜನರನ್ನು ಕಾಂಗ್ರೆಸ್ ಸದಸ್ಯರನ್ನಾಗಿ ನೋಂದಾಯಿಸಿದರು.


೧೯೨೭ರಲ್ಲಿ ಕಾನೂನು ಮಂಡಳಿಗಳ ಬಗ್ಗೆ ಚಿಂತನೆ ಮಾಡಲು ಬ್ರಿಟಿಷರು





'ಸೈಮನ್ ಕಮಿಷನ್' ರೂಪಿಸಿದರು. ಇದರಲ್ಲಿ ಭಾರತೀಯ ಪ್ರತಿನಿಧಿಗಳು ಇರದಿದ್ದರಿಂದ ಕಾಂಗ್ರೆಸ್ ಈ ಬಗ್ಗೆ ಪ್ರತಿಭಟಿಸಿತು. ಸೈಮನ್ ಕಮಿಷನ್ ದೇಶಕ್ಕೆ ಬಂದು ಪ್ರವಾಸ ಕೈಗೊಂಡಾಗ ದೇಶದೆಲ್ಲೆಡೆ 'ಸೈಮನ್ ಗೋ ಬ್ಯಾಕ್' (ಸೈಮನ್ ಹಿಂದಿರುಗಿ) ಎಂದು ಉಗ್ರ ಪ್ರದರ್ಶನಗಳಾದುವು. ಮೈಸೂರು ಸಂಸ್ಥಾನದಲ್ಲಿ ಇದರ ವಿರುದ್ಧ ಹಲವು ಜನಜಾಗೃತಿ ಕೆಲಸಗಳು, ಪ್ರತಿಭಟನೆಗಳು ನಡೆದವು.

೧೯೨೯ರಲ್ಲಿ ಕಾಂಗ್ರೆಸ್ ಪಕ್ಷವು ಬೆಂಗಳೂರಿನಲ್ಲಿ ಯೂಥ್ ಕಾನ್ಫರೆನ್ಸ್ ಏರ್ಪಡಿಸಿತು. ಇದು ಚನ್ನಪಟ್ಟಣದ ವಿ.ವೆಂಕಟಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಿತು. ಇವರ ಜೊತೆ ಚನ್ನಪಟ್ಟಣದವರೇ ಆದ ಅಬ್ಬೂರ್ ಗೋಪಣ್ಣ, ಡಿ.ಆರ್.ಲಿಂಗಯ್ಯ, ವೆಂಕಟರಮಣರೆಡ್ಡಿ, ಅಶ್ವತ್ಥನಾರಾಯಣರಾವ್, ಅಬ್ಬೂರ್ ಕೃಷ್ಣಮೂರ್ತಿ ಇದ್ದರು.

೧೯೩೦ರಲ್ಲಿ ಗಾಂಧೀಜಿ ಸವಿನಯ ಕಾನೂನುಭಂಗ ಚಳುವಳಿ ಹೂಡಿದರು. ಉಪ್ಪಿನ ಮೇಲೆ ಇರುವ ಪ್ರತಿಬಂಧ ಮುರಿಯಲು ಅಹ್ಮದಾಬಾದಿನ


೪


೫


೬

**ಚಿತ್ರದಲ್ಲಿ ಇರುವವರು:**

**೪. ಹೆಚ್.ಆರ್.ಶೀನಪ್ಪ (ಜನನ – ೧೯೧೪, ಕೃಷಿ, ಹಾರೋಹಳ್ಳಿ, ತಾ: ಕನಕಪುರ)**
**೫. ವಿ.ಗಿರಿಯಪ್ಪ (ಜನನ – ೧೯೦೭ ಕೃಷಿ, ಹಾಗಲಹಳ್ಳಿ ತಾ: ರಾಮನಗರ)**
**೬. ಕೃಷ್ಣಯ್ಯ ಮಾಸ್ಟರ್ (ರಾಮನಗರ)**

ಸಾಬರ್ಮತಿ ಆಶ್ರಮದಿಂದ ಕಾಲ್ನಡಿಗೆಯಿಂದ ದಂಡಿಯವರೆಗೆ ದೀರ್ಘ ಪ್ರಯಾಣ ಮಾಡಿ ಭಾರಿ ಜನಜಾಗೃತಿ ನಡೆಸಿದರು. ಇದರಿಂದ ದೇಶದಲ್ಲಿ ವಿವಿಧ ರೀತಿಯ ಉಗ್ರ ಚಳವಳಿ ನಡೆದವು. ಸರಕಾರ ಕಾದಿಟ್ಟ ಅರಣ್ಯಗಳಲ್ಲಿ ಮರ ಕಡಿಯುವುದು, ಸಾರಾಯಿ ಅಂಗಡಿ ಪಿಕೆಟಿಂಗ್, ಉಪ್ಪು ತಯಾರಿಸುವುದು ಮುಂತಾದ ತೀವ್ರ ಪ್ರತಿಭಟನೆಗಳಾದವು. ಜನ ಪೊಲೀಸರ ದೌರ್ಜನ್ಯಕ್ಕೆ ಬೆದರಲಿಲ್ಲ. ವಿದೇಶಿ ಜವಳಿ ಮಾರಾಟದ ವಿರುದ್ಧ ನಡೆದ ಪ್ರತಿಭಟನೆಯಿಂದ ಇಂಗ್ಲೆಂಡಿನಿಂದ ೧೯೩೦ರ ಆರಂಭಕ್ಕೆ ಆಮದು ಶೇ.೪೨ ಕಡಿಮೆಯಾಗಿ ೧೯೩೧ರಲ್ಲಿ ಶೇ.೮೪ ಕಡಿಮೆಯಾಯಿತು.

ರಾಮನಗರದಲ್ಲೂ ಚಳುವಳಿಯ ಕಾವು ಹೆಚ್ಚಾಯಿತು. ದಂಡಿ ಸತ್ಯಾಗ್ರಹದ ಹೋರಾಟ ಜನರ ಹೋರಾಟದ ಕಿಚ್ಚನ್ನು ಹೊತ್ತಿಸಿತ್ತು. ಕನಕಪುರದ ಶೀನಪ್ಪ ಶಾಲೆಗಳನ್ನು ಬಹಿಷ್ಕರಿಸಿ ಮೆರವಣಿಗೆ ನಡೆಸಿದ್ದನ್ನು ನೆನಪಿಸಿಕೊಳ್ಳುತ್ತಾರೆ. ಇದೇ ಸಮಯದಲ್ಲಿ ಕೆ.ಸುಬ್ಬರಾವ್ ಅವರ ಸಮೀಪ ಬಂಧು ವೆಂಕಟರಾಮಯ್ಯನವರ ನೇತೃತ್ವದಲ್ಲಿ ನಡೆದ ಕರ್ನಾಟಕ ಸತ್ಯಾಗ್ರಹದಲ್ಲಿ, ಕೆ.ಸುಬ್ಬರಾವ್ ಮತ್ತವರ ಸಂಗಡಿಗರ ಬಂಧನವಾಯಿತು. ಬಂಧನವಾದ ಮೇಲೆ ಅವರೆಲ್ಲರನ್ನು ಮೈಸೂರು ಗಡಿಯತ್ತ ಬಿಡಲಾಯಿತು. ಬೆಂಗಳೂರಿಗೆ ಹೋಗಿ ಸುಬ್ಬರಾಯರು ಕರ್ನಾಟಕದ ಸತ್ಯಾಗ್ರಹಕ್ಕೆ ಸಹಾಯವಾಗುವಂತೆ ಹಣ ಶೇಖರಿಸಿ ಗುಪ್ತವಾಗಿ ಕಳುಹಿಸುತ್ತಿದ್ದರು. ಈ ಅವಧಿಯಲ್ಲಿ ಪರದೇಶಿ ವಸ್ತ್ರಗಳನ್ನು ಬಹಿಷ್ಕರಿಸಿ ಜನರಲ್ಲಿ ಖಾದಿ ಪ್ರೇಮವನ್ನುಂಟುಮಾಡುವ ರಚನಾತ್ಮಕ ಕಾರ್ಯದಲ್ಲಿ ರಾಮನಗರ ಮತ್ತೆರಡು ಸ್ಥಳಗಳಲ್ಲಿ ಪರದೇಶಿ ವಸ್ತ್ರಗಳನ್ನು ಸುಡುವ ಕೆಲಸವನ್ನು ಸುಬ್ಬರಾಯರು ಮತ್ತವರ ಸಂಗಡಿಗರು ಮಾಡಿದರು. ಮೈಸೂರು ರಂಗಾಚಾರ್ಲು ಮೆಮೋರಿಯಲ್ ಹಾಲ್ ಮೈದಾನದಲ್ಲಿ ಯಾರೂ ಸಭೆ ಸೇರಬಾರದೆಂದು ೧೪೪ನೇ ಸೆಕ್ಷನ್ ಜಾರಿಯಾಗಿದ್ದರೂ ರಾಮನಗರದ ಶಿವರಾಂ ಸಿಂಗ್, ಮಾರಣ್ಣ, ಚಿಕ್ಕೇಗೌಡ, ಶಾರದಮ್ಮ, ಚೆನ್ನಪ್ಪ, ನಾರಾಯಣ ಶೆಟ್ಟಿ ಮತ್ತು ಹರ್ತಿ ಆದಿರಾಜಯ್ಯ ಸರ್ಕಾರದ ಕಾನೂನನ್ನು ಲೆಕ್ಕಿಸದೆ ಹೋಗಿದ್ದರು.

೧೯೩೦ರ ಆಚೆಗೆ ಸಾರಾಯಿ ಪಿಕೆಟಿಂಗ್ ಹಾಗೂ ಖಾದಿ ಆಂದೋಲನ ರಾಮನಗರದ ಸೀಮೆಯಲ್ಲಿ ಜೋರಾಗಿ ನಡೆಯತೊಡಗಿತು. ಮಾಗಡಿಯಲ್ಲಿ



ಕೃಷ್ಣಮೂರ್ತಿ, ರಾಮಚಂದ್ರ ಹಾಗೂ ಶಿವರಾಂ ಸಿಂಗ್ ಇದರ ನೇತೃತ್ವ ವಹಿಸಿದರು. ಮಾಗಡಿಯ ಮಹಾದೇವ ಶಾಸ್ತ್ರಿಗಳೂ ಹೊಸಕೋಟೆಯಲ್ಲಿ ನೆಲಸಿ ಈ ಕಾರ್ಯವನ್ನು ಮುಂದುವರೆಸಿದರು.

೧೯೨೮ರಲ್ಲಿ ಚಿತ್ರಗುಪ್ತ ದಿನಪತ್ರಿಕೆಯನ್ನು ಹೊರತಂದ ವೀರಣ್ಣಗೌಡರು ೧೯೩೦ರಲ್ಲಿ ಇರ್ವಿನ್ ಕಾಲುವೆಯ ನೀರಿನ ಸಮಸ್ಯೆಯ ಬಗ್ಗೆ ಸರ್ಕಾರದ ವಿರುದ್ಧ ಜನಾಂದೋಲನ ನಡೆಸಿದರು. ಕೂಲಿಕಾರ್ಮಿಕರು, ರೈತರೆಲ್ಲರನ್ನು ಸೇರಿಸಿಕೊಂಡು ಸುಮಾರು ೪೦೦೦ ಜನ ಮಂಡ್ಯ, ಚನ್ನಪಟ್ಟಣ ಹಾಗೂ ರಾಮನಗರದ ಮೂಲಕ ಪಾದಯಾತ್ರೆ ಮಾಡಿ ಸರ್ಕಾರದ ವಿರುದ್ಧ ಘೋಷಣೆ ಕೂಗಿದರು. ಇದು ಕೂಡ ಜನಮಾನಸದ ಮೇಲೆ ಬಹಳ ಪ್ರಭಾವ ಬೀರಿತು.

ದಂಡಿ ಸತ್ಯಾಗ್ರಹದ ಕಿಚ್ಚು ಮೈಸೂರು ಸಂಸ್ಥಾನದ ಸ್ವಾತಂತ್ರ್ಯ ಹೋರಾಟಗಾರರನ್ನು ಗಡಿಯಾಚೆ ಕರೆದೊಯ್ಯಿತು. ಮೈಸೂರು ಸಂಸ್ಥಾನದಿಂದ ಚೆನ್ನಬಸಯ್ಯ, ವೆಂಕಟರಮಣಯ್ಯ ಹಾಗೂ ಅವರ ಧರ್ಮಪತ್ನಿ ಇವರೆಲ್ಲರೂ ಬೆಳಗಾವಿಯ ಸ್ವಾತಂತ್ರ್ಯ ಹೋರಾಟ ಸಭೆಗಳಿಗೆ ಹೋದರು. ಬೆಂಗಳೂರು ಕಂಟೋನ್ಮೆಂಟ್ ಪ್ರದೇಶದಲ್ಲೂ ಸತ್ಯಾಗ್ರಹದ ಕೂಗು ಹೆಚ್ಚಾಯಿತು.

ಚಳವಳಿಯ ನಡುವೆ ಬ್ರಿಟನ್ ದುಂಡುಮೇಜಿನ ಪರಿಷತ್ತು ಎಂಬ ವಿಚಾರ ವಿನಿಮಯವನ್ನು ಲಂಡನ್ ನಗರದಲ್ಲಿ ನಡೆಸಿತು. ೧೯೩೦, ೩೧ ಮತ್ತು ೩೨ರಲ್ಲಿ ಮೂರು ಬಾರಿ ಈ ಪರಿಷತ್ತು ಸಾಗಿತು. ಗಾಂಧಿ ಮತ್ತು ವೈಸ್ ರಾಯ್ ಇರ್ವಿನ್ ನಡುವೆ ಒಪ್ಪಂದವಾಗಿ ಚಳವಳಿ ಹಿಂತೆಗೆದರು. ಗಾಂಧೀಜಿ ಎರಡನೆಯ ಪರಿಷತ್ತಿಗೆ ೧೯೩೨ರಲ್ಲಿ ಹೋಗಿ ನಿರಾಶೆಯಾಗಿ ಮರಳಿದರು. ೧೯೩೧ರಲ್ಲಿ ನಿಲ್ಲಿಸಿದ್ದ ಚಳುವಳಿ ಮತ್ತೆ ಉಗ್ರವಾಗಿ ನಡೆಯಿತು. ಸರ್ಕಾರದ ದಬ್ಬಾಳಿಕೆ ಇನ್ನೂ ಉಗ್ರವಾಯಿತು. ಕಾರಾಗೃಹಗಳು ಸತ್ಯಾಗ್ರಹಿಗಳಿಂದ ತುಂಬಿದವು. ಈ ನಡುವೆ ಸಾಂವಿಧಾನಿಕ ರಿಯಾಯಿತಿಗಳ ಬಗ್ಗೆ ಬ್ರಿಟನ್ ಪ್ರಧಾನಿ ಒಂದು ಹೇಳಿಕೆ ನೀಡಿದರು. ಪರಿಶಿಷ್ಟ ವರ್ಗದವರಿಗೆ ಪ್ರತ್ಯೇಕ ಮತದಾರ ಸಂಘಗಳ ಸಹಿತ ಪ್ರಾತಿನಿಧ್ಯ ಕಾದಿಡುವ ಪ್ರಕಟಣೆ ಮಾಡಿದರು. ಆಗ ಪುಣೆ ಜೈಲಲ್ಲಿ ಇದ್ದ ಗಾಂಧೀಜಿ ಉಪವಾಸ ಮಾಡಿ ಇದನ್ನು ವಿರೋಧಿಸಿದರು. ಆಗ ಗಾಂಧೀಜಿಗೆ ಹಾಗೂ ಪರಿಶಿಷ್ಟ ವರ್ಗದ ನಾಯಕ ಡಾ.ಅಂಬೇಡ್ಕರ್ ಅವರಿಗೆ ಒಪ್ಪಂದವಾಗಿ,

ಪ್ರತ್ಯೇಕ ಮತದಾರ ಸಂಘ ಬೇಡವೆಂದು ಅವರನ್ನು ಒಪ್ಪಿಸಿ ಆ ವರ್ಗದವರಿಗೆ ಇರುವ ಪ್ರತಿನಿಧಿಗಳ ಸಂಖ್ಯೆ ಹೆಚ್ಚಿಸಿದರು. ಇದು ಪುಣೆ ಒಪ್ಪಂದವೆಂದು (೧೯೩೨) ಪ್ರಸಿದ್ಧ. ಈ ಸಮಯದಲ್ಲಿ ಪುಣೆಯಲ್ಲಿ ವಿದ್ಯಾರ್ಥಿಯಾಗಿದ್ದ ಕೆಂಗಲ್ ಹನುಮಂತಯ್ಯನವರು ರಾಮನಗರಕ್ಕೆ ಹಿಂತಿರುಗಿದರು. ೧೯೩೨ರಲ್ಲಿ ಚನ್ನಪಟ್ಟಣದಲ್ಲಿ ಸಭೆಯನ್ನು ಉದ್ದೇಶಿಸಿ ಮಾತನಾಡಿದರು. ಪುಣೆಯಲ್ಲಿ ಗಾಂಧೀಜಿಯನ್ನು ಭೇಟಿ ಮಾಡಿ ಅವರ ತತ್ವಾದರ್ಶಗಳಿಗೆ ಮಾರುಹೋಗಿ ಸ್ವಾತಂತ್ರ್ಯ ಹೋರಾಟಕ್ಕಾಗಿ ತಮ್ಮ ಹುಟ್ಟೂರಿಗೆ ಬಂದಿರುವುದಾಗಿ ಹೇಳಿದರು.

ಗಾಂಧೀಜಿಯು ೧೯೩೪ರಲ್ಲಿ ಕರ್ನಾಟಕ ಪ್ರವಾಸ ಕೈಗೊಂಡರು. ಜನವರಿ ೭ರಂದು ನೆಲಮಂಗಲದ ಮಾರ್ಗವಾಗಿ ಕನಕಪುರ, ಚನ್ನಪಟ್ಟಣಕ್ಕೆ ಬಂದರು. ಚನ್ನಪಟ್ಟಣದಲ್ಲಿ ಭಾರಿ ಬಹಿರಂಗ ಸಭೆಯನ್ನು ಉದ್ದೇಶಿಸಿ ಮಾತನಾಡಿದರು. ಕನಕಪುರದ ಶೀನಪ್ಪನವರಿಗೆ ಗಾಂಧೀಜಿ ವಿಶ್ರಾಂತಿ ತೆಗೆದುಕೊಳ್ಳುತ್ತಿದ್ದ ಕುಟೀರದಲ್ಲಿ ಸ್ವಯಂಸೇವಕರಾಗಿ ಕೆಲಸ ಮಾಡುವ ಭಾಗ್ಯ ದೊರಕಿತ್ತು ಎಂದು ನೆನಪಿಸಿಕೊಳ್ಳುತ್ತಾರೆ. ಚನ್ನಪಟ್ಟಣದ ಅಭ್ಯುದಯ ಕುಟೀರಕ್ಕೆ ಭೇಟಿನೀಡಿದ ಗಾಂಧೀಜಿ, ಅದನ್ನು ನಡೆಸುತ್ತಿದ್ದ ಹರಿಜನ ಸ್ವಯಂಸೇವಕ, ಆರ್ಯಮೂರ್ತಿ ಅವರನ್ನು ಭೇಟಿ ಮಾಡಿದರು. ಹರಿಜನರಿಗೋಸ್ಕರ ತೆರೆದಿದ್ದ ಹೊಸ ಬಾವಿಯೊಂದನ್ನು ಉದ್ಘಾಟಿಸಿದರು. ಅಲ್ಲಿಂದ ರಾಮನಗರಕ್ಕೂ ಹೋಗಿ ಅಲ್ಲಿ ಜನರನ್ನು ಉದ್ದೇಶಿಸಿ ಮಾತನಾಡಿದರು. ನಂತರ ಕನಕಪುರದತ್ತ ಪ್ರಯಾಣ ಬೆಳೆಸಿದರು. ಅಲ್ಲಿ ಅವರಿಗೆ ನೀಡಿದ ಹಲವು ಪಾರಿತೋಷಕಗಳ ಹರಾಜು ಪ್ರಕ್ರಿಯೆ ನಡೆಯಿತು.

ಮುಂದೆ ಬ್ರಿಟನ್ ೧೯೩೫ರಲ್ಲಿ ಪ್ರಕಟಿಸಿದ ಹೊಸ ಫೆಡರಲ್ ಕಾನೂನಿನಂತೆ ೧೯೩೭ರಲ್ಲಿ ಚುನಾವಣೆ ನಡೆಯಿತು. ಒಟ್ಟು ಬಹುಪಾಲು ಬ್ರಿಟಿಷ್ ಪ್ರಾಂತ್ಯಗಳಲ್ಲಿ ಕಾಂಗ್ರೆಸ್ ಬಹುಮತ ಪಡೆದು ಮಂತ್ರಿಮಂಡಲ ರಚಿಸಿತು. ಇದು ಕಾಂಗ್ರೆಸ್ಸಿಗೆ ದೇಶದೆಲ್ಲೆಡೆ ಸ್ವಾತಂತ್ರ್ಯ ಹೋರಾಟವನ್ನು ಉಗ್ರವಾಗಿ ನಡೆಸಲು ಭೀಮಬಲ ದೊರೆತಂತಾಯಿತು. ಮೈಸೂರು ಕಾಂಗ್ರೆಸ್ಸಿಗೆ ಟಿ.ಸಿದ್ಧಲಿಂಗಯ್ಯ ಅವರು ಅಧ್ಯಕ್ಷರಾದರು. ಇದನ್ನು ದೊಡ್ಡಬಳ್ಳಾಪುರದಲ್ಲಿ ನಡೆದ ಸಮಾವೇಶದಲ್ಲಿ ವಲ್ಲಭಭಾಯ್ ಪಟೇಲ್ ಹಾಗೂ ಗಾಂಧೀಜಿ ಅವರನ್ನು ಕಾಂಗ್ರೆಸ್



ಸೇರ್ಪಡೆಯಾಗುವುದಕ್ಕೆ ಮನವೊಲಿಸಿದರು. ಇದೇ ವರ್ಷದಲ್ಲಿ ತಾಲ್ಲೂಕುಗಳಲ್ಲಿ ಕಾಂಗ್ರೆಸ್ ಸಮಿತಿ ಆರಂಭವಾಯಿತು. ರಾಮನಗರದ ಕಾಂಗ್ರೆಸ್ ಸಮಿತಿಗೆ ಕೆ.ಸುಬ್ಬರಾವ್ ಅಧ್ಯಕ್ಷರಾದರು. ಕನಕಪುರದಲ್ಲಿ ಶೀನಪ್ಪನವರು ಗ್ರಾಮ ವಿದ್ಯಾ ಪ್ರಚಾರಕ ಸಂಘವನ್ನು ಪ್ರಾರಂಭಿಸಿದರು.

ದೊಡ್ಡಬಳ್ಳಾಪುರದಿಂದ ಕಮಲಾದೇವಿ ಚಟ್ಟೋಪಾಧ್ಯಾಯ ಅವರು ರಾಮನಗರಕ್ಕೆ ಭೇಟಿ ನೀಡಿದರು. ಬೆಂಗಳೂರು, ಮಂಡ್ಯ, ರಾಮನಗರದಲ್ಲಿ ಜನತೆಯನ್ನುದ್ದೇಶಿಸಿ ಭಾಷಣಗಳನ್ನು ಮಾಡಿದರು. ಆದರೆ ಮೈಸೂರು ಸಂಸ್ಥಾನದ ಆಡಳಿತ ವರ್ಗವು ಈ ಎಲ್ಲ ಬದಲಾವಣೆಗಳ ವಿರುದ್ಧ ಇದ್ದವು. ಜುಲೈ ೧೫, ೧೯೩೭ರಂದು ದಿವಾನ್ ಮಿರ್ಜಾ ಇಸ್ಮಾಯಿಲ್ ಅವರು ರಾಮನಗರದಲ್ಲಿ ಭಾಷಣ ಮಾಡುತ್ತಾ ಸ್ವರಾಜ್ಯಕ್ಕಾಗಿ ಹೋರಾಟ ನಡೆಸುವುದನ್ನು, ಕಾಂಗ್ರೆಸ್ ಪಕ್ಷವನ್ನು ಉಗ್ರವಾಗಿ ಖಂಡಿಸಿದರು. ಕಾಂಗ್ರೆಸ್ ನೀತಿಯನ್ನು ಯೂರೋಪಿನ ಫ್ಯಾಸಿಸ್ಟ್ ದೇಶಗಳಿಗೆ ಹೋಲಿಸಿದರು. ಇದು ಜನರನ್ನು ಉದ್ರೇಕಗೊಳಿಸಿತು. ಅದೇ ತಿಂಗಳು ಬೆಂಗಳೂರಿನಲ್ಲಿ ಎಲ್ಲ ರೀತಿಯ ಸಭೆ, ಚಳುವಳಿಗಳನ್ನು ಮಿರ್ಜಾ ಇಸ್ಮಾಯಿಲ್ ಅವರು ನಿಲ್ಲಿಸಿದರು.

ಇದರ ವಿರುದ್ಧ ಮೈಸೂರು ಕಾಂಗ್ರೆಸ್ ಸಮರ ಸಾರಿತು. ಜವಾಹರ್ ಲಾಲ್ ನೆಹರುವಿನೊಂದಿಗೆ ಮಾತನಾಡಿ ಮೈಸೂರು ಕಾಂಗ್ರೆಸ್ ಅಧ್ಯಕ್ಷರಾದ ಟಿ.ಸಿದ್ಧಲಿಂಗಯ್ಯನವರು, ತಗಡೂರು ರಾಮಚಂದ್ರರಾಯರು ಹಾಗೂ ವೀರಕೇಸರಿ ಸೀತಾರಾಮಶಾಸ್ತ್ರಿ ಒಂದು ನಿರ್ಧಾರಕ್ಕೆ ಬಂದರು. ಮೈಸೂರು ಸಂಸ್ಥಾನವೆಲ್ಲ ಸುತ್ತಿ ದಿವಾನರ ಹಾಗೂ ಸಭೆಗಳ ರದ್ದುಮಾಡುವುದರ ವಿರುದ್ಧ ಜನಜಾಗೃತಿ ಮೂಡಿಸಬೇಕೆಂಬ ಕಾರ್ಯ ಹಮ್ಮಿಕೊಂಡರು. ಹೊಸಕೋಟೆ, ಹಾರೋಹಳ್ಳಿ, ಕನಕಪುರ, ರಾಮನಗರ, ಚನ್ನಪಟ್ಟಣ, ಮಾಗಡಿ, ನೆಲಮಂಗಲ, ದೇವನಹಳ್ಳಿ ಎಲ್ಲ ಕಡೆಯೂ ಸಂಚರಿಸಿ ಸ್ವಾತಂತ್ರ್ಯ ಹೋರಾಟದ ಬಗ್ಗೆ ಕಿಚ್ಚೆಬ್ಬಿಸಿದರು. ಸರ್ಕಾರವು ಸೆಪ್ಟೆಂಬರ್ ೧೯೩೭ರಲ್ಲಿ ಇವರನ್ನು ಬಂಧಿಸಿತು. ಒಂದು ವರ್ಷದ ಸಜೆ ವಿಧಿಸಿದ ಸರ್ಕಾರ ಇದರ ಜೊತೆ ಮೈಸೂರಿನಲ್ಲಿ ಕೆ.ಟಿ.ಭಾಷ್ಯಂ ಅವರನ್ನೂ ಬಂಧಿಸಿತು. ಪ್ರಜಾ ಸಂಯುಕ್ತ ಪಕ್ಷ ಕಾಂಗ್ರೆಸ್ಸಿನೊಂದಿಗೆ ವಿಲೀನಗೊಂಡಿತು. ಮೈಸೂರು ಕಾಂಗ್ರೆಸ್ ಸಂಖ್ಯಾಬಲ ೧೩೦ಕ್ಕೆ ಹೆಚ್ಚಿತು.

೧೯೩೮ರಲ್ಲಿ ಬಾಂಬೆ ಕಾಂಗ್ರೆಸ್ ನಾಯಕ ನಾರಿಮನ್ ಅವರ ಭಾಷಣಕ್ಕೆ ಅಡ್ಡಿಪಡಿಸಿದಾಗ ಮೈಸೂರು ಕಾಂಗ್ರೆಸ್ ಸಭೆಯಿಂದ ಹೊರನಡೆಯಿತು. ಈ ಗುಂಪು ಘರ್ಷಣೆಯಲ್ಲಿ ಲಾಠಿ ಚಾರ್ಜ್ ಹಾಗೂ ಗೋಲಿಬಾರ್ ನಡೆದು ವ್ಯಕ್ತಿಯೊಬ್ಬ ಪ್ರಾಣ ಕಳೆದುಕೊಂಡನು. ಹೆಚ್.ಕೆ.ವೀರಣ್ಣಗೌಡ, ಸೂರ್ಯನಾರಾಯಣ ಪಂಡಿತರು ಮತ್ತೆ ಸರ್ಕಾರದ ವಿರುದ್ಧ ಸಂಸ್ಥಾನದಲ್ಲೆಲ್ಲ ಸಭೆಗಳನ್ನು ನಡೆಸಿದರು.

೧೯೩೮ರಲ್ಲಿ ರಾಷ್ಟ್ರ ನಾಯಕತ್ವದಲ್ಲಿ ಮಹತ್ತರ ಬದಲಾವಣೆ ಕಾಣತೊಡಗಿತು. ಒಂದೆಡೆ ಗಾಂಧೀಜಿಯ ಅನುಯಾಯಿ ನೆಹರೂರವರು ನಿಂತರೆ ಮತ್ತೊಂದೆಡೆ ಬಂಗಾಳದ ಸುಭಾಷ್‌ಚಂದ್ರ ಬೋಸ್ ಮುಂಚೂಣಿಗೆ ಬಂದರು. ಸುಭಾಷರ ಹಾಗೂ ಗಾಂಧೀಜಿಯ ವಿಚಾರಧಾರೆಗೆ ಬಹಳ ಅಂತರವಿತ್ತು. ಇಷ್ಟು ಹೊತ್ತಿಗೆ ಗಾಂಧೀಜಿಯವರು ರಾಜಕಾರಣದಿಂದ ದೂರವಾಗಿ ಹರಿಜನರ ಉದ್ಧಾರಕ್ಕೆ, ಸಮಾಜ ಸುಧಾರಣೆ ಕಾರ್ಯಗಳತ್ತ ಗಮನ ಹರಿಸುತ್ತಿದ್ದರು. ಕಾಂಗ್ರೆಸ್ ಅಧ್ಯಕ್ಷರಾಗಿದ್ದ ಸುಭಾಷರು ಹರಿಪುರದ ಸಭೆಯಲ್ಲಿ ಬ್ರಿಟಿಷ್ ಸರ್ಕಾರಕ್ಕೆ ೬ ತಿಂಗಳ ಗಡುವು ನೀಡಿದರು. ಸ್ವಾತಂತ್ರ್ಯ ದಕ್ಕದಿದ್ದಲ್ಲಿ ಭಾರತಾದ್ಯಂತ ಉಗ್ರ ಹೋರಾಟ ನಡೆಯುವುದೆಂದು ಎಚ್ಚರಿಸಿದರು. ರಾಷ್ಟ್ರೀಯ ಯೋಜನಾ ಸಮಿತಿಯನ್ನು ರಚಿಸಿದರು. ಇದರಲ್ಲಿ ಆರ್ಥಿಕತೆಗೆ ಕೈಗಾರಿಕೆಗಳನ್ನು ಸ್ಥಾಪಿಸುವ ಯೋಜನೆಗಳಿದ್ದವು. ಇದು ಗಾಂಧಿಯವರ ಗ್ರಾಮೋದ್ಯೋಗದ ಚಿಂತನೆಗೆ ವಿರುದ್ಧವಾಗಿತ್ತು. ಕೊನೆಗೆ ದ್ವಿತೀಯ ವಿಶ್ವ ಯುದ್ಧಕ್ಕೆ ಭಾರತವು ಬ್ರಿಟಿಷ್ ಸರ್ಕಾರಕ್ಕೆ ಯಾವುದೇ ರೀತಿಯ ಸಹಾಯ ಮಾಡಬಾರದೆಂಬ ಯೋಚನೆ ಸುಭಾಷರಿಗಿತ್ತು. ಆಂಗ್ಲರ ಅಸಹಾಯಕತೆ ಭಾರತಕ್ಕೆ ಸ್ವಾತಂತ್ರ್ಯ ದಕ್ಕಿಸಿಕೊಳ್ಳಲು ಸುವರ್ಣಾವಕಾಶ ಎಂದು ನಂಬಿದ್ದರು.

ಸುಭಾಷರು ನೀಡಿದ ಈ ೬ ತಿಂಗಳ ಗಡುವು ದೇಶಾದ್ಯಂತ ಮಿಂಚಿನ ಸಂಚಲನ ಉಂಟುಮಾಡಿತು. ದೇಶಾದ್ಯಂತ ಚಳವಳಿಗಳಾದವು. ಇದನ್ನು ನೋಡಿ ಸ್ಫೂರ್ತಿ ಪಡೆದ ಮೈಸೂರು ಕಾಂಗ್ರೆಸ್ ಸಮಿತಿಯು ೧೯೩೮, ಏಪ್ರಿಲ್ ೯ರಂದು ಶಿವಪುರದಲ್ಲಿ ಧ್ವಜ ಸತ್ಯಾಗ್ರಹವನ್ನು ಹಮ್ಮಿಕೊಂಡಿತು. ೬೦ ಅಡಿ ಅಡಿಕೆ ಮರವನ್ನು ಕಡಿದು, ಅದನ್ನು ಎತ್ತಿನ ಗಾಡಿಯ ಮೇಲೆ ಹೇರಿಕೊಂಡು



ಬಂದು ನೆಡಲಾಯಿತು. ವೀರಣ್ಣಗೌಡ ಹಾಗೂ ಸಂಗಡಿಗರು ಕರ್ನಾಟಕದೆಲ್ಲೆಡೆ ಸಂಚರಿಸಿ ಜನರನ್ನು ಧ್ವಜಾರೋಹಣಕ್ಕೆ ಕರೆದಿದ್ದರು. ಸಾವಿರಾರು ಜನರು ಮದ್ದೂರಿನ ಶಿವಪುರದಲ್ಲಿ ಸೇರಿದರು. ಇದನ್ನು ತಡೆಯಲು ೬೦೦ ಪೊಲೀಸ್ ಸಿಬ್ಬಂದಿ ಸನ್ನದ್ಧರಾಗಿ ನಿಂತಿದ್ದರು. ಎಂ.ಎನ್.ಜೋಯಿಸ್ ಅವರು ಸಿದ್ಧಲಿಂಗಯ್ಯ ಅವರನ್ನು ಧ್ವಜಾರೋಹಣ ಮಾಡಲು ಕೇಳಿಕೊಂಡರು. ಸಿದ್ಧಲಿಂಗಯ್ಯ ಅವರನ್ನು ಪೊಲೀಸರು ಬಂಧಿಸಿದರು. ೧೦, ೧೧ರಂದು ಕೂಡ ಧ್ವಜಾರೋಹಣ ನಡೆಯಿತು. ಭಾಷಣ ಮಾಡಿದವರು, ಧ್ವಜಾರೋಹಣ ಮಾಡಿದವರನ್ನೆಲ್ಲ ಬಂಧಿಸಲಾಯಿತು. ಸುಮಾರು ಹತ್ತು ಸಾವಿರಕ್ಕೂ ಹೆಚ್ಚು ಜನಸ್ತೋಮ ಇದ್ದರೂ ಯಾವುದೇ ಅಹಿತಕರ ಘಟನೆ ಸಂಭವಿಸಲಿಲ್ಲ. ಆದರೆ ಬಂಧನವಾದ ಖೈದಿಗಳ ಮೇಲೆ ಪೋಲೀಸರ ದರ್ಪ, ದೌರ್ಜನ್ಯಗಳು ಎಗ್ಗಿಲ್ಲದೆ ನಡೆಯಿತು. ರಾಮನಗರದ ವಿ.ಗಿರಿಯಪ್ಪನನ್ನು ಏಪ್ರಿಲ್ ೧೧ರಂದು ಬಂಧಿಸಿದ ಮಂಡ್ಯ ಪೊಲೀಸರು ಜೈಲಿನಲ್ಲಿ ಮನಬಂದಂತೆ ಥಳಿಸಿದರು. ಕೆ.ಸುಬ್ಬರಾಯರು ಮತ್ತವರ ಸಂಗಡಿಗರನ್ನು ದಸ್ತಗಿರಿ ಮಾಡಿ ಒಂದು ವಾರ ರಾಮನಗರ ಸಬ್ ಜೈಲಿನಲ್ಲಿ ಇರಿಸಿದ್ದರು. ಹೀಗೆ ನೂರಾರು ಜನ ಜೈಲು ವಾಸ ಅನುಭವಿಸಿ ಹೊರಬಂದರು.

ಜೈಲಿನಿಂದ ಹೊರಬಂದ ಹೋರಾಟಗಾರರಲ್ಲಿ ಮತ್ತಷ್ಟು ಹುರುಪು ಮೂಡಿಬಂತು. ಸರ್ಕಾರಿ ಕಟ್ಟಡಗಳ ಮೇಲೆ ಧ್ವಜವನ್ನು ಹಾರಿಸಬೇಕೆಂಬ ಯೋಜನೆ ಹಾಕಿಕೊಂಡರು. ಮಾದಪ್ಪಗೌಡ ರಾಮನಗರದಲ್ಲಿ ಸತ್ಯಾಗ್ರಹ ಮಾಡಿದರು. ಮೈಸೂರು ಸಂಸ್ಥಾನದೆಲ್ಲೆಡೆ ಧ್ವಜಾರೋಹಣ ಪ್ರಾರಂಭವಾಗಿ ಸರ್ಕಾರಕ್ಕೆ ತಲೆನೋವಾಗಿ ಪರಿಣಮಿಸಿತು. ಧ್ವಜಾರೋಹಣ ಮಾಡಕೂಡದೆಂದು ನಿರ್ಬಂಧನೆ ಹಾಕಿದಾಗ ಸತ್ಯಾಗ್ರಹ ಚಳವಳಿಗಳು ಸಂಸ್ಥಾನದೆಲ್ಲೆಡೆ ವ್ಯಾಪಿಸಿದವು. ಕೋಲಾರದ ವಿದುರಾಶ್ವತ್ಥದಲ್ಲಿ ಧ್ವಜ ಸತ್ಯಾಗ್ರಹ ನಡೆಯುತ್ತಿದ್ದಾಗ ಗೋಲಿಬಾರಾಗಿ ೧೦ ಜನರ ಸಾವಾಯಿತು. ಅದರಲ್ಲಿ ಗರ್ಭಿಣಿ ಹೆಂಗಸು ಕೂಡ ಬಲಿಯಾಗಿದ್ದದ್ದು ಉರಿಯುತ್ತಿರುವ ಬೆಂಕಿಗೆ ತುಪ್ಪ ಸುರಿದಂತಾಯಿತು. ವಿದುರಾಶ್ವತ್ಥವನ್ನು ಮೈಸೂರಿನ ಜಲಿಯನ್ ವಾಲಾಬಾಗ್ ಎಂದು ಕರೆದರು. ಅಲ್ಲಿಯವರೆಗೆ ಮೈಸೂರರಸರ ಮೇಲಿದ್ದ ಗೌರವಗಳು ಕಮ್ಮಿಯಾದವು. ಕಾಂಗ್ರೆಸ್ ಪಕ್ಷಕ್ಕೆ ವ್ಯಾಪಕ ಬೆಂಬಲ ದೊರಕತೊಡಗಿತು.

೧೯೩೮–೩೯ರಲ್ಲಿ ಕೆ.ಸುಬ್ಬರಾಯರು ಅವರ ಸಂಗಡಿಗರ ಜೊತೆಗೆ ರಾಮನಗರ, ಮಾಗಡಿ, ಕನಕಪುರ ಎಲ್ಲೆಡೆ ಸಂಚಾರ ಮಾಡಿ ಸಾರಾಯಿ ಅಂಗಡಿಗಳ ಮುಂದೆ ಪಿಕೆಟಿಂಗ್ ಮಾಡಿದರು. ಹಲವು ಕಡೆ ಇವರನ್ನು ವಾಚಾಮಗೋಚರ ಬೈದಿದ್ದಲ್ಲದೆ ಅವರ ಮೇಲೆ ಹೆಂಡ ಸುರಿದ ಘಟನೆಗಳೂ ನಡೆದವು. ಇದರ ಫಲವಾಗಿ ತಾಲೂಕಿನ ಬಹಳಷ್ಟು ಹೆಂಡದಂಗಡಿಗಳು ಮುಚ್ಚಿದವು. ಇದರ ಜೊತೆ ಈಚಲುಮರಗಳನ್ನು ಕಡಿಯುವ ಯೋಜನೆಯನ್ನೂ ಕೈಗೊಂಡರು. ರಾಮನಗರ ತಾಲ್ಲೂಕು ಆಫೀಸು ಮತ್ತು ಸಬ್ ಡಿವಿಷನ್ ಆಫೀಸಿನ ಮೇಲೂ ಕಾಂಗ್ರೆಸ್ ಧ್ವಜವನ್ನು ಹಾರಿಸಿದರು. ಇವೆಲ್ಲದರ ಫಲವಾಗಿ ಅವರನ್ನು ಮತ್ತು ವಿ.ಗಿರಿಯಪ್ಪನವರನ್ನು ಅರೆಸ್ಟ್ ಮಾಡಿ ಬೆಂಗಳೂರು ಸೆಂಟ್ರಲ್ ಜೈಲಿನಲ್ಲಿ ಸುಮಾರು ೩–೪ ತಿಂಗಳು ಇಟ್ಟಿದ್ದರು. ಇತರರನ್ನೂ ದಸ್ತಗಿರಿ ಮಾಡಿ ಕೋಲಾರದಲ್ಲೆಲ್ಲೋ ಬಿಟ್ಟರು. ಸಿ.ಎಂ.ವೆಂಕಟಪ್ಪನವರು ಮೈಸೂರು ಟೌನ್ ಹಾಲ್ ಸತ್ಯಾಗ್ರಹದಲ್ಲಿ ಪಾಲುಗೊಳ್ಳಲು ಬೆಂಗಳೂರಿಗೆ ಹೋದರು. ೨೬–೧೦–೧೯೩೯ರಲ್ಲಿ ೧೪೪ನೇ ಸೆಕ್ಷನ್ ಅಡಿಯಲ್ಲಿ ಬಂಧಿತರಾದರು. ೬ ತಿಂಗಳ ಜೈಲು ಶಿಕ್ಷೆ, ೩ ತಿಂಗಳ ಜುಲ್ಮಾನೆ ಆಯಿತು. ಮೈಸೂರು ಜೈಲಿನಲ್ಲಿ ಕೊಟ್ಟ ಅನ್ನ ಸೇರಲಿಲ್ಲ. ಮುಗ್ಗುಲು ಅಕ್ಕಿ, ಕಬ್ಬಿಣದ ಪಾತ್ರೆಯ ಅಡಿಗೆ, ಹುಳುಗಳಿರುವ ಅನ್ನ ಇವೆಲ್ಲದರಿಂದ ಹೊಟ್ಟೆನೋವು, ರಕ್ತಭೇದಿಯಾಯಿತು. ಮುಂದೆ ೧೪–೧೧–೧೯೩೯ರಲ್ಲಿ ೧೦೦ ಜನರನ್ನು ಶಿವಮೊಗ್ಗಕ್ಕೆ ಸೇರಿಸಿದರು. ಅಲ್ಲೂ ಅದೇ ಪರಿಸ್ಥಿತಿ. ಎಲ್ಲ ಖೈದಿಗಳೂ ಉಪವಾಸ ಮಾಡಿ, ತಾವೇ ಅಡುಗೆ ಮಾಡಿಕೊಳ್ಳುವರೆಂದು ಅಧಿಕಾರಿಗಳಿಗೆ ಒಪ್ಪಿಸಿದರು. ನಡುವೆ ಅವರನ್ನು ತೀರ್ಥಹಳ್ಳಿ ಜೈಲಿಗೂ ಒಯ್ಯಲಾಯಿತು. ೧೯೪೦ರಲ್ಲಿ ಸಿ.ಎಂ.ವೆಂಕಟಪ್ಪನವರು ಬಿಡುಗಡೆಯಾದರು.

೧೯೩೮ರ ಆಗಸ್ಟ್, ರಾಮನಗರದಲ್ಲಿ ಬೃಹತ್ ರೈತ ಸಮ್ಮೇಳನ ನಡೆಯಿತು. ಒಂದು ಸಾವಿರಕ್ಕೂ ಹೆಚ್ಚು ಜನ ಸೇರಿದರು. ೧೯೩೯ರ ಆಗಸ್ಟ್ ತಿಂಗಳಿನಲ್ಲಿ ಈಶ್ವರರಾವ್, ಬೈರೇಗೌಡ, ಮಳವಳ್ಳಿ ಬಿ.ಭೈರಪ್ಪ, ಅಂಕನಹಳ್ಳಿ ಪಟೇಲ್ ಗುಡ್ಡೇಗೌಡ, ಹುಣಸೇದೊಡ್ಡಿ ಬಾಳಪ್ಪ, ಸುಗ್ಗನಹಳ್ಳಿ ಪಟೇಲ್ ಚೆನ್ನಲಿಂಗಯ್ಯ, ರೇವಣ್ಣ ಎಲ್ಲರ ಮೇಲು ೧೦೭ನೆಯ ಸೆಕ್ಷನ್ ಪ್ರಕಾರ ಖಟ್ಲೆ ಹಾಕಿ ಸೇಂದಿ ಅಂಗಡಿ ನಾಶ ಮಾಡಿದ್ದಾಗಿ ಹೇಳಿದರು. ಐದು ತಿಂಗಳು



ವಿಚಾರಣೆ ಆಗಿ ಜೈಲಿನಲ್ಲಿ ಇದ್ದರು. ಮುಂದೆ ಒಂದು ವರ್ಷ ಸಜೆ ಮಾಡಿ ಬೆಂಗಳೂರು ಜೈಲಿಗೆ ಕಳುಹಿಸಿದರು. ಅಲ್ಲಿ ಅಪೀಲು ಮಾಡಿ ಖುಲಾಸೆ ಆಯಿತು. ಅಷ್ಟರಲ್ಲಿ ೭ ತಿಂಗಳು ೨೩ ದಿನ ಜೈಲುವಾಸ ಆಗಿತ್ತು.

ಹೋರಾಟಗಾರರನ್ನು ಕೇವಲ ಬಂಧಿಸುವುದು, ಸೆರೆಗೆ ತಳ್ಳುವುದು ಇವಲ್ಲದೆ ಹೋರಾಟದಿಂದ ದೂರ ಉಳಿಯಲು ಹಲವು ಪ್ರಲೋಭನೆಗಳೂ ಸರ್ಕಾರದ ವತಿಯಿಂದ ಬರುತ್ತಿದ್ದವು. ವಿ.ಗಿರಿಯಪ್ಪ ಇಂತಹ ಒಂದು ಘಟನೆಯನ್ನು ನೆನಪಿಸಿಕೊಳ್ಳುತ್ತಾರೆ. "೧೦–೯–೧೯೩೯ರಂದು ಮಾನಗಾನಹಳ್ಳಿ ಸ್ಕೂಲಿನಲ್ಲಿ ಸರ್ ಮಿರ್ಜಾರವರು ಬಂದಿದ್ದರು. ಅವರು ನನ್ನನ್ನು ಕರೆಸಿ 'ಕಾಂಗ್ರೆಸ್ಸಿಗೆ ಸೇರಬೇಡ' ಎಂದು ಹೇಳಿದ್ದಲ್ಲದೆ ಚನ್ನಪಟ್ಟಣ ತಾಲ್ಲೂಕು ದೊಂಬರಬೈಲಿನಲ್ಲಿ ೧೦ ಎಕರೆ ಜಮೀನು ಕೊಡುತ್ತೀನಿ, ವ್ಯವಸಾಯ ಮಾಡಿಕೊಂಡು ಸುಖವಾಗಿ ಇರು ಎಂದರು. ನಾನು ಒಪ್ಪದೇ ಇರಲು ಗದರಿಸಿ, ನಿನಗೆ ತಾಲ್ಲೂಕು ಅಧಿಕಾರಿಗಳಿಂದ ಹಿಂಸೆ ಕೊಡಿಸುತ್ತೇನೆ, ಹಾಗಲ ಹಳ್ಳಿಯಿಂದ ಊರು ಬಿಡಿಸುತ್ತೇನೆ, ಎಂದು ಕುತ್ತಿಗೆ ಹಿಡಿದು ಹೊರಗೆ ತಳ್ಳಿಸಿದರು. ಅನಂತರ ನನಗೆ ಅಧಿಕಾರಿಗಳಿಂದ ಇಲ್ಲಸಲ್ಲದ ಹಿಂಸೆ ಆರಂಭವಾಯಿತು" ಎಂದು ಹೇಳಿಕೊಂಡಿದ್ದಾರೆ.

ವಿ.ಗಿರಿಯಪ್ಪನವರು ೧೯೩೭ರಲ್ಲಿ ತಮ್ಮ ಸಂಗಡಿಗರ ಜೊತೆ ಮಾಗಡಿ ತಾಲ್ಲೂಕು ಮಂಚನಬೆಲೆ ಹಾಗೂ ರಾಮನಗರದ ಕುಂಬಾರದೊಡ್ಡಿ, ಮೆಳೆಹಳ್ಳಿಗಳಲ್ಲಿ ಸೇಂದಿ ಅಂಗಡಿಗಳ ಮುಂದೆ ಪಿಕೆಟಿಂಗ್ ನಡೆಸಿದರು. ಮಾಗಡಿ ಪೊಲೀಸರು ಬಂಧಿಸಿ ೧೫ದಿನ ಇಟ್ಟುಕೊಂಡು ಅಪಾರ ಹಿಂಸೆ ಕೊಟ್ಟರು. ಫೆಬ್ರವರಿ ೧೯೩೮ರಲ್ಲೂ ಹಲವು ಹಳ್ಳಿಗಳಲ್ಲಿ ಸೇಂದಿ ಅಂಗಡಿಗಳ ಮುಂದೆ ಪಿಕೆಟಿಂಗ್ ನಡೆದವು. ಇದು ತಿಂಗಳಾನುಗಟ್ಟಲೆ ನಡೆದು ಅಲ್ಲಿನ ಸೇಂದಿ ಅಂಗಡಿಗಳು ಮುಚ್ಚಿಹೋದವು. ೨೯–೭–೧೯೩೯ರಲ್ಲಿ ಮೆಳೆಹಳ್ಳಿಯಲ್ಲಿ ಸೇಂದಿ ಅಂಗಡಿಗಳ ಮುಂದೆ ಪಿಕೆಟಿಂಗ್ ನಡೆದಾಗ ಗಿರಿಯಪ್ಪನವರನ್ನು ಪೊಲೀಸರು ಬಂಧಿಸಿ, ರಾಮನಗರ ಠಾಣೆಯಲ್ಲಿ ೨೧ ದಿನ ಇಟ್ಟುಕೊಂಡು ವಿಪರೀತವಾಗಿ ಹೊಡೆದು ಗಾಯಗೊಳಿಸಿ ಕೊನೆಗೆ ರಾತ್ರಿ ಹೊತ್ತು ದೂರದ ಕಾಡಿಗೆ ಒಯ್ದು ಬಿಟ್ಟರು. ಈ ರೀತಿಯ ಬಂಧನ, ದೌರ್ಜನ್ಯ ಹಲವು ಬಾರಿ ನಡೆಯಿತು.

ಸೆಪ್ಟೆಂಬರ್ ೧೯೩೯ರಲ್ಲಿ ಮತ್ತೆ ಗಿರಿಯಪ್ಪ ಹಾಗೂ ಅವರ ೪–೫ ಸಂಗಡಿಗರನ್ನು ಬಂಧಿಸಿ ನಾಲ್ಕೈದು ದಿನ ಊಟ ಹಾಕದೆ ಇಟ್ಟು, ಕೊನೆಗೆ ದೂರದ ಅಡವಿಯಲ್ಲಿ ಬಿಟ್ಟು ಇವರ ಹತ್ತಿರ ಇದ್ದ ಡೈರಿ, ಹಣದ ಪಾಕೇಟು, ಬಂಗಾರದ ಉಂಗುರ ಕಸಿದುಕೊಂಡು ಬಿಟ್ಟರು. ಇವರೆಲ್ಲರೂ ಕಷ್ಟಪಟ್ಟು ವೇಲೂರು ಗ್ರಾಮಕ್ಕೆ ಬಂದು, ಅಲ್ಲಿನ ಕಾಂಗ್ರೆಸ್ ಕಾರ್ಯಕರ್ತರ ಸಹಾಯದಿಂದ ಬೆಂಗಳೂರಿಗೆ ಬಂದರು. ಮತ್ತೆ ಅಕ್ಟೋಬರ್ ೧೯೩೯ರಲ್ಲಿ ಗಿರಿಯಪ್ಪನವರನ್ನು ಬಂಧಿಸಿ ಕರೆದೊಯ್ದರು. ಇವರು ಎರಡು ತಿಂಗಳು ೯ ದಿನ ಜೈಲಿನಲ್ಲಿ ಇರುವಾಗ ಅವರ ಮನೆಯಲ್ಲಿದ್ದ ಕಾಳುಕಡ್ಡಿ, ಹುಲ್ಲಿನ ಮೆದೆ ಜಪ್ತಿ ಮಾಡಿ, ಜುಲ್ಮಾನೆ ಹಣ ಹರಾಜಿನಿಂದ ವಸೂಲು ಮಾಡಿದರು.

ಇತ್ತ ಮಾಗಡಿಯ ಶಿವರಾಂ ಸಿಂಗ್ ಅವರೂ ಹಲವು ಕಷ್ಟನಷ್ಟಗಳನ್ನು ಅನುಭವಿಸಿದರು. ೧–೧೦–೧೯೩೯ರಲ್ಲಿ ಮೈಸೂರಿನ ಮೈದಾನದಲ್ಲಿ ಭಾಷಣ ಮಾಡಿ ಬಂಧಿಯಾದರು. ಅವರ ದಸ್ತಗಿರಿಯಾಗಿ ಏಳು ತಿಂಗಳ ಕಾಲ ಕಠಿಣ ಸಜೆಯನ್ನು ಮ್ಯಾಜಿಸ್ಟ್ರೇಟರು ವಿಧಿಸಿದರು ಮತ್ತು ಮೈಸೂರು ಜೈಲಿನಲ್ಲಿ ಇಟ್ಟರು. ಜೈಲಿನಲ್ಲಿ ಊಟದ ವ್ಯವಸ್ಥೆ ಸರಿಯಿರಲಿಲ್ಲ. ಮಾರನೇ ದಿನವೇ ಅವರನ್ನೂ ಅವರ ಸಂಗಡಿಗರನ್ನೂ ಶಿವಮೊಗ್ಗ ಜೈಲಿಗೆ ವರ್ಗಾಯಿಸಿದರು. ಅಲ್ಲೂ ಸಹ ಊಟದ ವ್ಯವಸ್ಥೆ ಹದಗೆಟ್ಟಿತ್ತು. ಇದರಿಂದ ಶಿವರಾಂ ಸಿಂಗ್ ಅವರಿಗೆ ರಕ್ತಬೇಧಿ, ವಾಂತಿ, ಜ್ವರ ಉಂಟಾಗಿ ಆಸ್ಪತ್ರೆ ಸೇರಿದರು. ಅಲ್ಲಿಂದ ಪುನಃ ಜೈಲಿಗೆ ಬಂದ ಮೇಲೆ ಅವರನ್ನು ತೀರ್ಥಹಳ್ಳಿ ಜೈಲಿಗೆ ವರ್ಗಾಯಿಸಿದರು. ೩–೫–೧೯೪೦ರಂದು ಅವರಿಗೆ ಬಿಡುಗಡೆಯಾಯಿತು. ೧೯೩೯–೪೦ರಲ್ಲಿ ಸುಮಾರು ೨೮೦೦ ಜನರನ್ನು ಸತ್ಯಾಗ್ರಹ ಮಾಡಿದ್ದಕ್ಕೆ ಜುಲ್ಮಾನೆ, ಬಂಧನ ಆಗಿತ್ತು. ೧೯೪೦ರಲ್ಲಿ ಜಯಚಾಮರಾಜ ಒಡೆಯರ್ ಅವರ ಒತ್ತಾಯದ ಮೇರೆಗೆ ಇವರೆಲ್ಲರ ಬಿಡುಗಡೆಯಾಯಿತು.

## ಕ್ವಿಟ್ ಇಂಡಿಯಾ ಚಳುವಳಿ

೧೯೩೯ರಲ್ಲಿ ಎರಡನೆಯ ವಿಶ್ವಯುದ್ಧ ಪ್ರಾರಂಭವಾದಾಗ ಬ್ರಿಟಿಷರಿಗೆ ಯುದ್ಧದಲ್ಲಿ ನೆರವು ನೀಡಬೇಕೆ ಬೇಡವೇ ಎಂದು ಭಾರತದ ರಾಜಕೀಯ ಪಕ್ಷಗಳು ಯೋಚಿಸುತ್ತಿದ್ದವು. ಮುಸ್ಲಿಂ ಲೀಗ್ ಇದಕ್ಕೆ ಬೆಂಬಲ ಸೂಚಿಸಿದರೆ



ಕಾಂಗ್ರೆಸ್ ಪಕ್ಷವು ಈ ಸಹಾಯದ ಪ್ರತ್ಯುಪಕಾರವಾಗಿ ಸ್ವಾತಂತ್ರ್ಯ ನೀಡಬೇಕೆಂದು ಬ್ರಿಟಿಷ್ ಸರ್ಕಾರವನ್ನು ಆಗ್ರಹಿಸಿದವು. ಆದರೆ ಬ್ರಿಟಿಷ್ ಗವರ್ನರ್ ಜನರಲ್ ಲಿನ್ಲಿತ್ ಗೌ ಇದನ್ನು ಪರಿಗಣಿಸಲಿಲ್ಲ. ಕಾಂಗ್ರೆಸ್ಸಿನಿಂದ ದೂರವಾಗಿದ್ದ ಸುಭಾಷರು ಬ್ರಿಟಿಷರನ್ನು ಸೋಲಿಸಲು ಇದೇ ಸರಿಯಾದ ಸಮಯವೆಂದು ಬಂಗಾಳದಿಂದ ಗೃಹಬಂಧನದಿಂದ ತಪ್ಪಿಸಿಕೊಂಡು ಜರ್ಮನಿಗೆ ಹೋದರು. ಗವರ್ನರ್ ಜನರಲ್ ಅವರ ಉಪೇಕ್ಷೆ ಸಹಿಸಲಾಸಾಧ್ಯವಾಗಿತ್ತು. ಕಾಂಗ್ರೆಸ್ ಮಂತ್ರಿಮಂಡಲಗಳು ರಾಜೀನಾಮೆ ನೀಡಿದವು. ಯುದ್ಧವಿರೋಧಿ ವೈಯಕ್ತಿಕ ಸತ್ಯಾಗ್ರಹ ೧೯೪೦–೪೧ರಲ್ಲಿ ಸಂಘಟಿಸಲಾಯಿತು. ೧೯೪೨ರ ಕ್ರಿಪ್ಸ್ ಮಿಷನ್ ಕಾಂಗ್ರೆಸ್ ಜೊತೆ ಯುದ್ಧದಲ್ಲಿ ಸಹಕಾರ ನೀಡುವುದರ ಬಗ್ಗೆ ಆದ ಸಂಧಾನದಲ್ಲಿ ಸೋತಿತು. ಕಾಂಗ್ರೆಸ್ ವರ್ಕಿಂಗ್ ಸಮಿತಿ ೧೪ ಜುಲೈ ೧೯೪೨ರಂದು ಸಂಪೂರ್ಣ ಸ್ವಾತಂತ್ರ್ಯಕ್ಕೆ ಹೋರಾಟ ಮಾಡುವುದಾಗಿ ನಿರ್ಧಾರ ಮಾಡಲಾಯಿತು. ಆಗಸ್ಟ್ ೮, ೧೯೪೨ರಂದು ಮುಂಬೈನ ಟ್ಯಾಂಕ್ ಮೈದಾನದಲ್ಲಿ ಭಾಷಣ ಮಾಡುತ್ತಾ ಗಾಂಧೀಜಿಯವರು ಬ್ರಿಟಿಷ್ ಸರ್ಕಾರದ ವಿರುದ್ಧ ದೇಶಾದ್ಯಂತ ಅಸಹಕಾರ ಚಳುವಳಿಯನ್ನು ಮಾಡಬೇಕೆಂದು ಆಜ್ಞೆ ಹೊರಡಿಸಿದರು. “ಮಾಡು ಇಲ್ಲವೇ ಮಡಿ” ಎಂಬುದು ಧ್ಯೇಯವಾಕ್ಯವಾಯಿತು. “ಬ್ರಿಟಿಷರೇ! ಭಾರತ ಬಿಟ್ಟು ತೊಲಗಿ!” ಘೋಷಣೆ ಹೋರಾಟಗಾರರ ಮಂತ್ರವಾಯಿತು. ಈ ಭಾಷಣದ ೨೪ ಗಂಟೆಗಳಲ್ಲಿ ಕಾಂಗ್ರೆಸ್ಸಿನ ಪ್ರಮುಖ ನಾಯಕರನ್ನೆಲ್ಲ ಬಂಧಿಸಿ ಜೈಲಿಗೆ ತಳ್ಳಲಾಯಿತು.

ಗಾಂಧೀಜಿಯ ಬಂಧನದ ಸುದ್ದಿ ಭಾರತಾದ್ಯಂತ ಮಿಂಚಿನಂತೆ ಸಂಚಾರವಾಯಿತು. ಕುದಿಯುತ್ತಿದ್ದ ಕ್ರೋಧಾಗ್ನಿ ಆಸ್ಫೋಟವಾಯಿತು. ಲಕ್ಷಾಂತರ ಜನ ಬ್ರಿಟಿಷ್ ಸರ್ಕಾರದ ವಿರುದ್ಧ ಬೀದಿಗಿಳಿದರು. ಮೈಸೂರು ಕಾಂಗ್ರೆಸ್ ಅಧ್ಯಕ್ಷ ಸುಬ್ರಹ್ಮಣ್ಯ ಮತ್ತಿತರರು ಬೊಂಬಾಯಿಯಿಂದ ಮರಳಿ ಬೆಂಗಳೂರಿಗೆ ಬರುವಾಗ ಯಶವಂತಪುರ ರೈಲ್ವೆ ನಿಲ್ದಾಣದಲ್ಲಿಯೇ ಅವರ ಬಂಧನವಾಯಿತು. ಮೈಸೂರು ಕಾಂಗ್ರೆಸ್ ಕಾರ್ಯಕಾರಿ ಸಮಿತಿ, ಜಿಲ್ಲಾ ಕಾಂಗ್ರೆಸ್ ಸಮಿತಿ, ನಗರ ಕಾಂಗ್ರೆಸ್ ಸಮಿತಿಗಳೆಲ್ಲವನ್ನು ನ್ಯಾಯ ಬಾಹಿರ ಸಂಸ್ಥೆಗಳೆಂದು ಘೋಷಿಸಲ್ಪಟ್ಟವು. ಹಿಂದೆಂದೂ ಕೇಳರಿಯದ ರೀತಿಯಲ್ಲಿ ಚಳುವಳಿಯನ್ನು ಹತ್ತಿಕ್ಕಲು ಸರ್ಕಾರ ವಿಶ್ವಪ್ರಯತ್ನ ಪಟ್ಟಿತು. ದಬ್ಬಾಳಿಕೆ ಹೆಚ್ಚಿದಷ್ಟೂ ಚಳುವಳಿ ಉಗ್ರಸ್ವರೂಪ ತಾಳುತ್ತಾ

ಬಂದಿತು. ಈ ಸೆಣಸಾಟದಲ್ಲಿ ಮೈಸೂರು ಸಂಸ್ಥಾನದ ಜನತೆ ಸರ್ವಸಮರ್ಪಣಾಭಾವದೊಂದಿಗೆ ಧುಮುಕಿತು. ಅನೇಕ ಸ್ವಾತಂತ್ರ್ಯ ಹೋರಾಟಗಾರರು ಭಾರತಾಂಬೆಗೆ ತಮ್ಮ ಜೀವವನ್ನೇ ಬಲಿಕೊಟ್ಟರು.

೯ನೇ ತಾರೀಕು ಬೆಂಗಳೂರಿನ ಚಿಕ್ಕ ಲಾಲ್‌ಬಾಗಿನಲ್ಲಿ ಸಭೆ ಸೇರಲಾಯಿತು. ಇದರಲ್ಲಿ ಹೆಚ್.ಸಿ.ಸೂರ್ಯನಾರಾಯಣ, ಕೆಂಗಲ್ ಹನುಮಂತಯ್ಯ, ಎನ್.ಡಿ.ಶಂಕರ್, ಕೆ.ರಾಮಸ್ವಾಮಿ ಉಪಸ್ಥಿತರಿದ್ದರು. ಸಂಸ್ಥಾನದ ನಾಯಕರು ಬರಲಿ ಎಂದು ನಿರ್ಣಯವಾಯಿತು. ಆದರೆ ಸಂಸ್ಥಾನದ ನಾಯಕರೆಲ್ಲರ ಬಂಧನವಾಗಿತ್ತು. ೯ರಂದೇ ರಾಮನಗರದಲ್ಲಿ ಮುಷ್ಕರ ಹೂಡಲಾಗಿತ್ತು. ಅಂಗಡಿ ಬಾಗಿಲುಗಳೆಲ್ಲ ಮುಚ್ಚಿದವು. ಚನ್ನಪಟ್ಟಣದಲ್ಲೂ ಮುಷ್ಕರ ೧೦ಕ್ಕೆ ಆಯಿತು. ಇದು ಹಳ್ಳಿಗಳಲ್ಲೆಲ್ಲ ಆವರಿಸಿತು. ೧೧ರಂದು ಬೆಂಗಳೂರಿನ ಮೈಸೂರು ಬ್ಯಾಂಕ್ ಸರ್ಕಲ್ನಲ್ಲಿ ಒಂದು ಲಕ್ಷಕ್ಕೂ ಹೆಚ್ಚು ಜನ ಸೇರಿದರು. ಅಶ್ವಾರೂಢ ಸೈನಿಕರು ಬ್ಯಾಟನ್ ಬೀಸುತ್ತ ಜನರ ಮೇಲೆ ಮುಗಿಬಿದ್ದರು. ಜನರ ಕಡೆಯಿಂದ ಕಲ್ಲುತೂರಾಟವಾಯಿತು. ಪೋಸ್ಟ್ ಆಫೀಸ್ ದೋಚಲಾಯಿತು. ಕುದುರೆ ಸವಾರರನ್ನು ಬೀಳಿಸಲು ರಸ್ತೆಯ ಮೇಲೆ ರಾಗಿ ಸುರಿಯಲಾಯಿತು. ಹಲವರು ಕುದುರೆಯಿಂದ ಬಿದ್ದು ಗಾಯಗೊಂಡರು. ಲ್ಯಾನ್ಸರ್ ಒಬ್ಬನು ಸ್ಥಳದಲ್ಲೇ ಮೃತನಾದನು. ಹೀಗೆ ಬೆಂಗಳೂರಿನಲ್ಲಿ ಕ್ವಿಟ್ ಇಂಡಿಯಾ ಚಳವಳಿ ಉಗ್ರರೂಪದಲ್ಲಿ ಪ್ರಾರಂಭವಾಯಿತು. ಹಲವಾರು ಚಳವಳಿಗಳಲ್ಲಿ ಲಾಠಿಯೇಟು, ಗೋಲಿಬಾರ್ ಆಗಿ ಬೆಂಗಳೂರಿನಲ್ಲಿ ೧೫೦ಕ್ಕೂ ಹೆಚ್ಚು ಜನ ಮೃತರಾದರು. ಅಶ್ರುವಾಯು, ಗುಂಡು ಹಾರಿಸುವುದು, ಲಾಠಿಪ್ರಹಾರ ದಿನನಿತ್ಯದ ವಾರ್ತೆಯಾಯಿತು.

೧೮ ರಂದು ರಾಮನಗರ ಮತ್ತು ಚನ್ನಪಟ್ಟಣ ವಿದ್ಯಾರ್ಥಿಗಳು, ಸುಮಾರು ೩೦೦ರಷ್ಟು ಮಾಡೂರಿಗೆ ರೈಲಿನಲ್ಲಿ ತೆರಳಿ ಅಲ್ಲಿ ಆಂದೋಲನ ನಡೆಸಿದರು. ಕಸ್ತೂರ್ ಮತ್ತು ಅಟಗೂರಿನಲ್ಲೂ ಶಾಲೆಗಳ ಪೀಠೋಪಕರಣಗಳನ್ನು ಧ್ವಂಸ ಮಾಡಲಾಯಿತು. ನಂತರ ಹೇಮನಹಳ್ಳಿಯಲ್ಲಿ ಸೇಂದಿ ಅಂಗಡಿಗೆ ಬೆಂಕಿ ಇಟ್ಟರು. ರಾಮನಗರದಲ್ಲಿ ಕೆ.ಸುಬ್ಬರಾಯರು ಡಿಕ್ಟೇಟರ್– ಪ್ರೆಸಿಡೆಂಟ್ ಆದರು. ಎಲ್ಲರನ್ನು ದಸ್ತಗಿರಿ ಮಾಡುತ್ತಿದ್ದುದರಿಂದ ಒಬ್ಬ ನಾಯಕನು ಜೈಲಿಗೆ ಹೋದ



ನಂತರ ಮತ್ತೊಬ್ಬರು ಆ ಜಾಗಕ್ಕೆ ನೇಮಕಗೊಳ್ಳುತ್ತಿದ್ದರು. ಕೆ.ಸುಬ್ಬರಾಯರು ಪೊಲೀಸರ ಕೈಗೆ ಸಿಗದಂತೆ ತಲೆಮರೆಸಿಕೊಂಡು ಓಡಾಡುತ್ತಿದ್ದರು. ಆಗಿನ ಸಮಯದಲ್ಲಿ ಅವರು ಮಾಡುತ್ತಿದ್ದ ಕಾರ್ಯ ಕನಕಪುರದಿಂದ ಕೆ.ಜಿ.ಎಫ್. ಕಡೆ ಹೋಗುವ ವಿದ್ಯುತ್ ಕಂಬಗಳನ್ನು ಸುಡುವುದು. ಆಗಿನ ಕಾಲದಲ್ಲಿ ಇದಕ್ಕೆ ಮರದ ಕಂಬ ಉಪಯೋಗಿಸುತ್ತಿದ್ದರು. ಆದರೆ ಇದು ನಡೆಯುವ ಮೊದಲೇ ಮಿತ್ರರೊಬ್ಬರ ಪಿತೂರಿಯಿಂದ ಇವರ ದಸ್ತಗಿರಿ ಆಯಿತು. ೧೯೪೨ನೇ ಆಗಸ್ಟ್ ಮಧ್ಯಭಾಗದಿಂದ ೧೯೪೩ನೇ ಅಕ್ಟೋಬರ್ ಮಧ್ಯದವರೆಗೆ ಜೈಲಿನಲ್ಲಿ ಹಾಕಿದ್ದರು. ಇದರ ಮಧ್ಯೆ ಇವರು ಹಾಗೂ ಇವರ ಸಂಗಡಿಗರನ್ನು ರಾಮನಗರ ತಾಲ್ಲೂಕಿನ ಬೈರಮಂಗಲದ ಕೆರೆ ಕಾಮಗಾರಿ ಕೆಲಸಕ್ಕೆ ವರ್ಗಾಯಿಸಿದ್ದರು.

ಸಿ.ಎಂ.ವೆಂಕಟಪ್ಪನವರು ತಾಲೂಕಿನೆಲ್ಲೆಡೆ ಸಭೆ, ಮೆರವಣಿಗೆ, ಜನ ಚಳವಳಿ ನಡೆಸಿ ಬಂಧನಕ್ಕೊಳಗಾದರು. ಇವರು ಹಲವಾರು ತಿಂಗಳುಗಳ ಕಾಲ ಜೈಲು ವಾಸ ಅನುಭವಿಸಬೇಕಾಯಿತು. ಇನ್ನೊಬ್ಬ ಹೋರಾಟಗಾರರಾದ ಎಂ.ಎನ್.ಈಶ್ವರ್‌ರಾವ್ ಹಾಗೂ ಅವರ ೭ ಜನ ಸಂಗಡಿಗರು ಸೇಂದಿ ಅಂಗಡಿಯ ಮುಂದೆ ಪಿಕೆಟಿಂಗ್ ಮಾಡುತ್ತಿದ್ದರು. ಆಗ ಅವರೆಲ್ಲರನ್ನು ಬಂಧಿಸಲಾಯಿತು. ಸೆಂಟ್ರಲ್ ಜೈಲಿನಲ್ಲಿ ೩ ತಿಂಗಳು ಇದ್ದು ಬಿಡುಗಡೆಯಾಯಿತು. ಇವರು ಜೈಲಿನಲ್ಲಿ ಇದ್ದಾಗ ಇವರ ಸಾಲದ ಬಾಕಿ ೧೧ ರೂಪಾಯಿಗೆ ಇವರ ಹೊಲಿಗೆ ಯಂತ್ರವನ್ನು ಹರಾಜು ಹಾಕಿದರು. ಅವರ ಮಿತ್ರ ಚಿಕ್ಕಭದ್ರೇಗೌಡರು ಅದನ್ನು ಕೊಂಡು ಜೈಲಿನಿಂದ ಬಂದ ಮೇಲೆ ಕೊಂಡ ಬೆಲೆಗೇ ಇವರಿಗೆ ಮರಳಿಕೊಟ್ಟರು. ಆದರೂ ಮಿಕ್ಕ ೧೫೦ ರೂಪಾಯಿ ಸಾಲಕ್ಕೆ ಇದನ್ನು ಮತ್ತೆ ಮಾರಬೇಕಾಯಿತು. ವಿ.ಗಿರಿಯಪ್ಪನವರನ್ನೂ ಬಂಧಿಸಲಾಯಿತು. ಆದರಿವರು ಬೆಂಗಳೂರಿನಲ್ಲಿ ಇವರ ಹೆಸರನ್ನು ತಪ್ಪು ಕೊಟ್ಟು ಇವರ ಆಸ್ತಿ ಜಪ್ತಿಯಾಗದಂತೆ ನೋಡಿಕೊಂಡರು. ಮಾಗಡಿಯ ಶಿವರಾಂ ಸಿಂಗ್, ಚಿಕ್ಕೇಗೌಡ, ಆದಿರಾಜಯ್ಯ ಇವರನ್ನು ಪೊಲೀಸರು ೨೦–೮–೧೯೪೨ರಂದು ಬಂಧಿಸಿದರು. ಇವರನ್ನು ಬೆಂಗಳೂರು ಸೆಂಟ್ರಲ್ ಜೈಲಿಗೆ ಕಳುಹಿಸಿದರು. ೮–೧೦–೧೯೪೩ರ ವರೆಗೆ ಇವರು ಜೈಲುವಾಸ ಅನುಭವಿಸಿದರು.

ರಾಮನಗರ ತಾಲೂಕಿನೆಲ್ಲೆಡೆ ಒಂದೆರಡು ತಿಂಗಳವರೆಗೆ ಮುಷ್ಕರ, ಚಳವಳಿಗಳು ಉಗ್ರವಾಗಿ ನಡೆದವು. ಮೈಸೂರು ಸಂಸ್ಥಾನವು ಚಳವಳಿ

ಆಸ್ಫೋಟಗೊಳ್ಳುವುದರೊಳಗೇ ಹತ್ತಿಕ್ಕಿದರು. ಪ್ರಮುಖ ಮುಖಂಡರು, ನಾಯಕರನ್ನೆಲ್ಲ ಬಂಧಿಸಿ ಜೈಲಿಗೆ ಹಾಕಿದ ನಂತರ ಚಳವಳಿಯ ಕಾವು ಕಡಿಮೆಯಾಯಿತು. ೧೯೪೨–೪೩ರ ಒಳಗೆ ಹತ್ತು ಸಾವಿರ ಮಂದಿ ಜೈಲಿನಲ್ಲಿದ್ದರು. (೩,೫೦೪ ಜನ ೧೯೪೨–೪೩ರಲ್ಲಿ, ೬,೪೫೩ ಜನ ೧೯೪೩–೪೪ರಲ್ಲಿ). ರಾಮನಗರ, ಚನ್ನಪಟ್ಟಣ, ದೊಡ್ಡಬಳ್ಳಾಪುರ ಸ್ವಾತಂತ್ರ್ಯ ಸಂಗ್ರಾಮಕ್ಕೆ ದೊಡ್ಡ ಕೊಡುಗೆಯನ್ನು ನೀಡಿತು. ಬೆಂಗಳೂರು – ಮೈಸೂರು ಮಧ್ಯೆ ಫಿಶ್ ಪ್ಲೇಟ್, ರೈಲು ಕಂಬಿಗಳನ್ನು ಕಿತ್ತುಹಾಕಿದ ಪ್ರಸಂಗಗಳು ವರದಿಯಾದವು. ಒಂದೆಡೆ ಮೈಸೂರು, ಬೆಂಗಳೂರು ನಗರಗಳಲ್ಲಿ ಚಳವಳಿ ಕಮ್ಮಿಯಾಗ ತೊಡಗಿದರೆ, ಬೇರೆಲ್ಲೆಡೆ ಪರಿಸ್ಥಿತಿ ಕೈಮೀರಿತು. ಶಿಕಾರಿಪುರದ ಈಸೂರು ದಂಗೆಯಲ್ಲಿ ಪೊಲೀಸರ ಮೇಲೆ ಕೈಮಾಡಿದರೆಂದು, ಈಸೂರಿನ ಜನರ ಮೇಲೆ ದೌರ್ಜನ್ಯ ನಡೆಯಿತು. ಹೆಂಗಸರ ಮಾನಭಂಗವಾಯಿತು, ಜನರ ಆಸ್ತಿಪಾಸ್ತಿ ನಾಶವಾಗಿ ಕೊನೆಗೆ ೨೮ ಜನರಿಗೆ ಜೀವಾವಧಿ ಶಿಕ್ಷೆ ಮತ್ತು ಐವರನ್ನು ಗಲ್ಲಿಗೇರಿಸಲಾಯಿತು. ಇದರ ಜೊತೆ ಕಾರ್ಮಿಕ ಸಂಘರ್ಷ ಜೋರಾಗಿ ನಡೆಯಿತು. ಗಿರಣಿಗಳಲ್ಲಿ ಕೆಲಸ ಮಾಡುವ ೮೦೦೦೦ ಕಾರ್ಮಿಕರಲ್ಲಿ ೩೨೦೦೦ ಜನ ಕಾರ್ಮಿಕರು ಮುಷ್ಕರ ನಡೆಸಿದರು. ಮೈಸೂರು ಸಂಸ್ಥಾನದ ಹಲವಾರು ಬಟ್ಟೆ ಗಿರಣಿಗಳು ಮುಚ್ಚಲ್ಪಟ್ಟವು. ಭದ್ರಾವತಿಯಲ್ಲಿ ೩–೫–೧೯೪೨ರಲ್ಲಿ ಪರಿಸ್ಥಿತಿ ವಿಕೋಪಕ್ಕೆ ತಿರುಗಿ ಕಾರ್ಮಿಕರ ಮೇಲೆ ಗುಂಡು ಹಾರಿಸಿ, ಮೂವರು ಕಾರ್ಮಿಕರು ಅಸುನೀಗಿದರು. ಮೈಸೂರಿನಲ್ಲಿ ಸತ್ಯಾಗ್ರಹದ ವಿಧಾನವನ್ನು ಬದಲಾಯಿಸಿ ಹೆಣ್ಣುಮಕ್ಕಳ ಜಾಥಾಗಳನ್ನು ಸಿದ್ಧಪಡಿಸಲಾಯಿತು. ೧–೯–೧೯೪೨ರಂದು ಮಲ್ಲೇಶ್ವರದಲ್ಲಿ ಹೆಣ್ಣುಮಕ್ಕಳ ಪ್ರೌಢಶಾಲೆಯ ಬಳಿ ಲಾಠಿ ಚಾರ್ಜ್ ಆಯಿತು. ೭–೧೦–೧೯೪೨ ರಂದು ಹೆಣ್ಣುಮಕ್ಕಳ ಮೆರವಣಿಗೆಯೊಂದನ್ನು ಪೊಲೀಸರು ತಡೆದರು. ೯ ವಿದ್ಯಾರ್ಥಿನಿಯರ ದಸ್ತಗಿರಿ ಆಯಿತು. ಸರ್ಕಾರದ ವರ್ತನೆಗೆ ಹೇಸಿ, ಬೇಸತ್ತು ಹಲವಾರು ಪ್ರಾಧ್ಯಾಪಕರು, ಇಂಜಿನಿಯರ್, ವಿಜ್ಞಾನಿಗಳು ತಮ್ಮಕೆಲಸಕ್ಕೆ ರಾಜೀನಾಮೆ ನೀಡಿ ಚಳವಳಿಯಲ್ಲಿ ಪಾಲ್ಗೊಂಡರು.

ಲಕ್ಷಾಂತರ ಸ್ವಾತಂತ್ರ್ಯ ಹೋರಾಟಗಾರರ ನಿಸ್ವಾರ್ಥ ತ್ಯಾಗ ಬಲಿದಾನದ ಪರಿಣಾಮವಾಗಿ ಆಗಸ್ಟ್ ೧೫, ೧೯೪೭ರಂದು ಭಾರತ ಸ್ವತಂತ್ರವಾಯಿತು.



## ಮೈಸೂರು ಚಲೋ

೧೯೪೭ರಲ್ಲಿ ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕಿದ ಮೇಲೂ ಮೈಸೂರು ಸಂಸ್ಥಾನವು ಭಾರತದೊಂದಿಗೆ ವಿಲೀನವಾಗಿರಲಿಲ್ಲ. ಮೈಸೂರು ಸಂಸ್ಥಾನವು ಅಕ್ಟೋಬರ್ ೨೪ರ ಒಳಗೆ ವಿಲೀನವಾಗುತ್ತೇವೆಂದು ಹೇಳಿದರೂ ಅದು ನಡೆದಿರಲಿಲ್ಲ. ಜನರು ಪ್ರಜಾಪ್ರಭುತ್ವಕ್ಕೆ ಪಟ್ಟು ಹಿಡಿದು, ಮೈಸೂರು ಸಂಸ್ಥಾನವು ಭಾರತದೊಂದಿಗೆ ವಿಲೀನವಾಗಬೇಕೆಂದು ಸೆಪ್ಟೆಂಬರ್ ೧೪ರ ಗಡುವು ನೀಡಿದರು. ಕಾಂಗ್ರೆಸ್ ಪಕ್ಷದ ನಾಯಕರು "ಮೈಸೂರಿಗೆ ನಡೆಯಿರಿ; ಮೈಸೂರು ಚಲೋ" ಎಂದು ಕರೆ ನೀಡಿದರು. ಸಾವಿರಾರು ಮಂದಿ ತಮ್ಮ ಊರು, ಹಳ್ಳಿಗಳಿಂದ ಮೈಸೂರಿನತ್ತ ಹೊರಟರು. ಮೈಸೂರಿನ ಅರಮನೆಯ ಮುಂದೆ ಧರಣಿ ಸತ್ಯಾಗ್ರಹ ಮಾಡಬೇಕೆಂದು ಜನರ ಬಯಕೆಯಾಗಿತ್ತು. ೧–೯–೧೯೪೭ ರಿಂದ ಹಿಡಿದು ಅಕ್ಟೋಬರ್ ೨೪ ರ ವರೆಗೆ ಮೈಸೂರು ಚಲೋ ಆಂದೋಲನ ನಡೆಯಿತು.

ರಾಮನಗರದ ಕೆ.ಸುಬ್ಬರಾಯರನ್ನು ಬಿಡದಿಯಲ್ಲಿ ದಸ್ತಗಿರಿ ಮಾಡಿ ಒಂದು ತಿಂಗಳು ಬೆಂಗಳೂರು ಸೆಂಟ್ರಲ್ ಜೈಲಿನಲ್ಲಿ ಇಟ್ಟಿದ್ದರು. ಸಿ.ಎಂ.ವೆಂಕಟಪ್ಪನವರನ್ನು ರಾಮನಗರದಲ್ಲಿ ಬಂಧಿಸಿ ಕೆಲಕಾಲ ಡಂಕಣಿಕೋಟೆ, ಹೊಸಕೋಟೆ ಕಸ್ಟಡಿಯಲ್ಲಿ ಇಟ್ಟಿದ್ದರು. ಇನ್ನೊಮ್ಮೆ ಚನ್ನಪಟ್ಟಣ, ಕಾನಕಾನಹಳ್ಳಿಯವರ ಜೊತೆ ಬಂಧಿಸಿ ಕೋಲಾರ ಜಿಲ್ಲೆಯ ಕಗ್ಗಾಡಿನಲ್ಲಿ ರಾತ್ರಿ ಬಿಟ್ಟರು. ಕೆಲವರು ಕೋಲಾರಕ್ಕೆ ಹೋಗಿ ಸಭೆ ನಡೆಸಿದರು. ವಿ.ಗಿರಿಯಪ್ಪನವರನ್ನು ಬಂಧಿಸಿ ೨ ತಿಂಗಳ ಜೈಲು ಶಿಕ್ಷೆ ಆಗಿತ್ತು. ಆದರೆ ಅದರ ಮುಂಚೆಯೇ ಬಿಡುಗಡೆಯೂ ಆಯಿತು. ಕನಕಪುರದ ಶೀನಪ್ಪ ಹಾಗು ಅವರ ಜೊತೆ ಇದ್ದ ೩೦ ಮಂದಿಯನ್ನು ಕನಕಪುರದ ರಸ್ತೆಯಲ್ಲಿ ದಸ್ತಗಿರಿ ಮಾಡಿ ಹೊಸಕೋಟೆ ತಾಲ್ಲೂಕಿನ ನಂದಗುಡಿಯಲ್ಲಿ ಬಿಟ್ಟರು. ಆ ರಾತ್ರಿ ಆ ಹಳ್ಳಿಯಲ್ಲೂ ಭಾಷಣ ಮಾಡಿದ್ದರಿಂದ ೧೨ ಗಂಟೆ ರಾತ್ರಿಯಲ್ಲಿ ಪುನಃ ದಸ್ತಗಿರಿ ಮಾಡಿ ಲಾರಿಯಲ್ಲಿ ತುಂಬಿಕೊಂಡು ಮೈಲಿಗೊಬ್ಬರಂತೆ ಬಿಡುತ್ತ ಬಂದರು. ಆ ರಾತ್ರಿ ಬಿಟ್ಟ ತಂಡದವರೆಲ್ಲ ಬಹಳ ಕಷ್ಟಪಡುತ್ತಾ ಹೊಸಕೋಟೆಯಲ್ಲಿ ಸೇರಿ ಮತ್ತೆ ಪ್ರಚಾರಭಾಷಣ ಮಾಡಿದರು. ಈ ತಂಡಕ್ಕೆ ಕನಕಪುರದ

ಕೆ.ಎನ್.ನರಸಿಂಹಶಾಸ್ತ್ರಿಗಳು ನಾಯಕರಾಗಿದ್ದರು. ಮಾಗಡಿಯಿಂದ ಶಿವರಾಂ ಸಿಂಗ್ ಮತ್ತು ಎ.ಕೆ.ಭಾರದ್ವಾಜ ನಾಯಕತ್ವದಲ್ಲಿ ಜಾಥಾ ನಡೆಯಿತು. ಈ ತಂಡದಲ್ಲಿ ಸುಮಾರು ೨೦ ಮಂದಿ ಸಣ್ಣಪುಟ್ಟ ಬಾಲಕರೂ ಉತ್ಸಾಹದಿಂದ ಸೇರಿದರು. ಮಂಡ್ಯ, ಶ್ರೀರಂಗಪಟ್ಟಣ ಮಾರ್ಗವಾಗಿ ಬಹಿರಂಗ ಸಭೆಗಳನ್ನು ನಡೆಸುತ್ತ ಜನಜಾಗೃತಿ ಉಂಟುಮಾಡುತ್ತ ಮುಂದೆ ಸಾಗಿದರು. ಶ್ರೀರಂಗಪಟ್ಟಣದಲ್ಲಿ ಜಿಲ್ಲಾಧಿಕಾರಿಗಳು ರಾತ್ರಿ ೨ ಗಂಟೆಗೆ ಎಲ್ಲರನ್ನೂ ಬಂಧಿಸಿದರು.

ಜನಾಂದೋಲನಕ್ಕೆ ಮಣಿದು ಮೈಸೂರು ಮಹಾರಾಜರು ಸಂಸ್ಥಾನವನ್ನು ೨೪.೧೦.೧೯೪೭ ರಂದು ಭಾರತ ಸರ್ಕಾರದೊಂದಿಗೆ ವಿಲೀನ ಮಾಡಿದರು. ಪ್ರಜಾಪ್ರಭುತ್ವದ ಮೊದಲ ಸರ್ಕಾರ ಕೆ.ಸಿ.ರೆಡ್ಡಿ ನೇತೃತ್ವದಲ್ಲಿ ೨೭.೧೦.೧೯೪೭ ರಂದು ಅಸ್ತಿತ್ವಕ್ಕೆ ಬಂದಿತು.

❑

# ೮. ಸ್ವಾತಂತ್ರ್ಯದ ಬೇವು–ಬೆಲ್ಲ

ಅಜ್ಜನು ತನ್ನ ಮಾತನ್ನು ಮುಗಿಸಿ ಸೋಮುವಿನತ್ತ ನೋಡಿದನು.

ಸೋಮು ಏನೂ ಮಾತನಾಡದೆ ಕುಳಿತಿದ್ದನು. ಓತಪ್ರೋತವಾಗಿ ಅಜ್ಜನ ವಾಗ್ಝರಿಯಿಂದ ಹರಿದ ಭಾರತದ ಸ್ವಾತಂತ್ರ್ಯ ಸಂಗ್ರಾಮದ ಕಥನ ಮನದಾಳಕ್ಕೆ ಇಳಿಯುತ್ತಿತ್ತು.

"ಸಾಮಿ.." ಎಂದು ಅಜ್ಜನು ಸೋಮುವನ್ನು ತಟ್ಟಿದನು.

ದಿಗಂತದತ್ತ ನೆಟ್ಟ ದೃಷ್ಟಿಯು ಅಜ್ಜನತ್ತ ತಿರುಗಿತು. ಪ್ರಜ್ಞೆ ವಾಸ್ತವಕ್ಕೆ ಬಂದಿತು. "ಹಾಂ..?" ಎಂದನು ಸೋಮು. ನಂತರ ಸಾವರಿಸಿಕೊಂಡು "ಅಜ್ಜ.. ನಮ್ಮ ನಾಡಿನಲ್ಲಿ, ಅದೂ ಇಲ್ಲಿ ರಾಮನಗರದಲ್ಲಿ ಇಷ್ಟೆಲ್ಲ ನಡೆದಿತ್ತು ಎಂದು ನಂಬಲಾಗುತ್ತಿಲ್ಲ. ಇದೇಕೆ ನಮಗೆ ಇದರ ಬಗ್ಗೆ ಏನೂ ಗೊತ್ತಿಲ್ಲ? ನನಗೇ ಬೇಸರ, ಹೇಸಿಗೆಯಾಗುತ್ತಿದೆ" ಎಂದ ಭಾರವಾದ ಹೃದಯದಿಂದ. ಮುಂದುವರಿಸಿ, "ಆಮೇಲೆ, ಆ ಹೋರಾಟ ಮಾಡಿದವರಿಗೆಲ್ಲ ಸಂತೋಷ ಆಗಿರಬೇಕಲ್ಲ? ಜನರಿಗೆಲ್ಲ ನ್ಯಾಯ ಸಿಕ್ಕಿತಲ್ಲವೇ?" ಎಂದು ಕೇಳಿದ ಆಶಾಪೂರಿತ ಕಣ್ಣುಗಳಿಂದ.

"೧೯೪೭ ರಂದು ಭಾರತಕ್ಕೇನೋ ಸ್ವಾತಂತ್ರ್ಯ ಬಂದಿತು. ಆದರೆ ಬ್ರಿಟಿಷರ ಕುಟಿಲತೆಯಿಂದ, ಮುಸ್ಲಿಂ ಲೀಗ್ ಅವರ ಮತಾಂಧತೆಯಿಂದ ಭಾರತ ಇಬ್ಭಾಗವಾಯಿತು. ಯುಗಯುಗಗಳಿಂದ ಪೂಜಿಸಿಕೊಂಡು ಬಂದ ಸಿಂಧೂ ನದಿಯು ಪರಕೀಯವಾಯಿತು. ಶ್ರೀರಾಮಚಂದ್ರನ ಮಗನು ಆಳಿದ ಲವಪುರ, ಕಂಬವನ್ನು ಸೀಳಿ ಹೊರಬಂದು ಹಿರಣ್ಯಕಶಿಪುವನ್ನು ಕೊಂದ ಮೂಲಸ್ಥಾನ, ಢಾಕಾ ನಗರದ ಢಾಕೇಶ್ವರಿ, ನೀನು ಓದುತ್ತಿದ್ದ ಸೂರ್ಯ ಸೇನ್ ಹೋರಾಡಿದ

ತ್ಯಾಗಭೂಮಿ ಚಿತ್ತಗಾಂಗ್, ಇವೆಲ್ಲವೂ ಪರಕೀಯವಾಯಿತು. ಲಕ್ಷಾಂತರ ಜನ ವಲಸೆ ಹೋದರು. ಕಂಡುಕೇಳರಿಯದ ಕೊಲೆ, ದೌರ್ಜನ್ಯಗಳು ನಡೆದವು. ಸಾವಿರಾರು ಜನ ಪ್ರಾಣ ಕಳೆದುಕೊಂಡರು, ಅನಾಥರಾದರು, ಪರಕೀಯರಾದರು. ಹೊತ್ತುರಿದ ಕೋಮುದ್ವೇಷ ಕೊನೆಗೆ ಮಹಾತ್ಮ ಗಾಂಧೀಜಿಯವರನ್ನೇ ಬಲಿಪಡೆದುಕೊಂಡಿತು.

ಸ್ವಾತಂತ್ರ್ಯ ಬಂದ ನಂತರ ಸರ್ಕಾರಗಳು ರೈತರಿಗೆ, ಕಾರ್ಮಿಕರಿಗೆ, ಆದಿವಾಸಿಗಳಿಗೆ, ಹರಿಜನರ ಕಲ್ಯಾಣಕ್ಕೋಸ್ಕರ ಹಲವಾರು ಯೋಜನೆಗಳನ್ನು ಹೊರತಂದವು, ಅನುಷ್ಠಾನಗೊಳಿಸಿದವು. ಸಮಯ ಕಳೆದಂತೆ ಸರ್ಕಾರೀ ಆಡಳಿತದಲ್ಲಿ, ಸಂಸ್ಥೆಗಳಲ್ಲಿ ಅಶಿಸ್ತು, ಭ್ರಷ್ಟಾಚಾರ ಹೊಕ್ಕಿತು. ಹೇಗಾದರೂ ಸರಿಯೇ, ಹೆಚ್ಚು ದುಡ್ಡು ಮಾಡಬೇಕು ಎನ್ನುವ ಹಪಾಹಪಿ ಹೆಚ್ಚಿತು. ನಾವೂ ಸ್ವಾತಂತ್ರ್ಯ ಹೋರಾಟದಲ್ಲಿದ್ದೆವು ಎಂದು ಸುಳ್ಳು ಪತ್ರ, ಪ್ರಮಾಣ ನೀಡಿ ಮಾಶಾಸನ ತೆಗೆದುಕೊಂಡವರೂ ಇದ್ದರು. ಸ್ವಾತಂತ್ರ್ಯಕ್ಕೆ ಮೊದಲು ಅನಿಷ್ಟಕ್ಕೆಲ್ಲ ಶನೇಶ್ವರ ಕಾರಣವೆಂಬಂತೆ ಎಲ್ಲದಕ್ಕೂ ಕೈ ತೋರಿಸಲು ಬ್ರಿಟಿಷ್ ಸರ್ಕಾರವಿತ್ತು. ಸ್ವಾತಂತ್ರ್ಯದ ನಂತರ? ನಮ್ಮದೇ ಜನ, ನಮ್ಮದೇ ಅಧಿಕಾರ. ಆದರೂ ಅದೇ ದುರಾಡಳಿತ. ಕುವೆಂಪು ಹೇಳಿದಂತೆ, **"ಕತ್ತಿ ಪರದೇಶಿಯದಾದರೆ ಮಾತ್ರ ನೋವೇ? ನಮ್ಮವರೇ ಹದ ಹಾಕಿ ತಿವಿದರದು ಹೂವೆ?"** ಎಂದು ಹೇಳಿ ಅಜ್ಜನು ಗಹಗಹಸಿ ನಕ್ಕನು.

ತತ್ ಕ್ಷಣ ಗಂಭೀರವದನನಾಗಿ ಅಜ್ಜನು ಹೇಳಿದನು "೧೯೨೩ರಲ್ಲಿ ಗಾಂಧೀಜಿಯವರನ್ನು ರಾಮನಗರಕ್ಕೆ ಕರೆತಂದದ್ದು ಕೃಷ್ಣಯ್ಯ ಎಂಬುವವರು. ಕೃಷ್ಣಯ್ಯ ಮಾಸ್ತರು ಎಂದು ಎಲ್ಲರೂ ಕರೆಯುತ್ತಿದ್ದರು. ಆ್ಯನ್ನಿ ಬೆಸಂಟ್ ಅವರ ಹೋಂ ರೂಲ್ ಚಳವಳಿಯಲ್ಲಿ ಭಾಗವಹಿಸಿದವರು ಕಡೆಗೆ ರಾಷ್ಟ್ರಸೇವೆಗೋಸ್ಕರ ತಮ್ಮ ವೃತ್ತಿಗೆ ರಾಜೀನಾಮೆ ನೀಡಿದರು. ೧೯೨೩ರಲ್ಲಿ ಗಾಂಧೀಜಿ, ಮೊಹಮದ್ ಅಲಿ ಜಿನ್ನಾ, ಶೌಕತ್ ಅಲಿ ಅವರನ್ನು ರಾಮನಗರಕ್ಕೆ ಕರೆತಂದದ್ದು ಇವರೇ. ಆದರೆ ಇಂದಿಗೂ ಜಿಲ್ಲೆಯಲ್ಲಿ ಇವರ ಹೆಸರಿನ ಒಂದು ರಸ್ತೆ, ವೃತ್ತ ಯಾವುದೂ ಇಲ್ಲ. ಹಾಗೆಯೇ ಗಾಂಧೀಜಿ ರಾಮನಗರಕ್ಕೆ ಎರಡು ಬಾರಿ ಭೇಟಿ ನೀಡಿದ ಕುರುಹಾಗಿ ಚನ್ನಪಟ್ಟಣದಲ್ಲೊಂದು ಗಾಂಧಿ ಭವನ ನಿರ್ಮಾಣ ಮಾಡಿದ್ದರು, ಇಂದು ಅದು ಶಿಥಿಲಾವಸ್ಥೆಯಲ್ಲಿದೆ. ದಂಡಿನಮಾರಮ್ಮನ





ದೇವಾಲಯದ ಬಳಿ ಇರುವ ಕಲ್ಲನ್ನು ಜನರು ಇಂದಿಗೂ 'ಗಾಂಧಿ ಕಲ್ಲು' ಎಂದು ಕರೆಯುತ್ತಾರೆ. ಜೊತೆಗೆ ಭಜನಾ ಮಂಟಪವಿದೆ. ಇವುಗಳನ್ನೆಲ್ಲ ಸ್ಮಾರಕಗಳಾಗಿ ಮಾಡಬೇಕು ಎನ್ನುವುದು ಸಾರ್ವಜನಿಕರ ಒತ್ತಾಸೆ. ಹಲವು ಸಂಶೋಧಕರು ಇವನ್ನು ಗುರುತಿಸಿ ಜಿಲ್ಲಾಡಳಿತವನ್ನು ಎಚ್ಚರಿಸಲು ಪ್ರಯತ್ನಪಡುತ್ತಿದ್ದಾರೆ. ಆದರೆ ಆಡಳಿತವು ಇಂತಹ ಸ್ಮಾರಕಗಳನ್ನು ರಕ್ಷಿಸಲು ವಿಫಲವಾಗಿವೆ"

ಅಸ್ತಮಿಸುತ್ತಿರುವ ಸೂರ್ಯನನ್ನು ನೋಡುತ್ತಾ ಅಜ್ಜನು ಕಣ್ಣುಮುಚ್ಚಿ ಕುಳಿತನು. "ಸಾಮಿ, ನಾವಿಂದು ಹೊಟ್ಟೆಬಟ್ಟೆಗಳ ಯೋಚನೆಯಿಲ್ಲದೆ ಸಂತೋಷದಿಂದ ಇರುವುದು, ಲಕ್ಷಾಂತರ ಜನ ಸ್ವಾತಂತ್ರ್ಯ ಹೋರಾಟಗಾರರ ತ್ಯಾಗದಿಂದ. ನಮ್ಮ ಜೀವನವು ಆನಂದಮಯವಾಗಿರಲು, ಅವರು ತಮ್ಮ ಜೀವನವನ್ನೇ ತೇಯ್ದರು, ಮುಡುಪಾಗಿಟ್ಟರು. ಇದಕ್ಕೆರೆಡು ಘಟನೆಗಳನ್ನು ಹೇಳುತ್ತೇನೆ, ಕೇಳು. ರಾಮನಗರದ ಈಶ್ವರ್ ರಾಯರ ಕಸುಬು ಹೊಲಿಗೆ.

ಇವರು ಜೈಲಿನಲ್ಲಿ ಇದ್ದಾಗ ಇವರ ಸಾಲದ ಬಾಕಿ ೧೧ ರೂಪಾಯಿಗೆ ಇವರ ಹೊಲಿಗೆ ಯಂತ್ರವನ್ನು ಹರಾಜು ಹಾಕಿದರು. ಅವರ ಮಿತ್ರ ಚಿಕ್ಕಭದ್ರೇಗೌಡರು ಅದನ್ನು ಕೊಂಡು ಜೈಲಿನಿಂದ ಬಂದ ಮೇಲೆ ಕೊಂಡ ಬೆಲೆಗೇ ಇವರಿಗೆ ಮರಳಿ ಕೊಟ್ಟರು. ಆದರೂ ಮಿಕ್ಕ ೧೫೦ ರೂಪಾಯಿ ಸಾಲಕ್ಕೆ ಇದನ್ನು ಮತ್ತೆ ಮಾರಬೇಕಾಯಿತು. ಜೀವನೋಪಾಯಕ್ಕಾಗಿ ಮನೆಯ ಮಂದಿಯೆಲ್ಲ ಕೂಲಿ ಮಾಡಬೇಕಾಗಿ ಬಂದಿತು..

ಇನ್ನು ಮಾಗಡಿಯ ಶಿವರಾಂ ಸಿಂಗ್. ಇವರು ಹೋರಾಟ ಮಾಡುವಾಗ ಜೀವನಾಧಾರವಾಗಿದ್ದ ಜಮೀನನ್ನು ಕಂದಾಯದ ಬಾಕಿಗಾಗಿ ಸರ್ಕಾರದವರು ಹರಾಜು ಮಾಡಿ ಮಾಗಡಿ ಟೌನ್ ಕೋ–ಆಪರೇಟಿವ್ ಸೊಸೈಟಿಗೆ ಒಳಪಡಿಸಿದರು. ಏಳೆಂಟು ವರ್ಷಗಳು ಅವರು, ಮತ್ತವರ ತಾಯಿ ಹೊಟ್ಟೆಬಟ್ಟೆಗಳಿಲ್ಲದೆ ತೊಳಲಿದರು. ಹಲವಾರು ವರ್ಷ ಜೀವನೋಪಾಯಕ್ಕೇನೂ ಇಲ್ಲದೆ ತುತ್ತು ಊಟಕ್ಕೂ ಯೋಚನೆಪಡುವ ಪರಿಸ್ಥಿತಿಯಲ್ಲಿದ್ದರು ಶಿವರಾಂ ಸಿಂಗ್.

ನೋಡು ಸಾಮಿ.. ತುತ್ತು ಊಟಕ್ಕೂ ಪರದಾಟ ನಡೆಯುತ್ತಿದ್ದರೂ ಇವರಾರೂ ಸ್ವಾತಂತ್ರ್ಯ ದೀಕ್ಷೆ ಬಿಡಲಿಲ್ಲ. ಮತ್ತೆ ಮತ್ತೆ ಹೋರಾಟದ ಅಗ್ನಿಕುಂಡಕ್ಕೆ ಧುಮುಕಿದರು.. ಇಂತಹವರನ್ನು ನಾವೆಂದೂ ಮರೆಯಕೂಡದು" ಎಂದು ಹೇಳಿ ಅಜ್ಜನು ನಿಂತುಕೊಂಡನು. ಬಂಡೆಯ ತುತ್ತತುದಿಯತ್ತ ಹೋಗಿ ನಿಂತು ಎರಡೂ ಕೈಗಳನ್ನು ಮೇಲೆತ್ತಿ "ನಿಮಗಿದೋ ನಮೋ" ಎಂದು ಕೈ ಮುಗಿದನು.

ಹಿಂದೆಯೇ ನಿಂತಿದ್ದ ಸೋಮುವಿನ ಕಣ್ಣು ತೇವವಾಯಿತು. ತನಗರಿವಿಲ್ಲದೆಯೇ ಕಣ್ಣಿನ ಹನಿಗಳು ಕೆನ್ನೆಯಮೇಲೆ ಬಿದ್ದವು.

ಕುಳ್ಳನು "ಗುರುಗೋಳೇ!" ಎಂದು ಕೂಗಿದ.. ಅಜ್ಜನು ಹಿಂತಿರುಗಿದನು. ಸೋಮುವನ್ನು ತೋರಿಸುತ್ತ "ಕರಗ್ತು! ಕಲ್ಲು ಕರಗ್ತು!" ಎಂದ ಸಂತೋಷದಿಂದ.

ಅಜ್ಜನು ಸೋಮುವಿನ ಹತ್ತಿರ ಬಂದನು. ಸೋಮು ಕಣ್ಣೀರನ್ನು ಒರೆಸಿಕೊಳ್ಳುತ್ತ "ನೀವು ಯಾರು? ನಿಮ್ಮ ಹೆಸರೇನು?" ಎಂದು ಕೇಳಿದ.

ಅಜ್ಜನು ಸೋಮುವಿನ ಹೆಗಲ ಮೇಲೆ ಕೈ ಇಟ್ಟು "ಹೆಸರು! ಹೆಸರಲ್ಲೇನಿದೆ?



ಕಸುರು ಬೀಸುವ ಗಾಳಿ! ನಿನಗೇಕೆ ಹಸೆಯೊಂದು ಬ್ರಹ್ಮಪುರಿಯೊಳಗೆ?" ಎಂದು ನಕ್ಕು "ನಾವು! ಸಸಿ ನೆಡೋರು ಸಾಮಿ.. ಕಲ್ಲು ಕರಗಿದ ಮೇಲೆ ಸಸಿ ನೆಡೋರು" ಎಂದು ಹೇಳಿ ಮೆಟ್ಟಿಲುಗಳತ್ತ ದಾಪುಗಾಲು ಹಾಕುತ್ತ ಇಬ್ಬರೂ ಹಿಂತಿರುಗದೆ ಹೊರಟರು. ಒಂದೆರಡು ನಿಮಿಷಗಳು ಅಜ್ಜನು ಹೋಗಿದ್ದ ಹಾದಿಯನ್ನೇ ನೋಡುತ್ತಾ ನಿಂತ ಸೋಮು. ಮತ್ತೆ ಹಿಂತಿರುಗಿ ಬಂಡೆಯತ್ತ ಬಂದ. ಬೆಟ್ಟದ ತುತ್ತತುದಿಯನ್ನು ಹತ್ತಿ ನಿಂತನು. ಸೂರ್ಯಾಸ್ತವಾಗುತ್ತಾ ಕತ್ತಲಾಗುತ್ತಿದ್ದಂತೆ ರಾಮನಗರದ ಸಣ್ಣಪುಟ್ಟ ಹಳ್ಳಿಗಳಲ್ಲಿ ದೀಪಗಳು ಜಿನುಗತೊಡಗಿದವು. ಸೋಮು ಎರಡೂ ಕೈಗಳನ್ನು ಮೇಲೆತ್ತಿ ನಿಂತನು. "ನಿಮಗಿದು ನಮೋ" ಎಂದು ಕೈ ಮುಗಿದನು.

ಬೆಟ್ಟದ ಮೆಟ್ಟಿಲುಗಳಿಂದ ಹಾಡೊಂದು ಹೊಮ್ಮಿತು.

> **"ಓ! ಸತ್ತವರ ಕರೆಯು ಓ ಕೂಗುತಿದೆ.. ಅದೋ ಕೇಳು..**
> **ಸತ್ತವರ ಕರೆಯು ಓ ಕೂಗುತಿದೆ.. ಅದೋ ಕೇಳು..**
> **ಭೂತಕಾಲದ ಗರ್ಭ ಗೋರಿಯಿಂದ**
> **ಆಲಿಸಿಯು ಅದನ್ನು ಸುಮ್ಮನಿರುವೆಯ ಹೇಳು.. ದೇಶ ಮಾತೆಯು**
> **ಹಡೆದ ವೀರಕಂದ.."**

ತಮಟೆಯ ಶಬ್ದ ಪ್ರಶಾಂತತೆಯ ನೀರವತೆಯನ್ನು ಚೀರಿ ಹೊರಟಿತು.. ತಮೋನಿದ್ರೆಯಿಂದ ಎಲ್ಲರನ್ನೂ ಎಚ್ಚರಿಸುವಂತೆ..

**ಢಣ್! ಢಣ್! ಢಣ್! ಢಣ್!**

**ಢಣ್! ಢಣ್!**

❑

## ಗ್ರಂಥ ಋಣ


**೧. ಪೂರ್ವಚರಿತ**

- ಅರುಣಿ.ಎಸ್.ಕೆ, ೨೦೧೯, ಬೆಂಗಳೂರು ಪರಂಪರೆ – ಇತಿಹಾಸ ಸಂಶೋಧನೆಯ ಹೊಸ ಪುಟಗಳು, ಪು.೩
- ಸುಂದರರಾವ್.ಬ.ನ, ೨೦೧೫, ಬೆಂಗಳೂರಿನ ಇತಿಹಾಸ, ಪು ೨೭, ೫೩
- ಸೂರ್ಯನಾಥ್ ಕಾಮತ್, ೨೦೧೨, ಇತಿಹಾಸದ ಆಚೆಈಚೆ, ಪು.೭೦

**೨. ಪರಕೀಯ ದಾಳಿಯ ಪರಾಕಾಷ್ಠೆ**

- ಸುಂದರರಾವ್.ಬ.ನ, ೨೦೧೫, ಬೆಂಗಳೂರಿನ ಇತಿಹಾಸ, ಪು ೧೪೧

**೩. ಕ್ಲೋಸ್ ಪೇಟೆ ನಿರ್ಮಾಣ**

- ಸುಂದರರಾಜ್.ಎಂ.ಎನ್, ೨೦೨೧, ದಿವಾನ್ ಪೂರ್ಣಯ್ಯ, ಮೈಸೂರು ರಾಜ್ಯದ ಮೊದಲ ದಿವಾನರು, ಪು. ೮೭–೮೮, ೯೬–೯೭

**೪. ಬಂಡಾಯದ ಬೀಜಗಳು**

- ಸುಂದರರಾಜ್.ಎಂ.ಎನ್, ೨೦೨೧, ದಿವಾನ್ ಪೂರ್ಣಯ್ಯ, ಮೈಸೂರು ರಾಜ್ಯದ ಮೊದಲ ದಿವಾನರು, ಪು. ೮೨, ೧೦೭–೧೦೯
- ಸುಂದರರಾವ್.ಬ.ನ, ೨೦೧೫, ಬೆಂಗಳೂರಿನ ಇತಿಹಾಸ, ಪು ೩೧೩–೩೧೪
- Indian history congress, 1992, Proceedings of the Indian history congress, Volume 53, PP 449-453
- ಸೂರ್ಯನಾಥ್ ಕಾಮತ್, ೨೦೧೨, ಇತಿಹಾಸದ ಆಚೆಈಚೆ, ಪು.೧೯೫, ೧೪೦–೧೪೫, ೨೨೨
- V. Saravanan, 2008, Economic exploitation of forest resources in south India during pre-forest act colonial era, 1793-1882, PP 65-73

**೫. ಮೈಸೂರು ಸಂಸ್ಥಾನದಲ್ಲಿ ಸ್ವಾತಂತ್ರ್ಯ ಹೋರಾಟದ ಉಗಮ**

- Hayavadana Rao. C, 1930, Mysore gazetteer, Volume 2, Modern, Part 4, PP 2903-2904
- ಸೂರ್ಯನಾಥ್ ಕಾಮತ್, ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು, ಭಾಗ ೨, ಪು.೨೭
- ಸೂರ್ಯನಾಥ್ ಕಾಮತ್, ೨೦೧೨, ಇತಿಹಾಸದ ಆಚೆಈಚೆ, ಪು.೧೯೬
- Karnataka State gazetteer, Bangalore rural district, PP 100-102

**೬. ರಾಮನಗರದ ಸ್ವಾತಂತ್ರ್ಯಹೋರಾಟ ಹಾಗೂ ಸೇನಾನಿಗಳು**

- ಸೂರ್ಯನಾಥ್ ಕಾಮತ್, ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು, ಭಾಗ ೨, ಪು.೨೪೮–೨೬೨, ೧೧೨–೧೨೯
- Karnataka State gazetteer, Bangalore rural district, PP 104-110

**೭. ಸ್ವಾತಂತ್ರ್ಯದ ಬೇವು–ಬೆಲ್ಲ**

- Karnataka State gazetteer, Bangalore rural district, PP 110- 111
- ಅಂಕಣಗಳು, ಎಸ್.ರುದ್ರೇಶ್ವರ, ಸಂಶೋಧನಾ ವಿದ್ಯಾರ್ಥಿ, ಬೆಂಗಳೂರು ವಿಶ್ವವಿದ್ಯಾಲಯ (ಗಾಂಧಿ ಕೃಷ್ಣಯ್ಯನವರನ್ನು ಮರೆತ ಜನತೆ, ಗಾಂಧಿ ಸ್ಮಾರಕ ರಕ್ಷಿಸುವಲ್ಲಿ ಜಿಲ್ಲಾಡಳಿತ ವಿಫಲ)


❖ ❖ ❖

## ಅಮೃತ ಮಹೋತ್ಸವ ಪ್ರಕಟಣೆ – ೭೫ ಕಿರುಪುಸ್ತಕಗಳ ಪಟ್ಟಿ
## ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ

| ಕ್ರಸಂ. | ಪುಸ್ತಕದ ಹೆಸರು | ಲೇಖಕರ ಹೆಸರು | ಬೆಲೆ |
|---|---|---|---|
| ೧. | ತುರುವನೂರು | ಡಾ. ಪಿ. ಯಶೋದಾ ರಾಜಶೇಖರಪ್ಪ | ೩೦/– |
| ೨. | ಚಿತ್ರದುರ್ಗ | ಡಾ. ಬಿ. ರಾಜಶೇಖರಪ್ಪ | ೩೦/– |
| ೩. | ರಾಮಸ್ವಾಮಿ ವೃತ್ತ | ಮಂಜುನಾಥ ಹೆಚ್.ಎಲ್. | ೩೦/– |
| ೪. | ಸುಬ್ಬರಾಯನ ಕೆರೆ | ಡಾ. ಇಂದಿರಾ ಬಿ.ಪಿ. | ೩೦/– |
| ೫. | ಬದನವಾಳು | ಡಾ. ಇಂದಿರಾ ಬಿ.ಪಿ. | ೩೦/– |
| ೬. | ತಗಡೂರು | ಡಾ. ಎಚ್.ಎಸ್. ಉಷಾರಾಣಿ | ೩೦/– |
| ೭. | ಶಿವಪುರ | ಡಾ. ಲಿಂಗರಾಜು | ೩೦/– |
| ೮. | ಮಂಡ್ಯ | ಡಾ. ಶಿವರಾಮು ಎಸ್. | ೩೦/– |
| ೯. | ಚಾಮರಾಜನಗರ | ಡಾ. ಸುಂದ್ರೇಶ ಎನ್. | ೩೦/– |
| ೧೦. | ಗುಂಡ್ಲುಪೇಟೆ | ಕವಿತಾ ಎ. | ೩೦/– |
| ೧೧. | ಗೊರೂರು | ಡಾ. ಯೋಗೇಶ್ ಎನ್.ಇ. | ೩೦/– |
| ೧೨. | ಅರಸೀಕೆರೆ | ಡಾ. ಮಂಜುನಾಥ ಜಿ.ಆರ್. | ೩೦/– |
| ೧೩. | ಹೊಸರಿತ್ತಿ | ಡಾ. ಹೇಮಪ್ಪ ಬ. ಕೆಂಚಳ್ಳಿ | ೩೦/– |
| ೧೪. | ಕನ್ನೇಶ್ವರ | ಡಾ. ಚಾಮರಾಜ ಕಮ್ಮಾರ | ೩೦/– |
| ೧೫. | ಚಳ್ಳಕೂಡ್ಲೂರು | ರಾಮಣ್ಣ ಹವಳೆ | ೩೦/– |
| ೧೬. | ನ್ಯಾಷನಲ್ ಹೈಸ್ಕೂಲು | ಟಿ.ಕೆ. ತಿಮ್ಮರಾಜ ಶೆಟ್ಟಿ | ೩೦/– |
| ೧೭. | ಬನಪ್ಪ ಪಾರ್ಕ್ | ರಮೇಶ ದೊಡ್ಡಪುರ | ೩೦/– |
| ೧೮. | ಮಲ್ಲೇಶ್ವರ | ಕೆ.ಎಲ್. ನಟರಾಜ್ | ೩೦/– |
| ೧೯. | ದಂಡುಪ್ರದೇಶ | ಪ್ರಮೋದ್ ನ. ಗೋ. | ೩೦/– |
| ೨೦. | ದೇವನಹಳ್ಳಿ | ಕೆ.ಆರ್. ನರಸಿಂಹನ್ | ೩೦/– |
| ೨೧. | ದೊಡ್ಡಬಳ್ಳಾಪುರ | ಡಿ.ಎಂ. ಘನಶ್ಯಾಮ | ೩೦/– |
| ೨೨. | ರಾಮನಗರ | ಎಸ್. ಶರತ್ ಚಂದ್ರ | ೩೦/– |
| ೨೩. | ಕನಕಪುರ | ಡಾ. ಎಸ್.ಎಚ್. ಭುವನೇಶ್ವರ | ೩೦/– |
| ೨೪. | ಶ್ರೀನಿವಾಸಪುರ | ಪ್ರೊ. ಕೆ.ಆರ್. ಜಯಶ್ರೀ | ೩೦/– |
| ೨೫. | ಬಂಗಾರಪೇಟೆ | ಪ್ರೊ. ಕೆ.ಆರ್. ಜಯಶ್ರೀ | ೩೦/– |
| ೨೬. | ವಿದುರಾಶ್ವತ್ಥ | ಡಾ. ಎಸ್.ಜಿ. ರಾಮದಾಸ ರೆಡ್ಡಿ | ೩೦/– |
| ೨೭. | ಈಸೂರು | ಮಾರ್ಪಳ್ಳಿ ಆರ್. ಮಂಜುನಾಥ್ | ೩೦/– |
| ೨೮. | ನಗರ(ಬಿದನೂರು) | ಚಿನ್ಮಯ ಎಂ.ಸಿ. | ೩೦/– |
| ೨೯. | ಚನ್ನಗಿರಿ | ಡಾ. ಕೆಳದಿ ವೆಂಕಟೇಶ ಜೋಯಿಸ್ | ೩೦/– |
| ೩೦. | ದಾವಣಗೆರೆ | ಸಹನಾ ಚೇತನ್ | ೩೦/– |
| ೩೧. | ಸಿಂದಗಿ | ಡಾ. ರಮೇಶ ಎಸ್. ಕತ್ತಿ | ೩೦/– |
| ೩೨. | ಮಸಬಿನಾಳ | ಶಂಕರ ಬೈಚಬಾಳ | ೩೦/– |
| ೩೩. | ಸಾರವಾಡ | ಡಾ. ಸೋಮಶೇಖರ ವಾಲಿ | ೩೦/– |
| ೩೪. | ಹಲಸಂಗಿ | ಶ್ರೀ ಸುಮಿತ್ ಮೇತ್ರಿ | ೩೦/– |

| | | | |
|---|---|---|---|
| ೩೫. | ನರಗುಂದ | ಡಾ. ನಿಂಗು ಸೊಲಗಿ | ३೦/– |
| ೩೬. | ಮುಂಡರಗಿ | ಡಾ. ಉಮೇಶ ತಿಮ್ಮಾಪುರ | ३೦/– |
| ೩೭. | ಹಲಗಲಿ | ಡಾ. ವಿಜಯಶ್ರೀ ಇಟ್ಟಣ್ಣವರ | ३೦/– |
| ೩೮. | ಬಿಸನಾಳ | ಡಾ. ವಿನಯಕುಮಾರ್ ಹಿರೇಮಠ | ३೦/– |
| ೩೯. | ಬಾಗಲಕೋಟೆ | ರಾಮ ಮನಗೂಳಿ | ३೦/– |
| ೪೦. | ಬಾದಾಮಿ | ಡಾ. ಪ್ರಕಾಶ ಗ. ಖಾಡೆ | ३೦/– |
| ೪೧. | ಸುರಪುರ | ಶ್ರೀನಿವಾಸ ಜಾಲವಾದಿ | ३೦/– |
| ೪೨. | ಕೆಂಭಾವಿ | ನಿಂಗನಗೌಡ ಹ. ದೇಸಾಯಿ | ३೦/– |
| ೪೩. | ರಾಜನಕೋಳೂರು | ರಾಘವೇಂದ್ರ ಜಹಗೀರದಾರ | ३೦/– |
| ೪೪. | ಭಾಲ್ಕಿ | ಡಾ. ರಘುಶಂಖ ಭಾತಂಬ್ರಾ | ३೦/– |
| ೪೫. | ಗೋರಟಾ | ಷ.ಬ್ರ. ಡಾ. ರಾಜಶೇಖರ ಶಿವಾಚಾರ್ಯ ಸ್ವಾಮಿಗಳು | ३೦/– |
| ೪೬. | ಕೇಂದ್ರ ಮೈದಾನ | ಡಾ. ವಸಂತಕುಮಾರ್ ಪೆರ್ಲ | ३೦/– |
| ೪೭. | ರಾಮಶಾಲಾ ಬಯಲು | ರಾಮಣ್ಣ ಹವಳೆ | ३೦/– |
| ೪೮. | ಉಳ್ಳಾಲ | ಡಾ. ಜ್ಯೋತಿ ಚೇಳ್ಯಾರು | ३೦/– |
| ೪೯. | ಅಮರಸುಳ್ಯ | ಸಹನಾ ಕಾಂತಬೈಲು | ३೦/– |
| ೫೦. | ಅಜ್ಜರಕಾಡು ಮೈದಾನ | ಡಾ. ಪೃಥ್ವೀರಾಜ ಕವತ್ತಾರು | ३೦/– |
| ೫೧. | ಬಸರೂರು–ಕುಂದಾಪುರ | ಮಂಜುನಾಥ್ ಚಾಂದ್ | ३೦/– |
| ೫೨. | ಪೊನ್ನಂಪೇಟೆ | ಸೊಮೆಯಂಡ ಕೌಸಲ್ಯ ಸತೀಶ್ | ३೦/– |



| | | | |
|---|---|---|---|
| ೫೩. | ಮಡಿಕೇರಿ | ಪ್ರೊ. ಕೆ.ಆರ್. ದೀಕ್ಷಿತ್ | ३೦/– |
| ೫೪. | ಅಜ್ಜಂಪುರ | ಚಿ.ಸ. ಪ್ರಭುಲಿಂಗ ಶಾಸ್ತ್ರಿ | ३೦/– |
| ೫೫. | ಚಿಕ್ಕಮಗಳೂರು | ಚಿ.ಸ. ಪ್ರಭುಲಿಂಗ ಶಾಸ್ತ್ರಿ | ३೦/– |
| ೫೬. | ಕಲಬುರಗಿ | ಡಾ. ಶಂಭುಲಿಂಗವಾಣಿ | ३೦/– |
| ೫೭. | ಮುಧೋಳ–ಸೇಡಂ | ಮುಡಬಿ ಗುಂಡೇರಾವ | ३೦/– |
| ೫೮. | ಅಂಕೋಲಾ | ಶಾಂತಾರಾಮ ನಾಯಕ | ३೦/– |
| ೫೯. | ಶಿರಸಿ | ಪದ್ಮಾಕರ ಮಡಗಾಂವಕರ | ३೦/– |
| ೬೦. | ಕಾರವಾರ | ಡಾ. ಉದಯ ಶಂಕರ ಪುರಾಣಿಕ | ३೦/– |
| ೬೧. | ಬಳ್ಳಾರಿ | ಡಾ. ಮೃತ್ಯುಂಜಯ ರುಮಾಲೆ | ३೦/– |
| ೬೨. | ಹೊಸಪೇಟೆ | ಡಾ. ಮೃತ್ಯುಂಜಯ ರುಮಾಲೆ | ३೦/– |
| ೬೩. | ಕೊಟ್ಟೂರು | ಡಾ. ಮೃತ್ಯುಂಜಯ ರುಮಾಲೆ | ३೦/– |
| ೬೪. | ಕೂಡ್ಲಿಗಿ | ಡಾ. ಕೆ. ಸತೀಶ | ३೦/– |
| ೬೫. | ಕಿತ್ತೂರು | ಪ್ರಕಾಶ ಗಿರಿಮಲ್ಲನವರ | ३೦/– |
| ೬೬. | ಹುದಲಿ | ಪ್ರಕಾಶ ಗಿರಿಮಲ್ಲನವರ | ३೦/– |
| ೬೭. | ಬೆಳಗಾವಿ | ಪ್ರಕಾಶ ಗಿರಿಮಲ್ಲನವರ | ३೦/– |
| ೬೮. | ಹುಲಕುಂದ | ಪ್ರಕಾಶ ಗಿರಿಮಲ್ಲನವರ | ३೦/– |
| ೬೯. | ಬೆಂಗೇರಿ | ಪ್ರಕಾಶ ಗಿರಿಮಲ್ಲನವರ | ३೦/– |
| ೭೦. | ಕೊಪ್ಪಳ | ಮಹೇಶ ಬಳ್ಳಾರಿ | ३೦/– |

| | | | |
|---|---|---|---|
| ೭೧. | ಗಂಗಾವತಿ | ರಮೇಶ ಸಿ. ಬನ್ನಿಕೊಪ್ಪ | ೩೦/– |
| ೭೨. | ಅಳವಂಡಿ | ಡಾ. ಪ್ರಕಾಶ ಬಳ್ಳಾರಿ | ೩೦/– |
| ೭೩. | ತುಮಕೂರು | ಡಾ. ಬಿ. ನಂಜುಂಡಸ್ವಾಮಿ | ೩೦/– |
| ೭೪. | ಮಧುಗಿರಿ | ಡಾ. ಬಿ. ನಂಜುಂಡಸ್ವಾಮಿ | ೩೦/– |
| ೭೫. | ತಾವರೆಕೆರೆ | ಪ್ರೊ. ಕೆ. ಪುಟ್ಟರಂಗಪ್ಪ | ೩೦/– |